# ಪ್ರಸಾದ
ಮಾಸಿಕ

ಸಂಪುಟ 39 ಸಂಚಿಕೆ 7 ಜುಲೈ 2024



ಜೆಎಸ್ಎಸ್ ಮಹಾವಿದ್ಯಾಪೀಠ, ಮೈಸೂರು




ಬೆಂಗಳೂರಿನಲ್ಲಿ ಮಾದೇನಹಳ್ಳಿ ಮಲ್ಲಿಕಾರ್ಜುನಯ್ಯ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ 'ಸಜ್ಜನಿಕೆಯ ಸಾಕಾರಮೂರ್ತಿ ಮಾದೇನಹಳ್ಳಿ ಮಲ್ಲಿಕಾರ್ಜುನಯ್ಯ' ಕೃತಿ ಲೋಕಾರ್ಪಣೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಪರಮಪೂಜ್ಯ ಜಗದ್ಗುರುಗಳವರು ಆಶೀರ್ವಚನ ನೀಡುತ್ತಿರುವುದು. ಡಾ. ಗೊರುಚ, ಡಾ. ಕೆ. ಉಲ್ಲಾಸ್ ಕಾರಂತ್, ಡಾ. ಮಾಳವಿಕಾ ಕಪೂರ್, ಸಿದ್ಧಗಂಗಾ ಶ್ರೀಗಳು, ಶ್ರೀ ಪಿ.ಜಿ.ಆರ್. ಸಿಂಧ್ಯಾ ಮೊದಲಾದವರುಗಳಿದ್ದಾರೆ (14 ಜೂನ್ 2024)

# ಪ್ರಸಾದ

ಸಂಪುಟ 39 : ಸಂಚಿಕೆ 7 ಜುಲೈ 2024

ಡಾ. ಎಂ.ಎಸ್. ನಂದೀಶ್ ಹಂಚೆ
ಸಂಪಾದಕರು

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004



ಸಂಸ್ಥಾಪಕರು

ಶ್ರೀಮನ್ಮಹಾರಾಜ ರಾಜಗುರುತಿಲಕ

**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

ಅಧ್ಯಕ್ಷರು

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**


**ಸಂಪಾದಕ ಸಲಹಾ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಡಾ. ಸಿ.ಜಿ. ಬೆಟಸೂರಮಠ
ಶ್ರೀ ಎಸ್.ಪಿ. ಮಂಜುನಾಥ್
ಡಾ. ಎನ್.ಎಸ್. ತಾರಾನಾಥ
ಡಾ. ಬಿ.ವಿ. ವಸಂತಕುಮಾರ್
ಡಾ. ವೈ.ಸಿ. ಭಾನುಮತಿ
ಪ್ರೊ. ಮೊರಬದ ಮಲ್ಲಿಕಾರ್ಜುನ

**ಸಂಪಾದಕ ಸಮಿತಿ**

ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಕುಮಾರಸ್ವಾಮಿ ವಿರಕ್ತಮಠ


---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

---

**ಮುಖಪುಟ ಚಿತ್ರ**

ಮೈಸೂರು ಶ್ರೀ ಸುತ್ತೂರು ಮಠಕ್ಕೆ ತಮಿಳುನಾಡು ಪಳನಿಯ ಶ್ರೀ ಬೋಗಾರ್ ಪಳನಿ ಆಧೀನಂ ಮಠದ ಪಾಲಾರ್ ಶ್ರೀ ಶಿವಾನಂದ ಪುಳಿಪ್ಪಾಣಿ ಪಾತಿರಕಾರ ಶ್ರೀಗಳು ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಗೌರವಿಸಿದರು (29 ಜುಲೈ 2024)


**ದಶವಾರ್ಷಿಕ : 500/- * : 10/-**

ಗುರುವಾಣಿ 5

ಸಂಪಾದಕೀಯ 7

ಭವಮಾಲೆ 10
ಶ್ರೀ ಸಿದ್ಧೇಶ್ವರ ಸ್ವಾಮಿಗಳು
(ಪ್ರವಚನಸಾರ)

ಹೊನ್ನ ಹೊರೆ 15
ಡಾ. ಎಂ.ಎನ್. ನಂದೀಶ್ ಹಂಚೆ

ಶಬರಶಂಕರ ವಿಲಾಸ–ಟೀಕು 18
ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು
(ವೀರಶೈವ ಟೀಕು ಸಾಹಿತ್ಯ ಸರಣಿ)

ಬೆಡಗಿನ ವಚನಗಳು – ಒಂದು ಅವಲೋಕನ 23
ಎಚ್.ಎಸ್. ಸಿದ್ಧಗಂಗಪ್ಪ

ಮಹಲಿಂಗದೇವ ಸಂಕಲಿತ 34
"ಅಲ್ಲಮಪ್ರಭುವಿನ ಷಟ್ಸ್ಥಲ ಟೀಕಿನ ವಚನಗಳು"
ಡಾ. ಬಿ. ನಂಜುಂಡ ಸ್ವಾಮಿ

ಸರ್ವೋದಯದ ಕನಸು ಕಂಡ ಯುಗಪುರುಷ 39
ಡಾ. ಎನ್.ಎಂ. ಗಿರಿಜಾಪತಿ

ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣನವರು 43
ನಗರ್ಲೆ ಶಿವಕುಮಾರ

ರುದ್ರಾಕ್ಷಿ : ವೈಜ್ಞಾನಿಕ ವಿಶ್ಲೇಷಣೆ 49
ಡಾ. ವಿ.ಎಚ್. ಮೂಲಿಮನಿ

ಕೊತ್ತೇಗಾಲ ಗ್ರಾಮದ ಈಶ್ವರ ದೇವಾಲಯ 57
ಡಾ. ಎಸ್.ಜಿ. ರಾಮದಾಸ ರೆಡ್ಡಿ
(ಧಾರ್ಮಿಕ ಕ್ಷೇತ್ರಗಳ ದರ್ಶನಮಾಲಿಕೆ)

ಗ್ರಂಥ ಪರಾಮರ್ಶೆ 61
ಕೆ. ಸುಷ್ಮ

ವಾರ್ತಾ ವಿಹಾರ 62
ಕುಮಾರಸ್ವಾಮಿ ವಿರಕ್ತಮಠ

ಕೃತಿ–ಸ್ವೀಕೃತಿ 63

ಗುರುಪೂಜೆಯ ಮಾಡುವಲ್ಲಿ
ಗುರುಪೂಜೆಯಲ್ಲಿಯೇ ಮುಕ್ತರು.
ಲಿಂಗಪೂಜೆಯ ಮಾಡುವಲ್ಲಿ
ಲಿಂಗಪೂಜೆಯಲ್ಲಿಯೇ ಮುಕ್ತರು.
ಜಂಗಮಪೂಜೆಯ ಮಾಡುವಲ್ಲಿ
ಜಂಗಮಪೂಜೆಯಲ್ಲಿಯೇ ಮುಕ್ತರು.
ಮೂರೊಂದಾಗಲಾಗಿ ಬೇರೊಂದಂಗವಿಲ್ಲ.
ಆಗುಚೇಗೆ ಮೂರರಲ್ಲಿ ಅಡಗಿದ ಮತ್ತೆ
ಅಮರೇಶ್ವರಲಿಂಗವ ಪೂಜಿಸಲಿಲ್ಲ.

**– ಅಂಬಿಗರ ಚೌಡಯ್ಯ**

# ಗುರುವಾಣಿ

> ಗುರುವ ನರನೆಂದವಗೆ ಹರನ ಶಿಲೆಯೆಂದವಗೆ
> ಗುರುಪ್ರಸಾದವ ಎಂಜಲೆಂದವಗೆ
> ನರಕ ತಪ್ಪುವುದೆ ಸರ್ವಜ್ಞ

ಭಾರತದಾದ್ಯಂತ ಆಷಾಢಮಾಸದ ಹುಣ್ಣಿಮೆಯನ್ನು ಗುರುಪೂರ್ಣಿಮೆ ಎಂದು ಆಚರಿಸಲಾಗುತ್ತದೆ. ಹಿಂದುಗಳು, ಬೌದ್ಧರು, ಜೈನರು ಎಲ್ಲರಿಗೂ ಅತ್ಯಂತ ಪವಿತ್ರವಾದ ದಿನ. ಭಾರತದಲ್ಲಿ ಮಾತ್ರ 'ಗುರು' ಎನ್ನುವ ವಿಶೇಷ ಸ್ಥಾನಮಾನವುಳ್ಳ ಶಬ್ದವಿದೆ. ಪಾಶ್ಚಾತ್ಯ ದೇಶಗಳಲ್ಲಿ ಬಳಸುವ 'ಟೀಚರ್' ಎಂಬುದು ನಮ್ಮಲ್ಲಿ 'ಶಿಕ್ಷಕ' ಎಂಬುದಕ್ಕೆ ಸಂವಾದಿಯಾದ ಪದ. 'ಗು' ಎಂದರೆ ಅಂಧಕಾರ ಅಥವಾ ಅಜ್ಞಾನ; 'ರು' ಎಂದರೆ ಅದನ್ನು ನಾಶ ಮಾಡುವವನು. ಸರ್ವಜ್ಞಕವಿ ಮೇಲಿನ ತ್ರಿಪದಿಯಲ್ಲಿ ಗುರು ಶಬ್ದದ ಮಹತ್ತ್ವವನ್ನು ಅದ್ಭುತವಾಗಿ ಹಿಡಿದಿಟ್ಟಿದ್ದಾನೆ.

ಗುರು ಕೂಡ ಎಲ್ಲರಂತೆ ಒಬ್ಬ ಮನುಷ್ಯನೇ ಆದರೆ ಎಲ್ಲ ಮನುಷ್ಯರೂ ಗುರುವಾಗಲಾರರು. ಅದೊಂದು ಪದವಿಯಲ್ಲ; ಅದೊಂದು ಸ್ಥಾನ, ಸಾಧನೆಯ ಎತ್ತರ. ಅದು ಸಾಧಿಸಿ ಪಡೆಯುವಂಥದೇ ಹೊರತು, ಹುಟ್ಟಿನಿಂದಲೋ ಅಥವಾ ವಶೀಲಿಯಿಂದಲೋ ದೊರಕುವಂಥದಲ್ಲ. ಹದ್ದು ಮತ್ತು ಗರುಡ ಎರಡೂ ಪಕ್ಷಿಗಳೇ. ಆದರೆ ಅವುಗಳ ಗುಣಸ್ವಭಾವಗಳ ನಡುವೆ ಭೂವ್ಯಾಕಾಶದಷ್ಟು ಅಂತರವಿದೆ. ಅವುಗಳ ಗಮನವೂ ಬೇರೆಬೇರೆ. ಹದ್ದಿನ ದೃಷ್ಟಿ ಅಧೋಮುಖವಾದರೆ, ಗರುಡನದು ಊರ್ಧ್ವದೃಷ್ಟಿ. ಹದ್ದು ಎಷ್ಟೇ ಎತ್ತರಕ್ಕೆ ಏರಿದರೂ, ಅದರ ಗಮನ ಮಾಂಸ, ಕಸಕಡ್ಡಿಗಳ ಕಡೆಗೆ, ಅಂದರೆ ತನ್ನ ಆಹಾರದ ಕಡೆಗೆ ಮಾತ್ರ ಇರುತ್ತದೆ. ಆದರೆ ಗರುಡನ ದೃಷ್ಟಿ ಸದಾ ಊರ್ಧ್ವಮುಖಿ, ಅಮೃತವನ್ನು ಪಡೆಯುವುದೇ ಅದರ ಬಯಕೆ. ನರನೇ ಗುರುವಾದಾಗ ಆತನಲ್ಲಿ ನರತ್ವ ದೂರವಾಗುತ್ತದೆ. ಆತ ಆಗ ಕೇವಲ ಬೆಳಕಾಗಿರುತ್ತಾನೆ. ಅಂಥ ಬೆಳಕನ್ನು ಅರಿಯುವ ಬುದ್ಧಿ, ಕಾಣುವ ಕಣ್ಣು ಎರಡೂ ಇಲ್ಲದೆ ಆತನನ್ನು 'ನರ'ಎಂದವನಿಗೆ ನರಕ ಪ್ರಾಪ್ತವಾಗುತ್ತದೆ.

ಈ ತ್ರಿಪದಿಯಲ್ಲಿ ಬರುವ ಗುರು, ಹರ, ಗುರುಪ್ರಸಾದ ಎಂಬ ಮೂರು ಪದಗಳಿಗೂ ನರ, ಶಿಲೆ, ಎಂಜಲು ಎಂಬ ಪದಗಳಿಗೂ ಒಂದು ರೀತಿಯ ಅಂತಸ್ಸಂಬಂಧವಿದೆ. ಗುರು ದೈಹಿಕವಾಗಿ ನರ; ಲಿಂಗ ಹೊರ ಸ್ವರೂಪಕ್ಕೆ ಕೇವಲ ಒಂದು ಕಲ್ಲು; ಗುರು ಸ್ವೀಕರಿಸಿದ ನೈವೇದ್ಯ ಹೊರನೋಟಕ್ಕೆ ಕೇವಲ ಎಂಜಲು. ಆದರೆ ಶಿಲಾಮೂರ್ತಿ (ಲಿಂಗ) ಕೇವಲ

ಕಲ್ಲಿನ ಮೂರ್ತಿಯಿಲ್ಲ, ಅದು ಸಾಕ್ಷಾತ್ ಶಿವನೆ. ಈ ರಹಸ್ಯವನ್ನು ಅರಿಯದವನಿಗೆ ನರಕ ತಪ್ಪದು ಎನ್ನುತ್ತಾನೆ ಸರ್ವಜ್ಞ. ಸ್ವರ್ಗ ನರಕಗಳ ಪೌರಾಣಿಕ ಕಲ್ಪನೆ ಏನೇ ಇರಲಿ, ಲೌಕಿಕ ಬದುಕಂತೂ ನರಕವಾಗುವುದು ನಿಜ.

ವೀರಶೈವ–ಲಿಂಗಾಯತ ದರ್ಶನದಲ್ಲಿ ಗುರು ಎಂಬುದು ಅಷ್ಟಾವರಣಗಳಲ್ಲಿ ಒಂದು. ಇದರ ಪ್ರಕಾರ ಅಖಂಡವೂ, ಅದ್ವಿತೀಯವೂ, ನಿತ್ಯವೂ, ನಿರವಯವೂ ಆದ ಪರಿಪೂರ್ಣ, ಚೈತನ್ಯಸ್ವರೂಪಿಯಾದ ನಿಷ್ಕಲ ಪರಶಿವ ಲಿಂಗವು ತನ್ನ ಜ್ಞಾನವಿಲಾಸದ ಆನಂದಲೀಲೆಯಿಂದ ಅಖಂಡ ತೇಜೋಮೂರ್ತಿಯಾದ ಮಹಾಲಿಂಗವಾಗುತ್ತದೆ. ಈ ಮಹಾಲಿಂಗವು ತನ್ನ ಚಿದ್ವಿಲಾಸಲೀಲೆಯಿಂದ ಐದು ಮುಖಗಳನ್ನು ಪಡೆದು ಪಂಚಸಾದಾಖ್ಯ ಲಿಂಗಮೂರ್ತಿಯಾಗುತ್ತದೆ. ಇವೆಲ್ಲವೂ ಸೇರಿ ಆರು ಲಿಂಗಗಳಾಗುತ್ತವೆ (ಷಡ್ವಿಧ ಲಿಂಗ). ಇಂತಹ ಅಖಂಡ ಲಿಂಗವು ತನ್ನ ಸ್ವಲೀಲಾಸ್ವತಂತ್ರತೆಯಿಂದ, ತನ್ನ ಅಖಂಡ ಚೈತನ್ಯಶಕ್ತಿಯ ಸಾವಿರದೊಂದಂಶವೂ ಪ್ರತ್ಯೇಕವಾಗಿ ಆತ್ಮನೆಂಬ ಲಿಂಗವಾಗುತ್ತದೆ. ಅಂತಹ ಆತ್ಮಕ್ಕೆ 25 ತತ್ತ್ವಗಳು (ಪಂಚವಿಂಶತಿ ತತ್ತ್ವಗಳು) ಸೇರಿ ದೇಹ ಸೃಷ್ಟಿಯಾಗುತ್ತದೆ. ಆ ಆತ್ಮವು ದೇಹದೊಳಗೆ ಸೇರಿ, ಅಂತಸ್ಥವಾಗಿ ಐದು ಕರಣಗಳಿಂದ (ಪಂಚೇಂದ್ರಿಯಗಳ) ಅಹಂ ಮಮತೆಯ ಅಂಧಕಾರಕ್ಕೆ ಬಿದ್ದು ಅಜ್ಞಾನವುಂಟಾಗಿ ಜೀವ ಅಥವಾ ನರ ಎನಿಸಿಕೊಳ್ಳುತ್ತಾನೆ. ಈ ಜೀವನಿಗೆ ಪಾಪ–ಪುಣ್ಯ, ಸುಖ–ದುಃಖ, ಬಂಧ–ಮೋಕ್ಷ, ಜನನ–ಮರಣಗಳೆಂಬ ಭವಮಾಲೆಗಳು ಸುತ್ತಿಕೊಳ್ಳುತ್ತವೆ.

ತಾನೇ ಶಿವನೆಂಬ ನಿಜವನ್ನು ಮರೆತು ಅಜ್ಞಾನದಿಂದ ಆವೃತವಾಗಿರುವ ಜೀವನಿಗೆ ಸಮ್ಯಗ್‌ಜ್ಞಾನವನ್ನು ಪ್ರಕಾಶಿಸಿಕೊಟ್ಟು, ಮೋಕ್ಷಾಪೇಕ್ಷೆಯನ್ನು ಉದ್ದೀಪಿಸಿ ಹರನೇ ಲಿಂಗರೂಪದಿಂದ ಗುರುವಾಗಿ ಬರುತ್ತಾನೆ. ಗುರುವು ಲಿಂಗವನ್ನು ಜೀವಿಯ ಕೈಗೆ ಕೊಟ್ಟು, ಆ ಪರಂಜ್ಯೋತಿ ಲಿಂಗಸ್ವರೂಪದ ಶಿವನು ನೀನೇ ಎಂದು ಬೋಧಿಸಿ ಭವಬಂಧನವನ್ನು ಕಳೆಯುತ್ತಾನೆ. ಲಿಂಗದಲ್ಲಿ ಅಂಗ ಬೆರೆಯಲು ಕಾರಣವಾಗುತ್ತಾನೆ.

ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಗುರುಪೂರ್ಣಿಮೆಗೆ ಅತ್ಯಂತ ಮಹತ್ವ ದೊರೆಯುತ್ತದೆ. ಇದೇ ದಿನದಂದು ಗೌತಮಬುದ್ಧನು ಮೊತ್ತಮೊದಲ ಧರ್ಮೋಪದೇಶವನ್ನು ಸಾರಾನಾಥದಲ್ಲಿ ನೀಡಿದನು. ಯೋಗಸಂಪ್ರದಾಯದ ಪ್ರಕಾರ ಶಿವನು ಸಪ್ತರ್ಷಿಗಳಿಗೆ ಯೋಗವಿದ್ಯೆಯನ್ನು ಧಾರೆಯೆರೆದ ದಿನವೂ ಇದೇ. ಶಿವ ಆದಿಯೋಗಿಯೂ ಹೌದು, ಆದಿಗುರುವೂ ಹೌದು. ಜೊತೆಗೆ ಈ ದಿನ ವೇದವ್ಯಾಸರ ಜನ್ಮದಿನವೂ ಆಗಿದೆ. ಜೈನರಲ್ಲಿ ಚಾತುರ್ಮಾಸ ಅಥವಾ ಚೌಮಾಸ ಪ್ರಾರಂಭವಾಗುವ ಪವಿತ್ರದಿನ. ಇಷ್ಟೊಂದು ಮಹತ್ವವುಳ್ಳ ಈ ದಿನವನ್ನು ಎಲ್ಲರೂ ಸಾರ್ಥಕವಾಗಿ ಅರಿತು ಬಾಳಲೆಂದು ಹಾರೈಸುತ್ತೇವೆ.

**– ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

ನುಡಿವ ಗಂಭೀರ ಬೋಧಿಪ ಬೋಧೆ ಕಮ್ಮನೆಂ
ದೊಡಕು ಹುಟ್ಟಿಸದೊಂದು ಪ್ರೀತಿ ।
ತೊಡರದ ಮಾತಿಂದ ಗೆಲ್ಲ ಚಾತುರ್ಯಕ್ಕೆ
ಪಡೆಯಲ್ಲ ಮೆಟ್ಟಿ ಕೀರ್ತಿಸಿತು ॥ (ಭರತೇಶ ವೈಭವ- 42)

ರತ್ನಾಕರ ವರ್ಣಿಯ "ಭರತೇಶ ವೈಭವ" ಕಾವ್ಯದಲ್ಲಿ ಬರುವ ಮೇಲಿನ ಮಾತು ಮಾತಿನ ವಾಕ್‌ಶಕ್ತಿಯ ಅಗಾಧತೆಯನ್ನು ಮತ್ತು ತೀವ್ರತೆಯನ್ನು ತಿಳಿಸುತ್ತದೆ. ಬೇರೆ ಯಾವ ಪ್ರಾಣಿವರ್ಗಕ್ಕೂ ಇಲ್ಲದ ವಾಕ್‌ಸಾಮರ್ಥ್ಯ ಮನುಷ್ಯನಿಗೆ ಮಾತ್ರ ಪ್ರಾಪ್ತವಾಗಿದೆ. ಆದುದರಿಂದಲೇ ಆತನನ್ನು ಪ್ರಾಣಿವರ್ಗದಲ್ಲೇ ಶ್ರೇಷ್ಠನೆಂದು ಕರೆಯುತ್ತಾರೆ. ಜಗತ್ತಿನಲ್ಲಿ ಅತ್ಯಂತ ಅಪಾಯಕಾರಿಯಾದ ಆಯುಧವೆಂದರೆ "ನಾಲಿಗೆ". ಮಹಾಭಾರತ ಯುದ್ಧದಲ್ಲಿ ಆಯುಧವನ್ನೇ ಹಿಡಿಯದೆ ಯುದ್ಧದಲ್ಲಿ ಭಾಗವಹಿಸಿದ ಶ್ರೀಕೃಷ್ಣ, ತನ್ನ ಸುದರ್ಶನ ಚಕ್ರಕ್ಕಿಂತಲೂ ಹರಿತವಾದ ನಾಲಿಗೆಯನ್ನು, ಮಾತನ್ನು ಹೇಗೆ ಬಳಸಿದನು ಎಂಬುದು ಸರ್ವವೇದ್ಯ. ಮಹಾಭಾರತದ ಯುದ್ಧ ನಡೆದದ್ದೇ ಮಾತಿನ ತೀವ್ರತೆಯಿಂದ. ಪುರಂದರ ದಾಸರಂತೂ ಮಾತಿನ ಉಪಕರಣವಾದ ನಾಲಿಗೆಯ ಬಗ್ಗೆ ತುಂಬ ಎಚ್ಚರದ ಮಾತನಾಡಿದ್ದಾರೆ : "ಆಚಾರವಿಲ್ಲದ ನಾಲಿಗೆ, ನಿನ್ನ ನೀಚಬುದ್ಧಿಯ ಬಿಡು ನಾಲಿಗೆ, ವಿಚಾರವಿಲ್ಲದೆ ಪರರ ದೂಷಿಸುವುದಕ್ಕೆ ಚಾಚಿಕೊಂಡಿರುವಂಥ ನಾಲಿಗೆ". ಮನೋವೈಜ್ಞಾನಿಕ ಅಧ್ಯಯನಗಳ ಪ್ರಕಾರ, ಮನುಷ್ಯನು ದಿನದ 24 ಗಂಟೆಗಳಲ್ಲಿ ನಿದ್ರೆಗಾಗಿ 8 ಗಂಟೆ ಕಳೆದರೂ ಉಳಿದ 16 ಗಂಟೆಯನ್ನು ತನ್ನ ಬಗೆಗೆ ಯೋಚಿಸುವುದಕ್ಕಿಂತಲೂ ಇತರರ ಬಗೆಗೆ ಚಿಂತಿಸುವುದರಲ್ಲೇ ನಿರತನಾಗಿರುತ್ತಾನೆ. ನಿದ್ರೆಯಲ್ಲೂ ಕೂಡ ಬಹುತೇಕ ಸಮಯ ಬೇರೆಯವರಿಗೆ ಸಂಬಂಧಿಸಿದ ವಿಚಾರಗಳೇ ಬರುತ್ತಿರುತ್ತವೆ. "ಪರರ ಚಿಂತೆ ಎಮಗೇಕಯ್ಯಾ ನಮ್ಮ ಚಿಂತೆ ನಮಗೆ ಸಾಲದೆ" ಎಂಬ ಬಸವಣ್ಣನವರ ಮಾತಿನಲ್ಲಿ ಮನುಷ್ಯನಾದವನು ತನ್ನ ಅಂತರಂಗದ ಮೊದಲು ಅರಿತುಕೊಳ್ಳಬೇಕು ಎಂಬ ಚಿಂತನೆ ಇದೆ.

ಮಾತು ಎಂಬುದಕ್ಕೆ ಕನ್ನಡದ ಹಿಂದಿನ ಕವಿಗಳು ಹಾಗೂ ವಚನಕಾರರು 'ನುಡಿ' ಎಂಬ ಪರ್ಯಾಯ ಪದವನ್ನು ಸೃಷ್ಟಿಸಿದ್ದಾರೆ. ನುಡಿಯಲ್ಲಿ ಸುಳ್ಳುನುಡಿ, ಮೆಲ್ನುಡಿ,

ಪಡೆನುಡಿ, ಪಡೆಮಾತು ಎಂಬ ಎಂಬ ಹಲವಾರು ಬಗೆಗಳಿವೆ. ಹೀಗೆ ನುಡಿಗೆ ಸಂಬಂಧಿಸಿದಂತೆ ಅನೇಕ ಪದಸಮುಚ್ಚಯಗಳಿವೆ. ಈ ಎಲ್ಲ ಪದಗಳ ಪೂರ್ವಪ್ರತ್ಯಯಗಳು ನುಡಿ ಅಥವಾ ಮಾತಿಗೆ ವಿಶೇಷ ಅರ್ಥವ್ಯಾಪ್ತಿಯನ್ನು ತಂದುಕೊಡುತ್ತವೆ. ಆದರೆ ಮಾತಿನ ಶಕ್ತಿಯ ಬಗೆ ಅರಿವಿಲ್ಲದ ಅನೇಕರು ಯಾವ ಎಗ್ಗೂ ಇಲ್ಲದೆ ಮಾತುಗಳನ್ನು ಬಳಸುತ್ತಾರೆ. ಮಾತು ಬೆಳ್ಳಿ, ಮೌನ ಬಂಗಾರ ಎಂಬುದು ಪ್ರಾಜ್ಞರ ಅಭಿಮತ. ಮಾತಿಗಿಂತ ಮೌನಕ್ಕೆ ಹೆಚ್ಚು ಬೆಲೆ. ಆದರೆ ನಿಜಕ್ಕೂ ಮಾತನಾಡಬೇಕಾದ ಸಂದರ್ಭದಲ್ಲಿ ಮೌನವನ್ನು ಆಶ್ರಯಿಸುವುದೂ ಅಪಾಯವೇ. ಸಂದರ್ಭ ಬಂದಾಗ ನಾವು ಆಡಬೇಕಾದ ಮಾತನ್ನು ಆಡಿಯೇ ತೀರಬೇಕು.

ಕುರುಕ್ಷೇತ್ರ ಯುದ್ಧದಲ್ಲಿ ಮೊದಲ ಹತ್ತು ದಿನ ಕಾದಾಡಿ ಸೋತು, ಕೊನೆಗೆ ಶರಶಯ್ಯೆಯಲ್ಲಿ ಮಲಗಿ ಉತ್ತರಾಯಣದ ಆಗಮನಕ್ಕಾಗಿ ದಿನಗಳನ್ನೆಣಿಸುತ್ತಿದ್ದ ಭೀಷ್ಮರ ದಾರುಣ ಪರಿಸ್ಥಿತಿಯನ್ನು ಕೇಳಿ ದುಃಖಿತಳಾದ ರುಕ್ಮಿಣಿ, ಜೀವನದಲ್ಲಿ ಒಂದೂ ತಪ್ಪು ಮಾಡದೆ ಪರಿಶುದ್ಧವಾಗಿ ಬದುಕಿದ್ದ ಭೀಷ್ಮರಿಗೆ ಈ ರೀತಿ ಕೊನೆಗಾಲ ಒದಗಿದ್ದಾದರೂ ಏಕೆ?" ಎಂದು ಶ್ರೀಕೃಷ್ಣನನ್ನು ಕೇಳಿದಳು. ಆಗ ಶ್ರೀಕೃಷ್ಣ ಉತ್ತರಿಸಿದ್ದು ಹೀಗೆ: ದ್ರೌಪದಿಯ ವಸ್ತ್ರಾಪಹರಣದ ಸಂದರ್ಭದಲ್ಲಿ, ದ್ರೌಪದಿ ಎತ್ತಿದ ತಾರ್ಕಿಕ ಪ್ರಶ್ನೆಗಳಿಗೆ ಸಭಾಸದರಾರೂ ಉತ್ತರ ನೀಡಲಿಲ್ಲ. ಅಲ್ಲಿದ್ದ ಮಹಾಜ್ಞಾನಿಗಳೂ, ಕುರುಕುಲ ಪಿತಾಮಹರೂ ಆದ ಭೀಷ್ಮರೂ ಆ ಸಮಯದಲ್ಲಿ ಸುಮ್ಮನಿದ್ದರು. ಎಲ್ಲ ಶಾಸ್ತ್ರಗಳನ್ನೂ ಆಮೂಲಾಗ್ರವಾಗಿ ತಿಳಿದಿದ್ದ ಪ್ರಾಜ್ಞರಾದ ಅವರು ಆ ಸಭೆಯಲ್ಲಿ ಸೌಜನ್ಯಕ್ಕಾಗಿಯಾದರೂ, ದ್ರೌಪದಿ ಒಬ್ಬ ಅಸಹಾಯಕ ಹೆಣ್ಣು ಮಗಳು ಎಂಬ ಕಾರಣಕ್ಕಾದರೂ, ವಿವೇಕದ ಮಾತುಗಳನ್ನು ಆಡಬಹುದಿತ್ತು. ಹಾಗೆ ಮಾಡದೆ ಮೌನವಾಗಿದ್ದರಿಂದಲೇ ಅವರಿಗೆ ಇಂತಹ ಮರಣ ಪ್ರಾಪ್ತಿಯಾಗಿದೆ. ಕರ್ಮ ನಮ್ಮನ್ನು ಎಂದೂ ಬಿಡುವುದಿಲ್ಲ ; ಅದು ಅಟ್ಟಿಸಿಕೊಂಡೇ ಬರುತ್ತದೆ.

ಮಾತು ಮತ್ತು ಮೌನಗಳ ನಡುವೆ ಇರಬೇಕಾದ ವಿವೇಕಾವಿವೇಕದ ಅರಿವು ಇರಬೇಕಾದುದು ಎಲ್ಲ ಕಾಲದ ಅಗತ್ಯ. ನಮ್ಮ ಮಾತುಗಳು ಯಾವಾಗಲೂ ವಿವೇಕಪೂರ್ಣವಾಗಿರಬೇಕು ಮಾತ್ರವಲ್ಲ, ಜ್ಞಾನ ಹಾಗೂ ಸಭ್ಯತೆಯ ಎಲ್ಲೆಯೊಳಗಿರಬೇಕು.

ಲಾಂಜಿನಸ್ ಎಂಬ ಪಾಶ್ಚಾತ್ಯ ಕಾವ್ಯ ಮೀಮಾಂಸಕಾರನು ತನ್ನ 'ಆನ್ ದಿ ಸಬ್‌ಲೈಮ್' ಎಂಬ ಗ್ರಂಥದಲ್ಲಿ ಭವ್ಯತೆಯನ್ನು ಕುರಿತು ಮಾತನಾಡುತ್ತಾನೆ. ಆ ಇಡೀ ಗ್ರಂಥ ಮಾತಿಗೆ ಸಂಬಂಧಿಸಿದಂತೆಯೇ ಇದೆ. ಅದರಲ್ಲೂ ಮುಖ್ಯವಾಗಿ ಭಾಷಣಕಲೆಯ

ಮೇಲೆ ಅದು ಹೆಚ್ಚು ಗಮನ ನೀಡುತ್ತದೆ. ಭಾಷಣದಲ್ಲಿ ಬಳಸುವ ಭಾಷೆ, ಮಾತಿನ ಓಘ ಇವೆಲ್ಲವೂ ಹೇಗಿದ್ದರೆ ಮಾತಿಗೊಂದು ಹದ, ತೂಕ ಪ್ರಾಪ್ತವಾಗುತ್ತದೆ ಎಂಬುದನ್ನು ಆತ ವಿವರವಾಗಿ ತಿಳಿಸುತ್ತಾನೆ. ಮಾತನಾಡುವ ಸಂದರ್ಭದಲ್ಲಿ ವ್ಯಕ್ತಿಯ ಹಾವಭಾವಗಳ ಬಗೆಗಿನ ವಿಚಾರವೂ ಅಲ್ಲಿದೆ. ನಾವು ಆಡುವ ಮಾತು ನಮ್ಮ ವ್ಯಕ್ತಿತ್ವದ ಪ್ರತಿಬಿಂಬವಾಗಿರುತ್ತದೆ. ಅಳತೆಯಿಲ್ಲದ ಪ್ರಜಾಪ್ರಭುತ್ವ ಭವ್ಯತೆಗೆ ಮಾರಕ ಎನ್ನುವುದು ಕೂಡ ಅವರ ಒಂದು ಮೌಲಿಕ ಅಭಿಪ್ರಾಯ.

ಇತ್ತೀಚೆಗೆ ನಮ್ಮ ಸುತ್ತಲೂ ಇರುವ ರಾಜಕೀಯ ನಾಯಕರು, ಧಾರ್ಮಿಕ ಮುಖಂಡರುಗಳನ್ನು ಒಳಗೊಂಡಂತೆ ಎಲ್ಲ ಪಕ್ಷಗಳೂ ಆಗಾಗ್ಗೆ ಆಡುವ ಮಾತುಗಳಲ್ಲಿ ಈ ಸೌಜನ್ಯ ಮತ್ತು ಗಾಂಭೀರ್ಯ ಕಾಣೆಯಾಗಿದೆ. ಕೇವಲ ಪರಸ್ಪರ ನಿಂದನೆ, ಕೀಳುಮಟ್ಟದ ಭಾಷಾಪ್ರಯೋಗ, ದುಷ್ಟ ಆಂಗಿಕತೆ ಇವುಗಳೇ ಇಂದು ಎಲ್ಲರ ಭಾಷಣದ ಮುಖ್ಯ ಲಕ್ಷಣಗಳಾಗಿವೆ. ಸಭ್ಯತೆಯಂತೂ ನಮ್ಮ ಸಾರ್ವಜನಿಕ ಜೀವನದಲ್ಲಿ ಕಣ್ಮರೆಯಾಗಿ ಹೋಗಿದೆ. 21ನೆಯ ಶತಮಾನದ ಅಂತ್ಯಕ್ಕೆ 'ಸಭ್ಯತೆ' ಎಂಬ ಶಬ್ದಕ್ಕೆ ಅರ್ಥವೇ ಉಳಿದಿರುವುದಿಲ್ಲವೆಂದು ಹೇಳುವ ಜಾನ್ ಹಾಕಿಂಗ್ಸ್ ಎಂಬ ವಿದೇಶಿ ಚಿಂತಕ ವಿಷಾದ ವ್ಯಕ್ತಪಡಿಸುತ್ತಾನೆ. ಅವನ ಮಾತು ಇಷ್ಟು ಬೇಗ ನಿಜವಾಯಿತೆ, ನಮ್ಮ ಸಮಾಜದ ಸಹಜ ಸ್ವಭಾವ ಹೀಗಾಗಿ ಹೋಯಿತೆ ಎಂಬ ಆತಂಕ ನಮ್ಮನ್ನು ಕಾಡುತ್ತದೆ. ವಿದ್ಯಾವಂತರೂ ಈ ಮಾತಿನ ಸಭ್ಯತೆಯ ಎಲ್ಲೆಯನ್ನು ಮೀರುತ್ತಿರುವುದು ಸಾಂಸ್ಕೃತಿಕ ಕ್ಷೇತ್ರದ ದುರ್ದೈವ. ಇಂತಹ ವಾಕ್ಶುದ್ಧಿಯಿಲ್ಲದ ಸಮಾಜದಲ್ಲಿ ವಾಕ್‌ಸಿದ್ಧಿಯ ಮಾತಂತೂ ದೂರವೇ ಉಳಿಯಿತು 'ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು' ಎಂಬ ಗಾದೆಮಾತು ನಮ್ಮ ನೆನಪಿನಲ್ಲಿ ಸದಾ ಹಸುರಾಗಿ ಉಳಿಯಬೇಕಾದದ್ದು ಇಂದಿನ ಜರೂರು ಅಗತ್ಯ.

**– ಡಾ. ಎಂ.ಎಸ್. ನಂದೀಶ್ ಹಂಚೆ**

# ಭವಮಾಲೆ

ಶ್ರೀ ಸಿದ್ಧೇಶ್ವರ ಸ್ವಾಮಿಗಳು

' '

ಈ

? ?

?

?

ಈ

-

!

!

ಈ

" "

!

!

!

" " -

' '

"

?" ' '

"ಈ

!" " ಈ

?"

: " ?"

: " !"

: " ! '

!'

?"

: " !"

: "

!"

: " !

!"

- -

ಈ

' ' ? ' '

- -

!

ಈ ' ' ?

!

!

!

?

!

ಈ

ಈ ?

ಈ

ಈ

ಈ !!

❑

ಅಂಗವಿಲ್ಲದ ಮಂಗಳಾಂಗಿಯ ಮನದಲ್ಲಿ
ಶಿವಲಿಂಗದುದಯವ ಕಂಗಳಿಲ್ಲದೆ ಕಂಡು
ಅಂಗವಿಲ್ಲದೆ ಸಂಗವ ಮಾಡಿ
ನಿಸ್ಸಂಗಿಯಾಗಿ ಸರ್ವಸಂಗಕ್ಕೆ ಹೊರಗಾಗಿ
ನಿರ್ವಯಲ ಬೆರಸಲು
'ಮಂಗಳ ಮಂಗಳ'ವೆನುತ್ತಿಪ್ಪ
ಮಹಾಗಣಂಗಳ ಸಂಗದಲ್ಲಿ ಮೈಮರೆದನು ಕಾಣಾ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ.

**– ತೋಂಟದ ಸಿದ್ಧಲಿಂಗ ಶಿವಯೋಗಿಗಳು**

# ಹೊನ್ನು ಹೊರೆ

ಡಾ. ಎಂ.ಎಸ್. ನಂದೀಶ್ ಹಂಚೆ

ಅಂದು ಬೆಳಗ್ಗೆ ಪತ್ರಿಕೆಯನ್ನು ಓದುತ್ತಿದ್ದ, ಪರಮಪೂಜ್ಯ ರಾಜೇಂದ್ರ ಶ್ರೀಗಳಿಗೆ ಅದರಲ್ಲಿದ್ದ ಜಾಹೀರಾತು ಗಮನ ಸೆಳೆಯಿತು. ಚಾಮರಾಜಪುರಂನ ಮುಖ್ಯರಸ್ತೆಯಲ್ಲಿ ಇದ್ದ "ಶ್ರೀ ಡಿ. ಬಸಮಯ್ಯ ಅವರ ಕಟ್ಟಡವೊಂದು ಮಾರಾಟಕ್ಕಿದೆ" ಎನ್ನುವುದು ಆ ಜಾಹೀರಾತಿನ ಒಕ್ಕಣೆ. ಅದನ್ನು ನೋಡುತ್ತಿದ್ದಂತೆ ಶ್ರೀಗಳ ಮನಃಪಟಲದಲ್ಲಿ ಮಿಂಚೊಂದು ಹಾಯ್ದು ಹೋದಂತಾಯಿತು. ಕ್ಷಣಕಾಲ ಚಿಂತನೆಯಲ್ಲಿ ತೊಡಗಿದರು. ಆ ಸಮಯಕ್ಕೆ ಸರಿಯಾಗಿ ಗುಂಡ್ಲುಪೇಟೆ ತಾಲ್ಲೂಕು ಬೇಗೂರಿನ ನಿಟ್ರೆ ಸುಬ್ಬಣ್ಣನವರು ಆಗಮಿಸಿ, ಶ್ರೀಗಳವರಿಗೆ ನಮಸ್ಕರಿಸಿದರು. ಶ್ರೀಗಳು ಕೈಯಲ್ಲಿದ್ದ ಪತ್ರಿಕೆಯನ್ನು ಪಕ್ಕಕ್ಕಿಟ್ಟು, "ಈಗ ಬಂದೆಯಾ, ಹೋಗು, ಪ್ರಸಾದ ಮಾಡು" ಎಂದರು. ಬಸಪ್ಪನವರು "ಮನೆಯಲ್ಲಿಯೇ ಆಯ್ತು ಬುದ್ಧಿ. ಬೆಂಗಳೂರಿಗೆ ಹೋಗುತ್ತಿದ್ದೆ. ತಮ್ಮ ದರ್ಶನ ಮಾಡಿ ಹೋಗೋಣ ಎಂದು ಬಂದೆ, ಅಷ್ಟೆ" ಎಂದರು. "ಹೌದೇ, ಮನೆಯಲ್ಲಿ ಎಲ್ಲರೂ ಕ್ಷೇಮವೇ" ಎಂಬ ಉಭಯಕುಶಲೋಪರಿ ಸಾಂಪ್ರತ ನಡೆಯಿತು. ಮಾತಿನ ನಡುವೆ ಶ್ರೀಗಳು ಅನ್ಯ ಮನಸ್ಕರಾಗಿರುವುದನ್ನು ಗುರುತಿಸಿದ ಸುಬ್ಬಣ್ಣನವರು, "ತಾವು ಏನೋ ಯೋಚನೆಯಲ್ಲಿ ಇರುವಂತಿದೆಯಲ್ಲ ಬುದ್ಧಿ" ಎಂದರು.

"ಹೌದು ಸುಬ್ಬಣ್ಣ, ನಾವು ಈಗ ಸಾಹುಕಾರ ಸಿದ್ದಲಿಂಗಯ್ಯನವರು ಶ್ರೀಮಠಕ್ಕೆ ನೀಡಿದ ಕಟ್ಟಡದಲ್ಲಿ ವಿದ್ಯಾರ್ಥಿನಿಲಯವನ್ನು ನಡೆಸುತ್ತಿದ್ದೇವೆ. ಈ ವಿಷಯ ನಿನಗೂ ಗೊತ್ತು. ಅಲ್ಲಿ ದಿನೇದಿನೇ ವಿದ್ಯಾರ್ಥಿಗಳ ಸಂಖ್ಯೆ ಅಧಿಕವಾಗುತ್ತಿದೆ. ಓದಲು ಅಪೇಕ್ಷಿಸಿ, ಆಶ್ರಯ ಬಯಸಿ ಬರುವವರ ಸಂಖ್ಯೆ ಹೆಚ್ಚುತ್ತಿದೆ. ಅದೂ ಅಲ್ಲದೆ ಶ್ರೀಮಠದ್ದೇ ಆದ ಒಂದು ಸ್ವಂತ ಕಟ್ಟಡ ಇರಬೇಕು ಎನ್ನಿಸುತ್ತಿದೆ" ಎಂದರು. ಸುಬ್ಬಣ್ಣನವರು "ಒಳ್ಳೆಯ ವಿಚಾರವೇ ಬುದ್ಧಿ, ತಮ್ಮ ಮನಸ್ಸಿಗೆ ಈ ಸಂಗತಿ ಬಂದಿದೆ ಎಂದ ಮೇಲೆ ಅದು ಆಗಿಯೇ ತೀರುತ್ತದೆ" ಎಂದರು. ಮುಂದುವರೆದು "ಇದಕ್ಕಾಗಿ ಯಾವುದಾದರೂ ಜಾಗವನ್ನು ನೋಡಿದ್ದೀರಾ?" ಎಂದರು ಸುಬ್ಬಣ್ಣನವರು. "ಹಾಗೇನೂ ಇಲ್ಲ. ಇಂದಿನ ಪತ್ರಿಕೆಯಲ್ಲಿ ಚಾಮರಾಜಪುರಂನಲ್ಲಿರುವ ಒಂದು ಕಟ್ಟಡವನ್ನು ಬಸಮಯ್ಯನವರು

ವ್ಯಾಪಾರ ಮಾಡುವುದಾಗಿ ಬಂದಿದೆ. ಆ ಕಟ್ಟಡವನ್ನು ನೀನೂ ನೋಡಿದ್ದೀಯಲ್ಲಾ, ಚೆನ್ನಾಗಿದೆ. ಅದೂ ಅಲ್ಲದೆ ಅದರ ಹಿಂಭಾಗದಲ್ಲಿ ವಿಸ್ತಾರವಾದ ಖಾಲಿ ಜಾಗವೂ ಇದೆ. ವಿದ್ಯಾರ್ಥಿನಿಲಯಕ್ಕೆ ಸೂಕ್ತವಾಗಿದೆ" ಎಂದರು ಶ್ರೀಗಳು. "ಹೌದು ಬುದ್ಧಿ ನಾನೂ ಆ ಕಟ್ಟಡವನ್ನು ನೋಡಿದ್ದೇನೆ. ಸೊಗಸಾಗಿದೆ. ಕೊಂಡುಕೊಳ್ಳುವುದು ಒಳ್ಳೆಯದೆ". "ನಿಜ ಸುಬ್ಬಣ್ಣ, ಆದರೆ ಅದಕ್ಕೆ ಬೇಕಾದಷ್ಟು ಹಣ ನಮ್ಮ ಬಳಿ ಇಲ್ಲ, ಏನು ಮಾಡಬಹುದು ಎಂದೂ ತೋಚುತ್ತಿಲ್ಲ" ಎಂದು ತಮ್ಮ ಅಂಗವಸ್ತ್ರವನ್ನು ಸರಿಪಡಿಸಿಕೊಳ್ಳಲು ಕೈಹಾಕಿದರು; ತಟ್ಟನೆ ನೆನಪಿಗೆ ಬಂದದ್ದು ಎದೆಯ ಮೇಲಿದ್ದ ಚಿನ್ನದ ಕರಡಿಗೆ.

ಈ ಹಿಂದೆಯೇ ಒಮ್ಮೆ ಚಿನ್ನದ ಕರಡಿಗೆಯನ್ನು ವಿದ್ಯಾರ್ಥಿನಿಲಯದ ನಿರ್ವಹಣೆಗಾಗಿ ಮಾರಿದ ಸಂಗತಿ ಜನಜನಿತವಾಗಿತ್ತು. ಈ ವಿಷಯ ತಿಳಿದ ನಿಟ್ರೆ ಸುಬ್ಬಣ್ಣನವರ ಚಿಕ್ಕಪ್ಪ ಶ್ರೀ ಮಲ್ಲಿಕಾರ್ಜುನಪ್ಪನವರು ಹೊಸ ಚಿನ್ನದ ಕರಡಿಗೆಯನ್ನು ಮಾಡಿಸಿ ಶ್ರೀಗಳಿಗೆ ನೀಡಿದ್ದರು. ಮಲ್ಲಿಕಾರ್ಜುನಪ್ಪನವರು ಬಂದೀಖಾನೆಯ ಅಧೀಕ್ಷಕರಾಗಿದ್ದರು. ಮುಂದೆ ಇವರೇ ಶ್ರೀಗಳಿಗೆ ಬೆಳ್ಳಿಯ ಕಿರೀಟವನ್ನೂ ಮಾಡಿಸಿಕೊಟ್ಟಿದ್ದರು. ಅವರು ಚಿನ್ನದ ಕರಡಿಗೆ ನೀಡಿದಾಗ ಶ್ರೀಗಳು ಅದನ್ನು ನಿರಾಕರಿಸಿದ್ದರು. ಆಗ ಮಲ್ಲಿಕಾರ್ಜುನಪ್ಪನವರು "ಬುದ್ಧಿ, ತಾವು ಬೇಡ ಅನ್ನಬಾರದು. ದಯಮಾಡಿ ಸ್ವೀಕರಿಸಬೇಕು. ದೊಡ್ಡ ಗುರುಗಳು ಚಿನ್ನದ ಕರಡಿಗೆ ನೀಡಿದ್ದರಿಂದ ತಾನೇ ತಾವು ಅದನ್ನು ಮಾರಿ, ಹಸಿದ ಮಕ್ಕಳಿಗೆ ಅನ್ನ ಹಾಕಿದಿರಿ, ಇದೂ ಅಂಥದೇ ಸಂದರ್ಭಕ್ಕೆ ಒದಗಬಹುದು" ಎಂದು ಒತ್ತಾಯ ಮಾಡಿ ನೀಡಿದ್ದರು.

ಹಾಗೆ ಒತ್ತಾಯ ಮಾಡಿ ನೀಡುವಾಗ, ಬಹುಶಃ ಮಲ್ಲಿಕಾರ್ಜುನಪ್ಪನವರು, ತಮ್ಮ ಮಾತು ಮುಂದೊಮ್ಮೆ ನಿಜವಾಗಬಹುದು ಎಂದು ಎಣಿಸಿರಲಿಕ್ಕಿಲ್ಲ. ರೂಢಿಯಂತೆ ಆಡಿದ್ದ ಮಾತದು. ಶ್ರೀಗಳವರು ನಿಟ್ರೆ ಸುಬ್ಬಣ್ಣನವರ ಜೊತೆ ಬಸುಮಯ್ಯನವರ ಆ ಜಾಗವನ್ನು ಕೊಂಡುಕೊಳ್ಳಲು ಸಮಾಲೋಚಿಸಿ, ಬಳಿಕ ಚಿನ್ನದ ಕರಡಿಗೆಯನ್ನು ಮುಟ್ಟಿ, ಏನೋ ಹೊಳೆದಂತೆ ಆಗಿ, "ಸುಬ್ಬಣ್ಣ, ನಿನಗೆ ಒಂದು ಕೆಲಸ ವಹಿಸುತ್ತೇನೆ. ಚಾಚೂ ತಪ್ಪದೆ ಮಾಡಬೇಕು. ಮತ್ತೆ ಇದನ್ನು ಯಾರಿಗೂ ಹೇಳಬಾರದು. ಹಾಗಂತ ಪ್ರಮಾಣ ಮಾಡು" ಎಂದರು. ಸುಬ್ಬಣ್ಣನವರು ಏನೂ ಯೋಚಿಸದೆ "ಆಯ್ತು ಬುದ್ಧಿ, ತಮ್ಮ ಪಾದಸಾಕ್ಷಿಯಾಗಿಯೂ ಯಾರಿಗೂ ಹೇಳುವುದಿಲ್ಲ" ಎಂದರು. "ನೋಡು, ಈ ಕರಡಿಗೆ ತೆಗೆದುಕೋ. ಇದು ನಿಮ್ಮ ಚಿಕ್ಕಪ್ಪ ಮಾಡಿಸಿಕೊಟ್ಟಿದ್ದು. ಇದನ್ನು ಎಲ್ಲಿಯಾದರೂ ಅಡವಿಟ್ಟು, ಸಾಧ್ಯವಾದಷ್ಟು ಹೆಚ್ಚಿಗೆ ಹಣ ಪಡೆದುಕೊಂಡು ಬಾ. ಈ ಕಟ್ಟಡವನ್ನು ಕೊಂಡುಕೊಳ್ಳಲು ಮುಂಗಡ ಕೊಡೋಣ" ಎಂದರು. ಶ್ರೀಗಳವರ ಮಾತು ಕೇಳಿ

ಸುಬ್ಬಣ್ಣನವರು ಭಾವುಕರಾದರು. ಆದರೆ ಗತ್ಯಂತರವಿಲ್ಲದೆ "ಆಯ್ತು ಬುದ್ಧಿ" ಎಂದು ಕರಡಿಗೆಯನ್ನು ಸ್ವೀಕರಿಸಿ ತೆರಳಿದರು.

ಸುಬ್ಬಣ್ಣನವರು ಸ್ಥಿತಿವಂತರೂ ಆಗಿದ್ದರಿಂದ, ಅವರಿಗೆ ಕೃಷ್ಣರಾಜ ವೃತ್ತದಲ್ಲಿದ್ದ ಆಭರಣದಂಗಡಿಯ ಶ್ರೀ ಎ. ಶಂಕರಶೆಟ್ಟಿ ಮತ್ತು ಅವರ ಸಹೋದರರಾದ ಶ್ರೀ ರಾಮಶೆಟ್ಟಿ ಮತ್ತು ಕೃಷ್ಣಯ್ಯಶೆಟ್ಟಿ ಸ್ನೇಹಿತರಾಗಿದ್ದರು. ವಿರಾಮದ ಕಾಲದಲ್ಲಿ ಅವರ ಅಂಗಡಿಯಲ್ಲಿ ಕಾಲ ಕಳೆಯುತ್ತಿದ್ದರು. ಆ ಅಂಗಡಿಗೆ ತೆರಳಿದ ಸುಬ್ಬಣ್ಣನವರು ಕರಡಿಗೆಯನ್ನು ಶಂಕರಶೆಟ್ಟಿಯವರಿಗೆ ನೀಡಿ "ಇದನ್ನು ಗಿರವಿ ಇರಿಸಿಕೊಂಡು ಹಣ ನೀಡಿ" ಎಂದರು. ಶಂಕರಶೆಟ್ಟಿಯವರು "ಅಯ್ಯೋ ಸುಬ್ಬಣ್ಣನವರೆ, ಇದೇಕೆ ಹೀಗೆ ಮಾಡುತ್ತಿದ್ದೀರಿ. ಬೇಕಾಗಿದ್ದರೆ ಹಣ ಪಡೆದು ಅನಂತರ ಹಣ ಹಿಂದಿರುಗಿಸಿ. ದೇವರನ್ನು ಇಡುವ ಕರಡಿಗೆಯನ್ನು ಗಿರವಿ ಇಡುವುದೆ, ಬೇಡ" ಎಂದರು.

ಸುಬ್ಬಣ್ಣನವರು ಒಂದು ಕ್ಷಣ ಮೈಮರೆತು "ಇದು ನಮ್ಮದಲ್ಲ" ಎಂದುಬಿಟ್ಟರು. "ಮತ್ತೆ ಯಾರದ್ದು" ಎಂದರು ಶೆಟ್ಟರು. "ಅದನ್ನು ಹೇಳುವಂತಿಲ್ಲ. ಯಾರಿಗೂ ಹೇಳಬೇಡಿ ಎಂದು ಇದನ್ನು ಕೊಟ್ಟವರು ನನ್ನಿಂದ ಮಾತು ತೆಗೆದುಕೊಂಡಿದ್ದಾರೆ. ಆದುದರಿಂದ ಅವರ ಹೆಸರನ್ನು ಹೇಳುವುದಿಲ್ಲ. ಆದರೆ ತಾವು ಕೊಡುವ ಹಣ ಖಂಡಿತವಾಗಿ ಒಂದು ಧರ್ಮಕಾರ್ಯಕ್ಕೆ ಬಳಕೆಯಾಗುತ್ತದೆ" ಎಂದರು ಸುಬ್ಬಣ್ಣನವರು. "ಆಯಿತು" ಎಂದು 4,000 ರೂಪಾಯಿಗಳನ್ನು ನೀಡಿದರು, ಶೆಟ್ಟರು. ಮುಂದುವರೆದು "ವಾಸ್ತವವಾಗಿ ಇದಕ್ಕೆ 2,000 ಮಾತ್ರ ಕೊಡಬಹುದು. ನೀವು ಪರಿಚಯಸ್ಥರು, ಧರ್ಮಕಾರ್ಯಕ್ಕೆ ಎಂದು ಬೇರೆ ಕೇಳುತ್ತಿದ್ದೀರಿ. ಹೆಚ್ಚಿನ ಹಣ ಬೇಕು ಎಂದಿದ್ದೀರಿ. ಅದಕ್ಕಾಗಿ ಇಷ್ಟು ಹಣ ನೀಡುತ್ತಿದ್ದೇನೆ. ಆದರೂ ಕೇಳುತ್ತೇನೆ. ಈ ಕರಡಿಗೆ ಇದರ ತೂಕ, ಇದನ್ನು ಗಿರವಿ ಇಡುತ್ತಿರುವುದು ನೋಡಿದರೆ ಇದು ಸುತ್ತೂರು ಸ್ವಾಮಿಗಳದ್ದೇ ಇರಬಹುದು ಎಂದು ನನಗೆ ಅನುಮಾನ" ಎಂದರು. ಸುಬ್ಬಣ್ಣನವರಿಗೆ ಏನು ಹೇಳಬೇಕೆಂದು ತೋಚಲಿಲ್ಲ. ಸುಳ್ಳು ಹೇಳುವಂತೆಯೂ ಇರಲಿಲ್ಲ. ನಿಜವನ್ನು ಹೇಳಲೂ ಆಗುತ್ತಿರಲಿಲ್ಲ. "ಅದೆಲ್ಲ ನಿಮಗೇಕೆ? ಈ ಕರಡಿಗೆಯನ್ನು ಹಾಗೇ ಇಡಿ. ಬಿಡಿಸಿಕೊಳ್ಳುತ್ತೇವೆ" ಎಂದರು. ಶೆಟ್ಟರು ನಕ್ಕು "ನೋಡಿ ಸುಬ್ಬಣ್ಣನವರೆ ನಿಮ್ಮ ಮುಖವೇ ನಿಜ ಹೇಳುತ್ತಿದೆ. ಇದು ಸುತ್ತೂರು ಶ್ರೀಗಳದ್ದೇ" ಎಂದು ಹೇಳಿ, "ಹೋಗಲಿ ಬಿಡಿ. ನನಗೂ ಇದು ಸಂತೋಷವೆ. ಧರ್ಮಕಾರ್ಯದಲ್ಲಿ ನನ್ನದೂ ಸ್ವಲ್ಪ ಪುಣ್ಯ ಇರುತ್ತದೆ" ಎಂದು, ಸುತ್ತೂರು ಸ್ವಾಮಿಗಳನ್ನು ಬಿಟ್ಟರೆ ಯಾರು ತಾನೇ ಚಿನ್ನವನ್ನು, ಅದರಲ್ಲೂ ಕರಡಿಗೆಯನ್ನು, ಹೀಗೆ ಕಾಣಲು ಸಾಧ್ಯ? ಅಂಥವರು ಇರುವುದರಿಂದಲೇ ಇನ್ನೂ ಮಳೆ–ಬೆಳೆ ಚೆನ್ನಾಗಿ ಆಗುತ್ತಿದೆ" ಎನ್ನುತ್ತ, ನಿಂತಲ್ಲೇ ಶ್ರೀಗಳಿಗೆ ಕೈ ಮುಗಿದರು.

❑

# ಶಬರಶಂಕರವಿಲಾಸ–ಟೀಕು

ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು

॥ ದ್ವಿತೀಯಾಶ್ವಾಸಂ ॥

**ಕಂ॥** ಶ್ರೀಕರ ನಗತನಯಾಸ್ಯ ಸು ।
ಧಾಕರ ಲಸದಮೃತರುಚಿ ಚಕೋರಂ ಗುಣರ ॥
ತ್ನಾಕರ ಅವನತಜನರ ।
ಕ್ಷಾಕರನೆಮಗೀಗೆ ಸೌಖ್ಯಮಂ ಶಿವಲಿಂಗಂ ॥

**ಟೀಕೆ ॥** ಶ್ರೀಕರಂ – ಸಂಪತ್ತನ್ನು ಮಾಡುವ, ಅಗತನಯಾ – ಪರ್ವತಪುತ್ರಿಯ, ಆಸ್ಯ – ಮುಖವೆಂಬ, ಸುಧಾಕರ – ಚಂದ್ರನ, ಲಸತ್ – ಬೆಳಗುವ, ಅಮೃತರುಚಿ ಅಮೃತದಂತಿರುವ ಕಾಂತಿಗೆ, ಚಕೋರಂ– ಜೊನ್ನವಕ್ಕಿಯಂತಾದ, ಗುಣರತ್ನಾಕರಂ – ಸುಗುಣಗಳೆಂಬ ರತ್ನಗಳಿಗೆ ಕಡಲಿನಂತೆ ಕಣಿಯಾದ, ಅವನತಜನ – ನಮಸ್ಕರಿಸುವ ಭಕ್ತಜನರ, ರಕ್ಷಾಕರಂ – ಪಾಲನಂಗೆಯ್ವುದಾದ, ಶಿವಲಿಂಗಂ – ಶುಭವಾದ ಗುರ್ತಾದ – (ಸಚ್ಚಿದಾನಂದ ಲಕ್ಷಣವಾದ ಶಿವಮೂರ್ತಿಯು) ಎಮಗೆ – ನಮಗೆ, ಸೌಖ್ಯಮಂ – ಸುಖವನ್ನು, ಈಗೆ – ಕೊಡಲಿ, ಆಶ್ವಾಸಾರಂಭದೊಳಿದು – ಮಂಗಳಪದ್ಯವಾಗಿರುವುದು. ನಿರ್ವಿಶೇಷ – ಚಿನ್ಮಾತ್ರವಾದ ಪರಬ್ರಹ್ಮವೆನಿಸುವ ಶಿವನಲ್ಲಿ ಶಕ್ತಿಸಂಬಂಧದಿಂದಾದ ಸಗುಣಮೂರ್ತಿಯೇ ಅನಂತಕಲ್ಯಾಣಗುಣಾಕರವಾದ ಶಿವಲಿಂಗವೆನಿಸುವುದು. ಆ ಮೂರ್ತಿ ಪಾರ್ವತೀಮುಖದರ್ಶನ ಸಂತೋಷ ಸಮಯವು ಭಕ್ತರ ಕ್ಷಣೋಪಯೋಗಿನಿಯೆಂದರಿತು, ತದವಸ್ಥವಾದ ಶಿವಲಿಂಗವು ನಮಗೆ ಸೌಖ್ಯವೀಯಲೆಂದು ಕವಿಯು ಪ್ರಾರ್ಥಿಸಿದುದು ಉಪಪನ್ನವಾಗಿರುವುದು. ಮುಂದೆ ಶಿವನು ಪಾರ್ವತೀಸಹಿತನಾಗಿ ಕಿರಾತವೇಷದಿಂದ ಅರ್ಜುನಂಗೆ ದರ್ಶನವೀವನೆಂಬ ಕಾವ್ಯಾರ್ಥಕ್ಕಿದು ಸೂಚಕವಾಗಿಯು ಇರುತ್ತೆ. ಆದಿಯಲ್ಲಿ ಶ್ರೀ ಶಬ್ದಪ್ರಯೋಗವು ಮಂಗಳಾರ್ಥಕವೆನಿಸುವುದು.

**ಚಂ॥** ಕೆದರ್ದ ಜಟಾಳಿ ಜಾರಿದ ಮೃಗಾಜಿನಮುಣ್ಮಿದ ಘರ್ಮವಾರಿಯಿಂ ।
ಕದಡಿದ ಭೂತಿ ಕಂದಿದ ಮೊಗಂ ನಿಡುಸುಯ್ಯುಸುವಿಂದಮಿರ್ಪುಗುಂ ॥
ದಿದ ಪುಟಿಕಂಪನಂಬಡೆದಕಯ್ಯ ಕಮಂಡಲು ವಕ್ಷದೊಳೊತ್ತಿದಂ ।
ಕಿದ ಗಳದಕ್ಷಮಾಲೆ ಬಿಡದೊಂದಿರೆ ಬಂದುದು ತಾಪಸವ್ರಜಂ ॥ ೧ ॥

**ಟೀಕ** ॥ ಕೆದರ್ದ– ಅರಳಿಕೊಂಡ, ಜಟಾ – ಜಡೆಗಳ, ಅಳಿ – ಆವಳಿಯೂ, ಜಾರಿದ – ಇಟ್ಟ ತಾವಿನಿಂ – ಸರುಗಿದ, ಮೃಗಾಜಿನಂ – ಜಿಂಕೆಯದೊವಲು, ಉಣ್ಮಿದ – ಹುಟ್ಟಿದ, ಘರ್ಮವಾರಿಯಿಂ – ಬೆಮರ ನೀರಿನಿಂದ ಕದಡಿದ, ತೀವಗೊಂಡು – ಬೆರತ, ಭೂತಿ – ಭಸ್ಮವೂ, ಕಂದಿದ – ಉಪವಾಸಾದಿ ಶ್ರಮದಿಂ ಬಾಡಿದ, ಮೊಗಂ– ಮುಖವೂ, ನಿಡುಸುಂಯ್ವ – ನಿಟ್ಟುಸುರು ಬಿಡುವ, ಅಸುವಿಂದಂ – ಪ್ರಾಣದಿಂದ, ಇರ್ಪುಗುಂದಿದ – ಇಂಪು ಕಡಿಮೆಯಾದ, ತುಟಿ ಓಷ್ಠವೂ, ಕಂಪನಂಬಡೆದ – ನಡುಗುವ ಕೈಯ – ಹಸ್ತದೊಳಗಣ, ಕಮಂಡಲು – ಜಲಪಾತ್ರವೂ, ವಕ್ಷದೋಳ್ – ಯೆದೆಯಲ್ಲಿ, ತೊಡಂಕಿದ – ಸಿಕ್ಕಿಕೊಂಡ, ಗಳದ – ಕೊರಳಿನ, ಅಕ್ಷಮಾಲೆ – ರುದ್ರಾಕ್ಷರ ಸರಗಳು, ಬಿಡದೆ – ವಿಯೋಗವಿಲ್ಲದೆ, ಒಂದಿರೆ – ಹೊಂದಿರಲಾಗಿ, ತಾಪಸವ್ರಜಂ– ಮುನಿಸಮೂಹವು, ಬಂದುದು – ಬಂತು (ಋಷಿಗಳು ಶಿವದರ್ಶನಕ್ಕೆ ಬಂದರು). ಸ್ವಭಾವೋಕ್ತ್ಯಲಂಕಾರ ॥ ಅವರ ಅವಸ್ಥಾಲಕ್ಷಣವು ಅಂತರಂಗಿಕವಾದ ಭಯಶಂಕಾದಿಗಳಂ ಸೂಚಿಸುವುದು.

**ವಚನ** ॥ ಅಂತು ತವಕಂ ಚಿತ್ತ ತಳ್ಳಂಕದಿಂ ಮಲ್ಲಿಗೊಂಡು ಮನದೊಳುರ್ಬಿ ದುಬ್ಬಸದುಬ್ಬೆ ಗಂಪರ್ಬಿಪರಿಕಲಿಸೆ ತಮಗೆ ತಾಳಲಸದಳವಾದಪೊಸತಪಸಿ ಯೋರ್ವಂನೆಗಳ್ದ ತಪದೆ ಸಕದಮಸಕಮನಸಮನಯನಂಗೆ ಬಿನ್ನಪಂಗೆಯ್ವ ಬಗೆಯೆಂಬಗೆದಂದಿಂದ) ಕೀಲನಗೇಂದ್ರ ತಪೋವನದ ತಪೋಧನರ್ಕಳ್ತಳ್ವದೇಳ್ತಂದು ಕೈಲಾಸದ ಮಣಿವಾಸಿಲೊಳ್ಶೈಲಾದಿಯಂ ಕಂಡು ದಂಡಪ್ರಣಾಮಂಗೆಯ್ದು ಕರಾರವಿಂದಂಗಳಂ ಮುಗಿದು ನಿಂದು ॥ ೧ ॥

**ಟೀಕ** ॥ ಅಂತು – ಹಾಗೆ, ತವಕಂಚಿತ್ತ – ಕೌತುಕವಂ ಪಡೆದ, ತಳ್ಳಂಕದಿಂ – ಆತುರದಿಂದ, ಮಲ್ಲಿಗೊಂಡು – ವ್ಯಾಕುಲಕೊಂಡು, ಮನದೊಳು – ಚಿತ್ತದಲಿ, ಉರ್ಬಿದ – ಹೆಚ್ಚಿದ, ಉಬ್ಬಸದ – ಸಂಕಟದ, ಉಬ್ಬೆಗಂ – ಉದ್ವೇಗವು, ಪರ್ಬಿ – ಹಬ್ಬಿ, ಪರಿಕಲಿಸೆ – ವ್ಯಾಪಿಸಲು, ತಮಗೆ, ತಾಳಲು – ಸಹಿಸಲು, ಅಸದಳವಾದ – ಸದರವಲ್ಲದ, ಹೊಸ ತಪಸಿಯೋರ್ವ – ಹೊಸತಪಸ್ವಿಯೊಬ್ಬನು, ನೆಗಳ್ದ – ಹೆಚ್ಚಿಸಿದ, ತಪದ – ಧ್ಯಾನಾದಿ ಯೋಗದ, ಎಸಕದ – ನಿಷ್ಠೆಯ, ಮಸಕಮಂ – ವಿರೋಧವನ್ನು, ಅಸಮನಯನಂಗೆದ – ವಿಷಮಾಕ್ಷನಾದ ಶಿವನಿಗೆ, ಬಿನ್ನಪಂಗೆಯ್ವ – ವಿಜ್ಞಾಪನವಂ ಮಾಡುವ, ಭಯಿಂ – ರೀತಿಯನ್ನು, ಬಗೆದಂದು – ಮನಸ್ಸಿಗೆ ತಂದುಕೊಂಡು, ಇಂದ್ರಕೀಲನಗೇಂದ್ರ – ಇಂದ್ರಕೀಲಪರ್ವತಶ್ರೇಷ್ಠದ, ತಪೋವನದ – ತಪೋಯೋಗ್ಯವಾದ ಅರಣ್ಯದಲ್ಲಿರುವ, ತಪೋಧನರ್ಕಳ್ – ತಪಸ್ಸೇ ಧನವಾಗಿವುಳ್ಳ ಮುನಿಗಳು, ತಳ್ವದೆ – ತಡಮಾಡದೆ, ಎಳ್ತಂದು – ಬಂದು, ಕೈಲಾಸದ – ರಜತಾದ್ರಿಯ, ಮಣಿವಾಸಿನೋಳ್– ನಮಸ್ಕರಿತಕ್ಕ ರತ್ನದ್ವಾರದ ಬಳಿಯಲ್ಲಿ, ಶೈಲಾದಿಯಂ ಕಂಡು

ಶಿಲಾದಪುತ್ರನಾದ ನಂದೀಶ್ವರನಂ ನೋಡಿ, ದಂಡಪ್ರಣಾಮಮಂಗೆಯ್ದು – ಅಡ್ಡಬಿದ್ದು, ಕರಾರವಿಂದಗಳಂ ಮುಗಿದು – ಕೈದಾವರೆಗಳಂ ಜೋಡಿಸಿಕೊಂಡು, ನಿಂದು – ನಿಂತು ॥

**ತಾ॥** ಇಂದ್ರಕೀಲಾದ್ರಿಯಲ್ಲಿದ್ದ ಮುನಿಗಳು ತಮ್ಮ ಬಳಿಗೆ ಹೊಸ ಮುನಿಯೋರ್ವ ಬಂದು ಸೇರಿ ಕ್ರೂರತಪವಂಗೆಯ್ವುದರಿಂದ ತಮಗುಂಟಾದ ಸಂತಾಪವನ್ನು ಶಿವನಿಗರಿಕೆಗೆಯ್ಯಬೇಕೆಂದು ಬೇಗನೆ ಬಂದು ಕೈಲಾಸದಡಿಯಲ್ಲಿ ಎಲ್ಲರೂ ನಮಸ್ಕರಿಸಿ ಬೇಕಾದ ರನ್ನದ ಬಾಗಿಲೊಳು ಮಣಿಪೀಠದಲ್ಲಿರುವ ನಂದೀಶ್ವರಂಗೆ ನಮಸ್ಕಾರಂಗೆಯ್ದು ನಿಂತರು.

**ಉ॥** ಇಂದುಧರಸ್ವರೂಪ ಭುವನತ್ರಯದೀಪ ಜಿತೇಕ್ಷುಚಾಪಸಾ ।
ನಂದರಸಾಂತರಂಗ ಸದಯಾಂಚದಪಾಂಗ ಶುಭಾನುಷಂಗಪ ಸಂ ॥
ಕ್ರಂದನಮುಖ್ಯಸೇವ್ಯಸಕಲಾಗಮಭಾವ್ಯಸಮಸ್ತಭವ್ಯಸಂ ।
ನಂದನಚೈತ್ರ ದೇವಜಯ ದಿವ್ಯಕಳೇಬರ ನಂದಿಕೇಶ್ವರ ॥ ೨ ॥

**ಟೀ** ॥ ಇಂದುಧರಸ್ವರೂಪ – ಚಂದ್ರಶೇಖರನ ಸಾರೂಪ್ಯವಂ ಪಡೆದಿರುವವನೇ! ಅಥವಾ ಶಿವಜ್ಞಾನಕಲೆಯೇ ನಂದಿಯಾದುದರಿಂದ ಶಿವನೇ ಸ್ವರೂಪವಾಗಿಯುಳ್ಳವನೇ, ಅಥವಾ ತನ್ನ ಸ್ವರೂಪವನೇ ಶಿವೋಹಮೆಂದರಿತ ಶಿವಾದ್ವೈತಿಯೇ, ಭುವನತ್ರಯದೀಪ – ಮೂರು ಲೋಕಗಳಿಗೂ ದೀವಿಗೆಯಂತೆ ಪ್ರಕಾಶಕನಾಗಿರುವವನೇ, ಜಿತೇಕ್ಷುಚಾಪ – ಗೆಲ್ಲಲ್ಪಟ್ಟ ಕಬ್ಬುವಿಲ್ಲನುಳ್ಳವನೇ, ಸಾನಂದರಸಾಂತರಂಗ – ಆನಂದರಸದಿಂದ ಕೂಡಿದ ಅಂತರಂಗವುಳ್ಳವನೇ! (ಸುಖಾನುಭವಸಹಿತ ಹೃದಯನು) ಸದಯ– ಕರುಣೆಯೊಡನೆ, ಅಂಚತ್ – ಪ್ರಸರಿಸುವ, ಅಪಾಂಗ – ಕುಡಿನೋಟಗಳುಳ್ಳವನೇ, ಶುಭಾನುಷಂಗ – ಕಲ್ಯಾಣಸಂಬಂಧವುಳ್ಳವನೇ, ಸಂಕ್ರಂದನಮುಖ್ಯಸೇವ್ಯ ಇಂದ್ರನೇ ಮೊದಲಾದವರಿಂದ ಸೇವಿಸಲ್ಪಡತಕ್ಕವನೇ, ಸಕಲಾಗಮಭಾವ್ಯ ೨೮ ಶಿವಾಗಮಗಳಿಂದಲೂ ಭಾವಿಸಲ್ಪಡತಕ್ಕವನೇ, ಸಮಸ್ತಭವ್ಯ ಸಕಲಕ್ಷೇಮಗಳೆಂಬ, ಸನಂದನ ಒಳ್ಳೆಯತೋಟಕ್ಕೆ – ಚೈತ್ರಮಾಸವಾಗಿರುವವನೇ (ಅಖಿಲ ಶುಭವರ್ಧಕ), ದೇವನ ಬೆಳಗುತ್ತಿರುವವನೇ, ದಿವ್ಯಕಳೇಬರ – ಅಪ್ರಾಕೃತ ದಿವ್ಯಮೂರ್ತಿಯೇ, ನಂದಿಕೇಶ್ವರನೇ, ಜಯ ಸರ್ವೋತ್ತಮನಾಗಿರು ॥

ಇದು ಸ್ತುತಿಯಲ್ಲವು, ಯಥಾರ್ಥಗುಣಕಥನವು. ಆದರೂ ಲೋಕತ್ರಯಕ್ಕೂ ದೀಪರೂಪನೆನುತಲೂ, ಭವ್ಯನಂದನ ಚೈತ್ರರೂಪನೆನುತಲೂ ಸ್ವರೂಪೋತ್ಪ್ರೇಕ್ಷಾಲಂಕಾರವಾಗಿಯೂ ರೂಪಕವಾಗಿಯೂ ಬಣ್ಣಿಸಿದ್ದರಿಂದ ಸ್ತುತಿಯೆನಲ್ತಕ್ಕುದು. ಮೊದಲನೆಯ ಪಾದದಲ್ಲಿ ಪಕಾರವೂ ೨ನೆಯ ಪಾದದಲ್ಲಿ ಗಕಾರವೂ, ೩ನೆಯ ಪಾದದಲ್ಲಿ ವ್ಯಕಾರವೂ,

೩೩ ಸಲ ಅಂತ್ಯಪ್ರಾಸವಾಗಿರುವುದರಿಂದ ಇದೊಂದು ಶಬ್ದಾಲಂಕಾರವೆನಿಸುವುದು ॥

**ವಚನ** ॥ ಎಂದು ಭಕ್ತಿ ಮಿಗೆ ಪೊಗಳ್ದು ನಿಜಾಗಮನಕಾರ್ಯಮಂ ವಿಜ್ಞಾಪನಂಗೆಯ್ದ ಮುನಿವರರನುಚಿತೋಕ್ತಿಯಿಂ ಮನ್ನಿಸಿ ಶೈಲಾದಿ ಸಭೆಯಂ ಪೊಕ್ಕು ಸರ್ವೇಶ್ವರಂಗರುಪಿದನುಜ್ಞೆಯಿಂ ತಾಪಸೇಂದ್ರರನೊಳಗಣ್ಗೆ ಪೂಗಿಸಲೊಡನಾಸಭಾಂತರಾಳರತ್ನಜ್ಯೋತಿಂಯೆನಿಸಿ ರಮಣೀಂಯವಾಗೆ ಸಾಲಂಕಾರಸಾರತರದಿವ್ಯಸಿಂಹಾಸನಾಸೀನನಾಗಿರ್ದ ಮಾರರಮಣನಂ ಕಂಡು ಮೈವೆರ್ಚಿದ ಪರಮಸಾತ್ವಿಕ ಭಕ್ತಿಯಿಂ ಪಾದಾಬ್ಜದೊಳ್ ಮೈಯಿಕ್ಕಿ ಮಣಿದೇಳ್ದು ನಿಟಿಲ ತಟಘಟಿತ ಕರಸಂಪುಟರಾಗಿ ಸಾಲ್ಗೊಂಡ ಸಮುಚಿತ ಸ್ಥಾನದೊಳ್ಸಂದಣಿಸಿ ನಿಂದು ॥ ೨ ॥

**ಟೀಕೆ** ॥ ಎಂದು, ಭಕ್ತಿಯು, ಮಿಗೆ – ಅತಿಶಯಿಸಲು, ಪೊಗಳ್ದು – ಹೊಗಳಿ, ನಿಜಾಗಮನಕಾರ್ಯಮಂ – ತಾವು ಬಂದ ಕೆಲಸವನ್ನು, ವಿಜ್ಞಾಪನಂಗೆಯ್ದ – ಬಿನ್ನೈಸಿದ, ಮುನಿವರರಂ – ಋಷಿಶ್ರೇಷ್ಠರನ್ನು, ಉಚಿತೋಕ್ತಿಯಿಂ – ಯೋಗ್ಯವಾದ ನುಡಿಯಿಂದ, ಮನ್ನಿಸಿ – ಸಂತೈಸಿ, ಶೈಲಾದಿ – ನಂದೀಶ್ವರನು, ಸಭೆಯಂ ಪೊಕ್ಕು – ಶಿವಸಭೆಗೆ ಹೋಗಿ, ಸರ್ವೇಶ್ವರಂಗರುಪಿ – ಜಗತ್ಪತಿಯಾದ ಶಿವನಿಗರಿಕೆ ಮಾಡಿ, ತದನುಜ್ಞೆಯಿಂ – ಆ ಶಿವನ ಅಪ್ಪಣೆಯಿಂದ, ತಾಪಸೇಂದ್ರರಂ – ಮುನಿಶ್ರೇಷ್ಠರನ್ನು, ಒಳಗಣ್ಗೆ – ಒಳಕ್ಕೆ, ಪೊಗಿಸಲ್ – ಪ್ರವೇಶಗೊಳಿಸುತಲು, ಒಡನೆ – ಕೂಡಲೆ, ಆಸಭಾಂತರಾಳ ಆ ಸಭೆಯ ಮಧ್ಯದಲ್ಲಿ, ರತ್ನಜ್ಯೋತಿಯೆನಿಸಿ – ರತ್ನದ ಬೆಳಗೆನಿಸಿ, ರಮಣೀಂಯವಾಗಿ – ಮನೋಹರವಾಗಿ, ಸಾಲಂಕಾರ – ಅಲಂಕಾರಸಹಿತವಾದ, ಸಾರತರ – ಅತ್ಯಂತ ಸ್ಥಿರವಾದ ದಿವ್ಯಸಿಂಹಾಸನ – ಪ್ರಕಾಶಿಸುವ ಭದ್ರಪೀಠದಲ್ಲಿ, ಆಸೀನನಾಗಿರ್ದ– ಕುಳಿತಿರುವನಾದ, ಉಮಾರಮಣನಂ ಕಂಡು – ಪಾರ್ವತೀಪತಿಯಂ ನೋಡಿ, ಮೈವೆರ್ಚಿದ – ಉನ್ಮಸ್ತಕವಾಗಿ ಹೊರಹೊಮ್ಮಿದ, ಪರಮಸಾತ್ವಿಕ ಭಕ್ತಿಯಿಂ – ಹೆಚ್ಚಾದ ಸತ್ವಗುಣವುಳ್ಳ ಪ್ರೀತಿಯಿಂದ, ಪಾದಾಬ್ಜದೊಳ್ – ಅಡಿದಾವರೆಯಲ್ಲಿ, ಮೈಯಿಕ್ಕಿ – ಅಡ್ಡಬಿದ್ದು, ಮಣಿದು – ನಮಸ್ಕರಿಸಿ, ಯೇಳ್ದು – ಎದ್ದು, ನಿಟಿಲತಟಘಟಿತ – ಫಾಲದೇಶದಲ್ಲಿ ಜೋಡಿಸಲ್ಪಟ್ಟ ಕರಸಂಪುಟರಾಗಿ ಹಸ್ತಗಳ ಭರಣಿಯುಳ್ಳವರಾಗಿ, ಸಾಲ್ಗೊಂಡು – ವರಸೆಯಾಗಿ ಸಮುಚಿತಸ್ಥಾನದೊಳ್ – ತಮಗೆ ತಕ್ಕ ಸ್ಥಲದಲ್ಲಿ, ಸಂದಣಿಸಿ ನಿಂದು – ಗುಂಪಾಗಿ ನಿಂತು ॥

**ತಾ**॥ ಮುನಿಗಳು ನಂದಿಯಂ ಹೊಗಳಿ ತಮ್ಮ ಕೆಲಸವನ್ನು ಬಿನ್ನೈಸಿದರು. ನಂದಿಯು ಹೋಗಿ ಶಿವನಿಗೆ ಅರಿಕೆ ಮಾಡಿ ಅಪ್ಪಣೆಯಂ ಪಡೆದು ಮುನಿಗಳನ್ನು ಸಭೆಯೊಳಕ್ಕೆ ಬಿಟ್ಟನು. ಅಲ್ಲಿ ಸಿಂಹಾಸನದ ಮೇಲೆ ಕುಳಿತಿರುವ ಶಿವನಂ ಕಾಣುತಲು ಮುನಿಗಳು ಸಾಷ್ಟಾಂಗವೆರಗಿ ಕೈಗಳಂ ತಲೆಯೊಳ್ಜೋಡಿಸಿಕೊಂಡು ನಿಂತರು ॥ ೨ ॥

೩॥ ಜಯಜಯಜಾಹ್ನವೀಧರ ಜನಾರ್ದನಪೂಜ್ಯ ಕಪರ್ದಿಕರ್ಮಸಂ ।
ಚಯಜಲದಪ್ರಭಂಜನನಿರಂಜನನಿರ್ಮದಭಕ್ತಹೃತ್ಕುಶೇ॥
ಶಯಕರುಣಾರ್ಕತಂತ್ರನಿಗಮಸ್ತುತನಿರ್ಜಿತಕಾಲಭೂಧರಾ ।
ಶ್ರಯಭುಜಗೇಂದ್ರಹಾರಭುವನೇಶ್ವರ ಬಾಲಶಶಾಂಕಶೇಖರಾ ॥ ೩ ॥

**ಟೀಕೆ** ॥ ಜಾಹ್ನವೀಧರ ಗಂಗೆಯ ಧಾರಕನೇ (ಬಾಂದೊರೆಯಂ ಪೊತ್ತವನೇ), ಜನಾರ್ದನಪೂಜ್ಯ–ವಿಷ್ಣುವಿನಿಂದ ಪೂಜಿಸಲ್ಪಡತಕ್ಕವನೇ, ಕಪರ್ದಿ– ಜಟಾಜೂಟವುಳ್ಳವನೇ, ಕರ್ಮಸಂಚಯ – ಪಾಪಸಮೂಹವೆಂಬ ಜಲದ ಮೋಡಗಳಿಗೆ, ಪ್ರಭಂಜನ ಗಾಳಿಯಾಗಿರ್ಪವನೇ, ನಿರಂಜನ – ನಿರ್ಲೇಪ್ತನೇ, ನಿರ್ಮದ – ಸೊಕ್ಕಿಲ್ಲದವನೇ, ಭಕ್ತಹೃತ್ –ಭಕ್ತರ ಹೃದಯವೆಂಬ, ಕುಶೇಶಯ – ತಾವರೆಗೆ, ತರುಣಾರ್ಕ – ಎಳನೇಸರಾಗಿರ್ಪವನೇ, ತಂತ್ರ – ಶಾಸ್ತ್ರಗಳಿಂದಲೂ, ನಿಗಮ – ವೇದಗಳಿಂದಲೂ, ಸ್ತುತ ಕೊಂಡಾಡಲ್ಪಟ್ಟವನೇ, ನಿರ್ಜಿತಕಾಲ ಗೆಲ್ಲಲ್ಪಟ್ಟ ಯಮನುಳ್ಳವನೇ, ಭೂಧರಾಶ್ರಯ – ಮೇರುವಿಗೆ ಆಧಾರವಾದವನೇ, ಭುಜಗೇಂದ್ರಹಾರ – ನಾಗರಾಜನೇ, ಮಾಲಿಕೆಯಾಗಿ ಉಳ್ಳವನೇ, ಭುವನೇಶ್ವರ – ಲೋಕಗಳಿಗೊಡೆಯನೇ, ಬಾಲಶಶಾಂಕಶೇಖರ – ಎಳೆಯಚಂದ್ರನೇ ಶಿರೋಭೂಷಣವಾಗಿ ಉಳ್ಳವನೇ, ಜಯಜಯ, ಸರ್ವೋತ್ತಮನಾಗಿರುವ ಸರ್ವೋತ್ತಮನಾಗಿರುವ,

ವಿವರಣ – ಜಾಹ್ನವೀ – ಜಹ್ನುವಿನ ಮಗಳು (ಭಗೀರಥನಿಂದ ತರಲ್ಪಟ್ಟ ಗಂಗಾಪ್ರವಾಹವು ಯಜ್ಞಶಾಲೆಯ ಮೇಲೆ ಬರುವುದೆಂದು ತಪೋಬಲವುಳ್ಳ ಜಹ್ನು ಋಷಿಯಿಂದ ಕೊಡಲ್ಪಟ್ಟಿತು. ಭಗೀರಥನಿಂ ಪ್ರಾರ್ಥಿತನಾದ ಜಹ್ನುಮುನಿಯು ಮರಳಿ ಗಂಗೆಯಂ ಹರನಿಗೆ ಬಿಟ್ಟುದ್ದರಿಂದ ಗಂಗೆಗೆ ಜಾಹ್ನವಿ ಎಂಬ ಹೆಸರಾಯಿತು). ಜನಾರ್ದನ ಜನಗಳನ್ನು ತನ್ನ ಮಾಯೆಯಿಂದ ಹಿಂಸೆಗೊಳಿಸುವನು. ವಿಷ್ಣು, ಜಲದ ನೀರನ್ನು ಕೊಡುವುದು! ಕುಶೇಶಯ – ನೀರಿನಲ್ಲಿ ಮಲಗಿರುವದು ಭೂಧರ – ಭೂಮಿಯನ್ನು ಧರಿಸಿದ್ದು, ಬೆಟ್ಟ (ಭೂಗೋಳದ ಮೇಲೆ ಸಮುದ್ರಜಲಭಾಗವು ಅಧಿಕವಾಗಿರುವುದರಿಂದ ಮಣ್ಣು ಕರಗಿ ಬಿರುಕುಗೊಂಡು ನೀರಿನಲ್ಲಿ ಕದಡಿಹೋಗದ ಹಾಗೆ ಭೂಮಧ್ಯದಲ್ಲಿ ಪರ್ವತಗಳು ಆಧಾರವಾಗಿ ನಿಂತಿರುವುದರಿಂದ ಭೂಧರಗಳೆನಿಸಿದವು) ಭುಜಗ – ಭುಜಗಳಿಂದ ಚರಿಸುವವು. ಕಾಲಿಲ್ಲದ್ದರಿಂದ ಹರಿದಾಡುವುವು. ಹಾವುಗಳು. ಶಶ ಅಂಕ – ಮೊಲನು ಗುರ್ತಾಗಿ ಉಳ್ಳವನು (ಮೊಲನಹಾಗೆ ಆಕಾರವುಳ್ಳ ಕಳಂಕಮುಳ್ಳವನು, ಚಂದ್ರನು ॥ ೩ ॥

(ಮುಂದುವರಿಯುವುದು)

# ಬೆಡಗಿನ ವಚನಗಳು – ಒಂದು ಅವಲೋಕನ

ಎಚ್.ಎಸ್. ಸಿದ್ಧಗಂಗಪ್ಪ

(ಹಿಂದಿನ ಸಂಚಿಕೆಯಿಂದ)

ಬೆಡಗಿನ ವಚನಗಳ ಬಗೆಗೆ ಚೆನ್ನಪ್ಪ ಉತ್ತಂಗಿಯವರು "ಅನುಭಾವ ಜನ್ಯ ಶಬ್ದಗಳು, ಶರಣರ ಹೃದಯದಿಂದ ಹೊರಬೀಳುವಾಗ ಅನೇಕ ಸಲ ಬೆಡಗಿನ ರೂಪತಾಳುತ್ತವೆ. ಹೃದಯಕ್ಕೆ ದೈವೀಶಕ್ತಿಯ ಕಾವು ತಟ್ಟಿದಾಗ ಶರಣರಿಗೆ ಅಮಿತಾನಂದವಾಗುತ್ತದೆ. ಅದು ಅವರ್ಣನೀಯ, ಅನಿಸಿದಂತೆ ಹೇಳಬೇಕೆಂದರೆ ಶಬ್ದ ಸಾಲವು. ಭಾಷೆ ತತ್ತರಿಸುತ್ತದೆ. ಆಗ ಸೂಚ್ಯಾರ್ಥದಿಂದ ಕೂಡಿದ ಬೆಡಗಿನ ವಚನಗಳು ಹುಟ್ಟಿಕೊಳ್ಳುತ್ತವೆ"[17] ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಡಾ. ಎಲ್.ಬಸವರಾಜು ಅವರು "ಬೆಡಗಿನ ವಚನಗಳಲ್ಲಿ ಹಲವಾರು ಪ್ರಭೇದಗಳಿವೆ. ವಿರೋಧಾಭಾಸವೇ ಅವೆಲ್ಲಕ್ಕೂ ಜೀವಾಳ. ಪ್ರಕೃತಿಗೆ, ಸಮಾಜಕ್ಕೆ, ಸಂಪ್ರದಾಯಕ್ಕೆ ವಿರುದ್ಧವೆಂಬಂತಹ ಗೌಣವಾದ ಅರ್ಥಬರುವ ಮಾತುಗಳನ್ನಾಡಿ ಅವಕ್ಕೆ ಬಳಸಿರುವ ಪದಗಳಿಗೆ ಬೇರೊಂದು ಮುಖ್ಯವಾದ ಅಂತರಾರ್ಥವು ಬರುವಂತಾಗಿಸುವುದೇ ಇವುಗಳ ಮುಖ್ಯತಂತ್ರ" ಎಂದು ಹೇಳಿದ್ದಾರೆ.[18] ಡಾ. ಎಚ್.ತಿಪ್ಪೇರುದ್ರ ಸ್ವಾಮಿಯವರು "ಬೆಡಗಿನ ವಚನಗಳಲ್ಲಿ ಬರುವುದು ಶ್ಲೇಷೆಯ ಚಮತ್ಕಾರವಲ್ಲ. ಶ್ಲೇಷೆಯೆಂದರೆ ಒಂದು ಪದಕ್ಕೆ ಎರಡು ಅರ್ಥಗಳು ಅಥವಾ ಹೆಚ್ಚಿನ ಅರ್ಥವನ್ನುಂಟು ಮಾಡುವ ಚಮತ್ಕಾರ. ಆದರೆ ಬೆಡಗಿನ ವಚನಗಳಲ್ಲಿ ಪದದ ತೋರಿಕೆಯ ಅರ್ಥವೇ ಒಂದಾದರೆ ಅವು ವಚನದಲ್ಲಿ ಪ್ರತಿನಿಧಿಸುವ ಅರ್ಥವೇ ಇನ್ನೊಂದು"[19] ಎಂದಿದ್ದಾರೆ.

"ವಚನಗಳು ನೆನಪಿನಲ್ಲಿರಬೇಕು. ಆ ತತ್ತ್ವಾರ್ಥ ಮನನವಾಗಬೇಕಾದರೆ ವಿರುದ್ಧಾರ್ಥಕ ಮಾತುಗಳಲ್ಲಿ ಹೇಳಬೇಕೆಂದು ವಚನಕಾರರು ಈ ಬೆಡಗಿನ ರೀತಿಯನ್ನು ಬಳಸಿರಬೇಕು. ಒಡೆದು ನೋಡಿದಾಗ ವಿಶಿಷ್ಟಾರ್ಥ ಹೊಳೆಯುತ್ತದೆ. ಇಲ್ಲಿ ಪ್ರತಿ ಮಾತಿಗೂ ಸಾಂಕೇತಿಕ ಅರ್ಥವಿರುತ್ತದೆ. ಬೆಡಗಿನ ವಚನಗಳಲ್ಲಿ ಅರ್ಥನಿರ್ದಿಷ್ಟ ಅನನ್ಯ, ಇವುಗಳನ್ನು ಅರ್ಥಮಾಡಿಕೊಳ್ಳಲು ಅಪಾರವಾದ ಪಾಂಡಿತ್ಯ, ಯೋಗಜ್ಞಾನ ಅವಶ್ಯಕ" ಎಂಬುದು ಹಿರಿಯ ವಿದ್ವಾಂಸ ಎಚ್. ದೇವೀರಪ್ಪ ಅವರ ಅಭಿಪ್ರಾಯವಾಗಿದೆ. ಈ ಮೇಲಿನ ಅಭಿಪ್ರಾಯಗಳನ್ನು ಗಮನಿಸಿದಾಗ ವಚನಕಾರರು ತಾತ್ವಿಕ ವಿಚಾರಗಳನ್ನು, ಅನುಭಾವವನ್ನು ರಹಸ್ಯ ರೀತಿಯಲ್ಲಿ ನಿರೂಪಿಸಲು ಬೆಡಗಿನ ರೀತಿಯನ್ನು ಅಭಿವ್ಯಕ್ತ

ಮಾಧ್ಯಮವನ್ನಾಗಿಸಿಕೊಂಡರೆಂಬುದು ಸ್ಪಷ್ಟ. ತಮಗೆ ಹಿಂದೆ ಇದ್ದ ಸಾಂಪ್ರದಾಯಿಕ ಅಭಿವ್ಯಕ್ತಿ ಮಾಧ್ಯಮವನ್ನು ಬಿಟ್ಟು ಯಾವುದೇ ಸಂಗತಿಯಾಗಲಿ; ಸರಳ ರೀತಿಯಲ್ಲಿ ನಿರೂಪಿಸಲು ಶ್ರಮಿಸಿದ ವಚನಕಾರರು ಈ ರೀತಿಯ ಬೆಡಗಿನ (ರಹಸ್ಯ) ವಿಧಾನವನ್ನು ಅನುಸರಿಸಿದ್ದೇಕೆ? ಎಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ. ಇದಕ್ಕೆ ಎರಡು ರೀತಿಯಲ್ಲಿ ಉತ್ತರಿಸಬಹುದು. ಮೊದಲನೆಯದಾಗಿ ತಾತ್ವಿಕ ವಿಚಾರಗಳು ಯೋಗ್ಯರಿಗೆ ಮಾತ್ರ ತಿಳಿಯಬೇಕು. ಆಧ್ಯಾತ್ಮ ವಿಚಾರವನ್ನು ಸಂತೆಯಲ್ಲಿ ಉಪದೇಶ ಮಾಡಿದಂತಾಗುತ್ತದೆ. ಸತ್ಪಾತ್ರರಿಗೆ, ಬೆಡಗನ್ನು ಅರ್ಥ ಮಾಡಿಕೊಳ್ಳುವವರಿಗೆ ಮಾತ್ರ ಎನ್ನುವ ಪ್ರವೃತ್ತಿ, ಎರಡನೆಯದಾಗಿ ಹೇಳಬೇಕೆಂದರೆ ಯಾವುದೇ ವಿಷಯ ಮನನವಾಗಬೇಕಾದರೆ ಅದನ್ನು ವಿರುದ್ಧಾರ್ಥಕ ರೀತಿಯಲ್ಲಿ ಹೇಳಿದರೆ ಸಾಧ್ಯ ಎಂಬ ಭಾವನೆಯೂ ಇದ್ದಿರಬಹುದು. ಅದ್ಭುತ ಅತಿಶಯವಾದುದನ್ನು ಹೇಳಲು ಈ ರೀತಿಯ ವಿರುದ್ಧಾರ್ಥಕ ತಂತ್ರವನ್ನು ಬಳಸಿರುವುದು ಪುರಾತನ ಕಾಲದಿಂದಲೂ ಇದೆ. ಋಗ್ವೇದದಲ್ಲಿ ಬರುವ–

> 'ದ್ವಾಸುಪರ್ಣಾ ಸಯುಜಾವೃಸಖಾಯ ಸಮಾನಂ ವೃಕ್ಷ ಪರಿಷಸ್ವಜಾತೇ
> ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತಿ ಅನಶ್ನನ್ನನ್ಯೋ ಅಭಿಚಾಕರೀತಿ.

ಎಂಬ ಶ್ಲೋಕವನ್ನು ಗಮನಿಸಿದಾಗ ಈ ರೀತಿ ರಹಸ್ಯವಾಗಿ ವಿಷಯ ನಿರೂಪಿಸುವ ವಿಧಾನ ವೇದದಷ್ಟೇ ಹಳೆಯದು ಎಂಬುದು ಸ್ಪಷ್ಟವಾಗುತ್ತದೆ. ಇದಕ್ಕೆ ಎಸ್.ಬಿ. ದಾಸಗುಪ್ತ ಅವರ 'The tradition of the use of enigmas to conceal the real meaning from the ordinary people is the old as the Vedas' ಎಂಬ ಹೇಳಿಕೆಯೂ ಪೂರಕವಾಗುತ್ತದೆ. ಇವುಗಳ ಮೂಲತಂತ್ರ ಸಾಹಿತ್ಯದಲ್ಲಿಯೂ ಇದೆ ಎಂಬ ಡಾ. ಎಂ. ಚಿದಾನಂದಮೂರ್ತಿಯವರ ಅಭಿಪ್ರಾಯವನ್ನು ಈಗಾಗಲೇ ಗಮನಿಸಿಯಾಗಿದೆ.[20]

ಈ ರೀತಿಯ ಬೆಡಗಿನ ವಿಧಾನವನ್ನು ವಚನಕಾರರ ನಂತರ ಕಬೀರದಾಸರಲ್ಲಿಯೂ ಕಂಡುಬರುತ್ತದೆ. ಇದನ್ನು ಹಿಂದಿಯಲ್ಲಿ 'ರಹಸ್ಯವಾದ' ಎಂದು ಕರೆಯಲಾಗಿದೆ. ಆದರೆ ಕಬೀರ್‌ದಾಸರ ಕೃತಿಗಳಲ್ಲಿ ಇದನ್ನು 'ಉಲಟಬಾಂಸಿ' ಎಂದು ಕರೆಯುತ್ತಾರೆ. 'ಉಲಟಬಾಂಸಿ' ಎಂದರೆ ವಿಪರೀತ ಕಥನ, ತಿರುಗಿ ಎಳೆಯುವ ಶ್ವಾಸ–ಆಧ್ಯಾತ್ಮಲೋಕ ವಾಸಕ್ಕೆ ಸಂಬಂಧಿಸಿದ ವಿಷಯವನ್ನು ಕುರಿತು ವರ್ಣಿಸುವ ಪ್ರಯೋಗ ಇತ್ಯಾದಿಯಾಗಿ ಅರ್ಥವನ್ನು ವಿದ್ವಾಂಸರು ಹೇಳಿದ್ದಾರೆ. ಉದಾಹರಣೆಗಾಗಿ ಕಬೀರರ ಈ ಕೆಳಗಿನ ಪದ್ಯವನ್ನು ಗಮನಿಸಬಹುದು –

> 'ಸಮೂಂದರ ಲಾಗೀ ಆಗೀ ನದಿಯಾಂಜಲಿ ಕೊಯಲಾ ಭಯೀಂ.'

ಇದರ ವಾಚ್ಯಾರ್ಥ – "ಸಮುದ್ರಕ್ಕೆ ಬೆಂಕಿ ತಗುಲಿತು, ನದಿಗಳು ಸುಟ್ಟು ಬೂದಿಯಾದವು" ಎಂಬುದು. ಆಧ್ಯಾತ್ಮಿಕ ದೃಷ್ಟಿಯಿಂದ ಈ ಪದ್ಯವನ್ನು

ಗಮನಿಸುವುದಾದರೆ "ಜ್ಞಾನಾಗ್ನಿ ಶರೀರವೆಂಬ ಸಮುದ್ರಕ್ಕೆ ತಾಕಿತು. ಇಂದ್ರಿಯಗಳಲ್ಲಿನ ವಿಷಯವಾಸನೆ ಎಂಬ ನದಿಗಳು ಸುಟ್ಟುಹೋದವು" ಎಂದಾಗುತ್ತದೆ. ಇದರ ಒಟ್ಟು ಅಂತರಾರ್ಥ 'ಗುರುವಿನ ಸಹಾಯದಿಂದ ಸಾಧಕನಲ್ಲಿ ಜ್ಞಾನೋದಯವಾಗಿ ಅವನಲ್ಲಿರುವ ಭೋಗ ಲಾಲಸೆಗಳು ಹಿಂಗಿದವು"[21] ಎಂದು.

ಬೆಡಗಿನ ವಚನಕಾರರಲ್ಲಿ ಅಲ್ಲಮ ಪ್ರಥಮ ಹಾಗೂ ಶ್ರೇಷ್ಠ ವಚನಕಾರ. ಅವನಲ್ಲಿ ಕಾಣುವ ಯೋಗ ಸಮನ್ವಯದ ಸಿದ್ಧಿ ಉನ್ನತವಾದುದು. ಹಠಯೋಗ, ರಾಜಯೋಗ ಗಳಲ್ಲಿ ನಡೆದು ಶಿವಯೋಗ ಸಿದ್ಧಿಯನ್ನು ಸಾಧಿಸಿರುವ ಅಂಶ ಅವನ ವಚನಗಳಲ್ಲಿ ಕಾಣುತ್ತದೆ. ಅಲ್ಲಮಪ್ರಭು ಮೂರ್ತಿ ಸ್ವರೂಪದಲ್ಲಿದ್ದಂತೆ ಕಂಡುಬಂದರೂ ಅಮೂರ್ತಸ್ವರೂಪಿ, ಚಾಮರಸ ಹೇಳಿರುವಂತೆ ಬಯಲ ದೇಹಿ.

ಅನುಭಾವಕ್ಕೆ ಮಹತ್ವ ಕೊಟ್ಟು ಆ ಮಾರ್ಗದಲ್ಲಿ ಮಾನವತೆ ಪಡೆಯಬಹುದಾದ ಮಹತ್ತರ ಸ್ಥಿತಿಯನ್ನು ಗಳಿಸಿದವನು ಅಲ್ಲಮಪ್ರಭು. ತಾನು ಸಾಧನೆಯ ಮೂಲಕ ಪಡೆದ ಆಧ್ಯಾತ್ಮಿಕ ಅನುಭಾವವನ್ನು ಅಭಿವ್ಯಕ್ತಿಗೊಳಿಸುವಲ್ಲಿ ಗಟ್ಟಿಗನಾದ ಈತ ಆಧ್ಯಾತ್ಮಿಕ ವಿಷಯವನ್ನು ಬೆಡಗಿನ ರೀತಿಯಲ್ಲಿ ನಿರೂಪಿಸಿದ್ದಾನೆ. ಸಿಂಗಳದ ಸಿದ್ಧ ಬಸವರಾಜದೇವರು ಪ್ರಭುವಿನ ಹನ್ನೆರಡು ವಚನಗಳನ್ನು ಆರಿಸಿಕೊಂಡು ಅವುಗಳನ್ನು ಬೆಡಗಿನ ವಚನಗಳೆಂದು ಕರೆದು ವ್ಯಾಖ್ಯಾನಿಸಿದ್ದಾರೆ.

> ರಕ್ಕಸಿಗಿಬ್ಬರು ಮಕ್ಕಳು; ತೊಟ್ಟಿಲ ಮೇಲೈವರು,
> ರಕ್ಕಸಿ ಬಾಣತಿಯಾದರೆ ಮಕ್ಕಳಿಗಿನ್ನೆಂತೊ?
> ತೊಟ್ಟಿಲ ತೂಗುವೆ, ಜೋಗುಳ ಹಾಡುವೆ,
> ರಕ್ಕಸಿ ಬಾಣತಿ ತೊಟ್ಟಿಲ ನುಂಗಿತ್ತು
> ಇದೇನು ಹೇಳಾ ಗುಹೇಶ್ವರಾ.

'ಅವಿದ್ಯೆಯ ಮಾಯೆ. ಆ ಮಾಯೆ ರಕ್ಕಸಿ. ಅವಳು ತನ್ನ ಸಂಕಲ್ಪದಿಂದ ಜೀವ ಮತ್ತು ಪ್ರಾಣ ಎಂಬೆರಡು ಮಕ್ಕಳನ್ನು ಪಡೆದು ಬಾಣಂತಿಯಾಗಿದ್ದಾಳೆ. ಈ ಮೊದಲೇ ಅವಳಿಂದ ಜನಿಸಿದ ಪಂಚಭೂತಗಳೆಂಬ ಐವರು ಮಕ್ಕಳು; ಅದೇ ತೊಟ್ಟಿಲಲ್ಲಿವೆ. ಹೀಗಾಗಿ ಅವಳು ಒಟ್ಟು ಏಳು ಮಕ್ಕಳ ತಾಯಿ ರಾಕ್ಷಸಿ. ಈ ಮಾಯಾ ರಕ್ಕಸಿಗೆ ತನ್ನ ಮಕ್ಕಳನ್ನು ನುಂಗುವ ಆಸೆ (ಕೆಲವು ರಾಕ್ಷಸ ಪ್ರವೃತ್ತಿಯ ಪ್ರಾಣಿಗಳು ತಾವು ಪಡೆದ ಮಕ್ಕಳನ್ನೇ ನುಂಗುತ್ತವೆ). ಆದರೆ ಜೀವಾತ್ಮನು ತೊಟ್ಟಿಲ ತೂಗಿ, ಜೋಗುಳ ಹಾಡಿ ಸಂತೈಸುತ್ತಿದ್ದಾನೆ. ಆ ಮಾಯಾರಕ್ಕಸಿ ಜಪ್ಪಿಸಿ ಕುಳಿತು ತೊಟ್ಟಿಲ ಸಹಿತ ಆ ಏಳು ಮಕ್ಕಳನ್ನು ನುಂಗುತ್ತಾಳೆ. ಇದು ಆಶ್ಚರ್ಯ, ಅಂದರೆ ದೇಹವೇ ನಾನೆಂಬ ಮಾಯೆ. ಇದನ್ನು ನುಂಗಿ ನೀರು ಕುಡಿಯುವ ರಕ್ಕಸಿ. ಆದರಿಂದ ಮಾಯೆಯನ್ನು ತೊರೆದು ತಾನು ಯಾರೆಂಬುದನ್ನು ಅರಿತು ಆಚರಿಸುವವನು ಪರಮಾತ್ಮನಾಗಬಲ್ಲ" ಎಂಬುದಾಗಿ

ಈ ಬೆಡಗಿನ ವಚನವನ್ನು ಅರ್ಥೈಸಬಹುದು.[22]

ಸಮಾಜದ ಜನರ ನಡೆ–ನುಡಿ ಒಂದಿಲ್ಲದ ಬದುಕು, ಅವರ ಮಾತನ್ನು ಕೇಳಲು ಕೂಡ ಅವನಿಂದ ಆಗಿಲ್ಲ. ಈ ಸಾಮಾನ್ಯ ಅರಿವನ್ನೇ ಬೆಡಗಿನಲ್ಲಿ ಹೀಗೆ ಅಭಿವ್ಯಕ್ತಿಪಡಿಸಿದ್ದಾನೆ.

ಜಗತ್ಸೃಷನಹ ಅಜನ ಕೊಂಬು ಮುರಿಯಿತ್ತು
ಧರೆಯ ಚಂದ್ರ ಸೂರ್ಯರಿಬ್ಬರೂ ನೆಲಕ್ಕೆ ಬಿದ್ದರಲ್ಲಾ !
ಉದಯ ನಿಂದಡೆ ಅಸ್ತಮಾನಹುದು
ಊರುಬೆಂದು ಉಲುಹಳಿದುದು
ಇದೇನು ಸೋಜಿಗವೋ?
ದೇವ ಸತ್ತ ದೇವಿ ಕೆಟ್ಟಳು ಆನು ಬದುಕಿದೆನು, ಗುಹೇಶ್ವರ.

ಜಗತ್ತಿನ ಸೃಷ್ಟಿಗೆ ಕಾರಣನಾದವ ನಮ್ಮ ನಡುವೆ ಇಲ್ಲ. ಸೂರ್ಯ–ಚಂದ್ರರೂ ನಮ್ಮ ಜೊತೆಯಿಲ್ಲ, ಆದರೂ ನಿರಂತರ ಇವರ ಕ್ರಿಯೆ ನಿಲ್ಲದೆ ಮುಂದುವರಿದಿದೆ. ಇಲ್ಲಿ ನಾವು ಇದನ್ನು ಬದಲಾಯಿಸುತ್ತೇನೆಂದರೆ ಸಾಧ್ಯವಾದೀತೆ? ಎಲ್ಲವೂ ನನ್ನಿಂದಲೇ ಎಂಬ ಭಾವನೆ ಮನಸ್ಸಿನಲ್ಲಿ ಉದಯಿಸಿದಾಗ 'ನಾನು' ಎಂಬ ಅಹಂಕಾರ ಉಂಟಾಗುವುದು ಸಹಜ. ಸೃಷ್ಟಿಕರ್ತ ತನ್ನ ಸೃಷ್ಟಿಯ ಜೀವಗಳಲ್ಲಿ ತುಂಬಿದ ಹಲವು ಬಗೆಯ ಸ್ವಭಾವ ಅವನಲ್ಲಿ ಇರಬಾರದೆಂದೇನಿಲ್ಲ. ತನ್ನ ಕೋಳಿಯ ಕೂಗಿನಿಂದಲೇ ಜಗತ್ತಿಗೆ ಬೆಳಕಾಗುತ್ತದೆ ಎಂಬ ಮುದುಕಿಯ ಕತೆಯಂತಾಯಿತು ಬ್ರಹ್ಮನ ಆಟವೂ. ಅವನೇ ಸೃಷ್ಟಿಯ ಕ್ರಿಯೆಯನ್ನು ನಿರಾಕರಿಸಿದಾಗ ಸೂರ್ಯ–ಚಂದ್ರರಿಗೂ ಕೆಲಸವಿಲ್ಲ. ಜಗದ ಜೀವರಾಶಿಯಂತೂ ಇಲ್ಲವೇ ಇಲ್ಲ. ತನ್ನದೂ ಕೆಲಸ ಇಲ್ಲವೆಂದಾದ ಮೇಲೆ ದೇವರಾದರೂ ಹೇಗೆ ಬದುಕಿಯಾರು? ಆದರೆ ದೇವರು ಅಮರರಲ್ಲವೇ? ಇದುವೇ ಜಗದ ಬಿನ್ನಾಣದ ಬೆಡಗು. ರಾಜಸ ಅಹಂಕಾರ ಮುರಿಯಿತು. ಶಾಂತಿದಾಂತಿಗಳೆರಡು ಭಿನ್ನವಾಗಿ ಶರೀರದಲ್ಲಿ ಗತವಾಗಿ ಹೋದವು. ಜನನಗೆಟ್ಟರೆ ಮನೋಲಯವಾಗುವುದು. ಅದು ಕಾರಣ ಊರೆಂಬ ದೇಹ ಜ್ಞಾನಾಗ್ನಿಯಲ್ಲಿ ದಗ್ಧವಾಗಿ ಶಬ್ದಮಥನಗಳು ನಿಂತವು. ಹೀಗೆ ದೇಹಭಾವ ನಷ್ಟವಾಗಿ ವಾಗ್ವ್ಯವಹಾರವಳಿಯಲು ಶಿವಶಕ್ತಿಗಳೆರಡೂ ನಿವೃತ್ತಿಯಾಗಿ ಆ ಶಿವಶರಣನು ಪರಮಸುಖಿಯಾಗಿರುವ ಚಿತ್ರವನ್ನು ಅಲ್ಲಮನ ಬೆಡಗಿನ ವಚನ ನೀಡುತ್ತದೆ.[23]

ಅಲ್ಲಮ ತನ್ನ ಬೆಡಗಿನ ವಚನಗಳನ್ನು ರಚಿಸುವಾಗ ಜನಸಾಮಾನ್ಯರ ಜೀವನದಲ್ಲಿ ಕಂಡುಬರುವ ವಿಚಾರಗಳನ್ನೇ ಚಿತ್ರಗಳನ್ನಾಗಿ ತೆಗೆದುಕೊಳ್ಳುತ್ತಾನೆ. ತುಂಬಾ ಪ್ರತಿಭಾವಂತ ನಾಗಿರುವುದರಿಂದ ಕಾವ್ಯಾತ್ಮಕವಾಗಿ ಹೇಳುವಲ್ಲಿಯೂ ಯಶಸ್ಸನ್ನು ಪಡೆಯುತ್ತಾನೆ. ಈ ತೆರನಾದ ಕಾವ್ಯಾತ್ಮಕ ಗುಣಕ್ಕೆ ಶೂನ್ಯ ಸಂಪಾದನೆಯಲ್ಲಿ ಬರುವ ಕೆಲವು ಪ್ರಸಂಗಗಳ ವಚನಗಳೂ ನಿದರ್ಶನವಾಗಬಲ್ಲವು. ಅಲ್ಲಮ ಲೌಕಿಕ ಆಂತರಂಗಿಕ ವಿಷಯ

ಹೇಳುವಲ್ಲಿಯೂ ಅಷ್ಟೇ ಯಶಸ್ಸನ್ನು ಪಡೆಯುತ್ತಾನೆ. ಯಾವ ದೃಷ್ಟಿಕೋನದಿಂದ ನೋಡಿದರೂ, ಅಲ್ಲಮನ ಬೆಡಗಿನ ವಚನ ಸುಂದರವಾಗಿಯೇ ಕಾಣಿಸುತ್ತದೆ.

ಅಲ್ಲಮ ತನ್ನ ಬೆಡಗಿನ ವಚನಗಳಿಗೆ ವಿಶ್ವದ ಬೇರೆ ಬೇರೆ ವಸ್ತು, ಅನುಭವಗಳನ್ನು ಅನ್ವಯಿಸಿ ಹೇಳುತ್ತಾನೆ. ಲೌಕಿಕ ವ್ಯವಹಾರದಲ್ಲಿ ತೊಡಗಿರುವ ವ್ಯಕ್ತಿ, ಆ ಕೂಪದಿಂದ ಹೊರಬರಬೇಕಾದರೆ ಅರಿವು, ಜ್ಞಾನ ಬೇಕಾಗುತ್ತದೆ. ಯಾರಿಂದಲೋ ಇದನ್ನು ಎರವಲು ಪಡೆಯಬೇಕಾಗಿಲ್ಲ. ತನ್ನಲ್ಲಿ ಹುದುಗಿರುವ ಜ್ಞಾನದ ಬಗೆಗೆ ತನಗೇ ವಿಶ್ವಾಸ, ನಂಬಿಕೆ ಇಲ್ಲವಾದಾಗ ಕಂಡಕಂಡಗೆ ಹೋಗಿ ಅಪಾಯದ ಅಂಚನ್ನು ಮುಟ್ಟಿ ಹೇಗೆ ಪರಿತಪಿಸುತ್ತಾನೆಂಬುದನ್ನು ತನ್ನ ವಚನದ ಮೂಲಕ ಸಾದರಪಡಿಸಿದ್ದಾನೆ.

> ಆನೆಯ ಹೇಣಬಿದ್ದರೆ ಕೋಡುಗ ಮುದ್ದಾಡಿಸಿತ್ತ ಕಂಡೆ
> ಕಾಡೊಳಗೊಬ್ಬ ಸೂಳೆ ಕರೆದೊಕ್ಕೆಯ ಕೊಂಬುದ ಕಂಡೆ
> ಹಾಳೂರೊಳಗೆ ನಾಯ ಜಗಳವ ಕಂಡೆ
> ಇದೇನು ಸೋಜಿಗ ಹೇಳಾ ಗುಹೇಶ್ವರಾ.

ತನ್ನನ್ನು ತಾನು ಅರಿಯದ ಜೀವಿಯೊಬ್ಬ ಜೀವಿಸಿದ್ದೂ ಇಲ್ಲದಂತೆಯೇ, ಮನಸ್ಸು ಇಂಥ ಕಡೆಗೆ ಇನ್ನಷ್ಟು ಪ್ರಚೋದಿಸುತ್ತಲೇ ಇರುತ್ತದೆ. ಮಾಯಾಜಾಲದಲ್ಲಿ ಮುಳುಗಿದ್ದರೆ ತನ್ನ ಆಯುಷ್ಯಕ್ಕೆ ಕೊರತೆ ಎಂಬುದನ್ನು ತಿಳಿಯದಾಗುತ್ತಾನೆ. ವಿವೇಕವನ್ನು ಕಳೆದುಕೊಳ್ಳುತ್ತಾನೆ. ಇಂದ್ರಿಯ ವಿಷಯ ವಾಸನಾಯುಕ್ತವಾದ ಬದುಕೇ ಸುಖವನ್ನು ಕೊಡುತ್ತದೆಂಬ ಭ್ರಮೆ ಅವನಿಗೆ. ಅವನಿಗೆ ಅಲ್ಪತೃಪ್ತಿಯ ಬೆನ್ನಹತ್ತದೆ ನಿತ್ಯ ಸುಖವನ್ನು ಬಯಸುವುದು ಅವನ ನಿಲವು.

ಅಲ್ಲಮನ ಬೆಡಗಿನ ವಚನಗಳ ಕಾವ್ಯಗುಣಕ್ಕೆ ಸರಳ ವಚನಗಳು ಹೇಗೆ ಪ್ರೇರಣೆ ಆದವೋ; ಹಾಗೇ ಅಲ್ಲಮನ ಸರಳ ವಚನಗಳಲ್ಲಿಯೇ ತಾನೇ ಪ್ರಯೋಗಿಸಿದ ಬೆಡಗಿನ ವಚನಗಳಿಗೆ ಅದರ ಅರ್ಥದ ಪದಗಳನ್ನು ಜೊತೆಗೆ ಹೇಳಿಯೇ ಬಿಡುತ್ತಾನೆ. ಆ ಅರ್ಥಗಳೇ ಟೀಕಾಕಾರರಿಗೆ ವಿಶೇಷಾರ್ಥಗಳಿಗೆ ಟೀಕೆ ಬರೆಯಲು ಪ್ರೇರಣೆ ಆಗಿರಬೇಕು. ಗೊಗ್ಗಯ್ಯ, ಮುಕ್ತಾಯಕ್ಕ, ಮಹಾದೇವಿಯಕ್ಕನ ಪ್ರಸಂಗದಲ್ಲಿ ಅಲ್ಲಮನು ಹೇಳುವ ವಚನಗಳು, ಅದಕ್ಕೆ ಪ್ರತಿಯಾಗಿ ಬರುವ ವಚನಗಳೆಲ್ಲವೂ ಬೆಡಗಿನವಾಗಿ ಕಾಣಿಸವು. ಕಾವ್ಯ, ಅಲಂಕಾರ ಗುಣದಿಂದ ಕೂಡಿವೆ. ಆದರೆ ಅದೇ ಟೀಕಾಕಾರರಿಗೆ ಪ್ರೇರಣೆ ಆಗಿರಬೇಕೆಂಬುದನ್ನು ಅಲ್ಲಗಳೆಯಲು ಆಗದು. ಗೊಗ್ಗಯ್ಯನ ಬಾಹ್ಯದ ಕೃಷಿ ಜೀವನ ಕಂಡ ಅಲ್ಲಮ ಅಂತರಂಗದ ಕೃಷಿಯ ಬಗ್ಗೆ ತಿಳಿವಳಿಕೆ ನೀಡುತ್ತಾನೆ.

> ತನುವ ತೋಂಟವ ಮಾಡಿ, ಮನವ ಗುದ್ದಲಿ ಮಾಡಿ,
> ಅಗೆದು ಕಳೆದನಯ್ಯಾ ಭ್ರಾಂತಿನ ಬೇರೊಡೆದು
> ಸಂಸಾರದ ಹೆಂಟೆಯ ಒಗಿದು, ಬಿತ್ತಿದೆನಯ್ಯಾ ಬ್ರಹ್ಮಬೀಜವ

ಅಖಂಡಮಂಡಲವೆಂಬ ಬಾವಿ, ಪವನವೆಂಬ ರಾಟಾಳ,
ಸುಷಮ್ನ ನಾಳದಿಂದವೆ ಉದಕವ ತಿದ್ದಿ,
ಬಸವಗಳೈವರು ಹಸಗೆಡಿಸಿದರೆಂದು
ಸಮತೆ ಸೈರಣೆಯೆಂಬ ಬೇಲಿಯನಿಕ್ಕಿ
ಆವಾಗಳೂ ಈ ತೋಂಟದೊಳಗೆ ಜಾಗರವಿದ್ದು
ಈ ಸಸಿಯ ಸಲಹಿದೆ ಕಾಣಾ ಗುಹೇಶ್ವರಾ.

ದೇಹವೆಂಬ ತೋಟದ ಕೃಷಿಯನ್ನು ಎಳೆಎಳೆಯಾಗಿ ಬಿಡಿಸಿ ಹೇಳುತ್ತಾ ಹಸನುಗೊಳಿಸುವ ವಿಧಾನವನ್ನು ತಿಳಿಸುತ್ತಾನೆ.

ಮುಕ್ತಾಯಕ್ಕ ತನ್ನ ಅಣ್ಣ ಅಜಗಣ್ಣನನ್ನು ಕಳೆದುಕೊಂಡ ಶೋಕದಲ್ಲಿ ಇದ್ದಾಳೆ. ಅದು ಲೌಕಿಕ ಆಸೆಯ ಶೋಕವಲ್ಲ ಎಂಬುದನ್ನು ತಿಳಿದುಕೊಳ್ಳಲು ಅಲ್ಲಮಪ್ರಭುವಿಗೆ ಹೆಚ್ಚು ಸಮಯಬೇಕಾಗಲಿಲ್ಲ. ಮುಕ್ತಾಯಕ್ಕನ ಆತಂಕವನ್ನು ಪರಿಹರಿಸಲು ಅವನು ಬಳಸಿದ ಭಾಷೆ ಕಾವ್ಯಾತ್ಮಕವಾದುದು. ಮುಕ್ತಾಯಕ್ಕ ತನ್ನ ಅಣ್ಣನ ಮೃತದೇಹವನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ಶೋಕಿಸುವ ಚಿತ್ರ ಅಲ್ಲಮನಿಗೆ ಕಂಡ ರೀತಿಯೇ ವಿಚಿತ್ರವಾದುದು. ಬೆರಗುಗೊಳಿಸುವಂತಹದು. ಆ ಸಂದರ್ಭದಲ್ಲಿ ಮುಕ್ತಾಯಕ್ಕನಿಗೆ ಹೀಗೆ ಹೇಳುತ್ತಾನೆ –

ಅಂಗೈಯೊಳಗೊಂದು ಅರಳ್ದ ತಲೆಯ ಹಿಡಿದುಕೊಂಡು,
ಕಂಗಳ ಮುತ್ತ ಪವಣಿಸುವಾಕೆ ನೀನಾರು ಹೇಳಾ?
ಸಂದ ಸಂಪಗೆಯರಳ ತುಂಬಿ ಒಂದುಂಬ ಭೇದವನರಿಯದೆ
ಹಂಬಲಿಸುವ ಪರಿತಾಪವೇನು ಹೇಳಾ?
ಒಂದೆಂಬನೆ? ಎರಡಾಗಿಯದೆ, ಎರಡೆಂಬೆನೆ ಒಂದಾಗಿಯದೆ
ಅರಿವಿನೊಳಗಣ ಮರಹಿದೇನು ಹೇಳಾ.

ಅಜಗಣ್ಣನ ಮೃತದೇಹದ ತಲೆ; ಅಲ್ಲಮನಿಗೆ ಕಾಣಿಸಿದ್ದು ಪರಿಪೂರ್ಣ ಜ್ಞಾನವಿಕಾಸವಾದ ತಲೆ. ಅದಕ್ಕಾಗಿ ಶೋಕಿಸುವ ತಂಗಿಯ ಕಣ್ಣೀರು ಮುತ್ತಿನ ಮಣಿಗಳನ್ನು ಸೇರಿಸಿದಂತೆ ಕಂಡಿದೆ. ಲಿಂಗದ ಪಾದಕ್ಕರ್ಪಿತವಾದ ಅಜಗಣ್ಣನೀಗ, ಸಂಪಿಗೆಯ ಹೂ ಲಿಂಗಾಂಗ ಸಮರಸವಾಗಿ ಉಭಯಭಾವ ಹಂಬಲಿಸುವ ಪರಿತಾಪವನ್ನು ದೂರ ಮಾಡಲು ಬಳಸಿದ ಭಾಷೆ ಇದು. ಅಲ್ಲಮನ ಮಾತಿಗೆ ಮುಕ್ತಾಯಕ್ಕ ಬೆಡಗಿನಲ್ಲಿಯೇ ಪ್ರಶ್ನಿಸುತ್ತಾಳೆ.

ನೀರ ಬೊಂಬೆಗೆ ನಿರಾಳದ ಗೆಜ್ಜೆಯ ಕಟ್ಟಿ
ಬಯಲು ಬೊಂಬೆಯ ಕೈಯಲ್ಲಿ ಕೊಟ್ಟು
ಮುದ್ದಾಡಿಸುತ್ತಿರ್ದನಯ್ಯ
ಕರ್ಪೂರದ ಪುತ್ಥಳಿಗೆ ಅಗ್ನಿಯ ಸಿಂಹಾಸನವಿಕ್ಕಿ

> ಅಗ್ನಿ ಕರಗಿ ಕರ್ಪೂರ ಉಳಿದುದಕ್ಕೆ ಬೆರಗಾದೆನಯ್ಯಾ
> ಎನ್ನ ಅಜಗಣ್ಣನ ಯೋಗಕ್ಕೆ

ಇದೆಲ್ಲ ಬೆಡಗಿನ ಗುಣವನ್ನು ಪಡೆದುಕೊಂಡು ವಿವರಣೆಯೆ ಆಗಿದೆ. ಅಗ್ನಿಯೇ ಕರಗಿ ಕರ್ಪೂರ ಉಳಿಯುವುದು, ಬಯಲ ಬೊಂಬೆ, ನೀರಬೊಂಬೆ, ನಿರಾಳದ ಗೆಜ್ಜೆ ಎಲ್ಲ ವಿಚಿತ್ರವಾದುದು. ಸ್ವಾನುಭಾವಕ್ಕೆ ನಿಲುಕದಂತಹವು. ಇದೆಲ್ಲವನ್ನು ಅಜಗಣ್ಣನ ಲಿಂಗಾಂಗ ಯೋಗಕ್ಕೆ ಸಂಬಂಧಿಸಿ ಹೇಳುವಲ್ಲಿ ಸಾಧ್ಯವಾಗಿದೆ. ಇದನ್ನು ಅಲ್ಲಮಪ್ರಭು ತೀರ ಸರಳವಾಗಿಯೇ ಬಿಡಿಸುತ್ತಾನೆ. ಅಜಗಣ್ಣ ಅಳಿಯುವನಲ್ಲ, ಉಳಿಯುವನಲ್ಲ, ಘನಕ್ಕೆ ಗಮನನಲ್ಲ, ಮನಕ್ಕೆ ಸಾಧ್ಯನೂ ಅಲ್ಲ, ತನ್ನನ್ನು ತಪ್ಪಿಸಿ, ಇದಿರನೊಪ್ಪಿಸುವೆನೆಂಬ ಭಿನ್ನ ಭಾವಿಯೂ ಅಲ್ಲ. ಈ ವ್ಯಕ್ತಿತ್ವದ ಅಜಗಣ್ಣನನ್ನು ಉಪಮಿಸಲು ಸಾಧ್ಯವೇ ಇಲ್ಲ ಎನ್ನುತ್ತಾನೆ ಅಲ್ಲಮ.

ಕರ್ಮಯೋಗಿ ಸಿದ್ಧರಾಮ ಲೋಕಕಲ್ಯಾಣಕ್ಕಾಗಿ ಕಟ್ಟಿಸುವ ಕೆರೆಗಿಂತ ಅಲ್ಲಮನು ಕಟ್ಟಲು ಹೇಳುವ ಕೆರೆ ವಿಶೇಷವಾದುದು. ಅದು ಶಾಶ್ವತವಾದುದು, ಹೊಡೆದು ಹೋಗುವಂಥದಲ್ಲ. ಇಂತಹ ಕೆರೆಯ ನಿರ್ಮಾಣದ ಬಗ್ಗೆ ಬಹಳ ಹೆಮ್ಮೆಯಿಂದಲೇ ಹೇಳಿಕೊಳ್ಳುತ್ತಾನೆ. ತಾನೇ ಹೇಳಿದ ಬೆಡಗಿಗೆ ಅರ್ಥಪೂರ್ಣವಾದ ವಿವರಣೆಯನ್ನು ಕೊಟ್ಟಿದ್ದಾನೆ.

> ತನುವೆಂಬ ಏರಿಗೆ ಮನವೆಂಬ ಕಟ್ಟೆ
> ಆಚಾರವೆಂಬ ಸೋಪಾನ, ಪರಮಾನಂದವೆಂಬ
> ಜಲವ ತುಂಬಿ ಕೆರೆಯ ಕಟ್ಟಬಲ್ಲವನಾರನೂ ಕಾಣೆ
> ನಾನು ಕಟ್ಟಿದ ಕೆರೆ ಸ್ಥಿರವಾಯಿತ್ತು, ಗುಹೇಶ್ವರ ನಿಮ್ಮಾಣೆ.

ತನು ಕೆರೆಯಾಗಿ, ಅದಕ್ಕೆ ಮನವೇ ಕಟ್ಟೆಯಾಗಿ, ಆಚಾರ ಸೋಪಾನವಾಗಿದೆ. ಅದರಲ್ಲಿ ಪರಮಾನದಿಂದ ಜಲವಿದೆ. ಇಂಥ ಕೆರೆಯ ಕಟ್ಟಬಲ್ಲವರು ತುಂಬಾ ಅಪರೂಪ. ತನ್ನ ಕೆರೆ ಮಾತ್ರ ಇಂಥ ಸ್ಥಿರವಾದ ಕೆರೆ ಎಂಬುದು ಅವನ ವಿಶ್ವಾಸ. ಬಾಹ್ಯದ ಕೆರೆಯನ್ನು ಕಟ್ಟುವುದರ ಜೊತೆ ತನುವೆಂಬ ಕೆರೆಯನ್ನು ಕಟ್ಟಿಕೊಳ್ಳುವುದು ಅವಶ್ಯ ಎಂಬ ಅರಿವನ್ನು ಸಿದ್ಧರಾಮನಿಗೆ ಮೂಡಿಸಿದ್ದಾನೆ.

ಬೆಡಗಿನ ವಚನಗಳನ್ನು ಕುರಿತು ಹೇಳುವಾಗ ವೈರಾಗ್ಯನಿಧಿ ಅಕ್ಕಮಹಾದೇವಿಯ ಎರಡು ವಚನಗಳನ್ನು ಇಲ್ಲಿ ನಿದರ್ಶನವಾಗಿ ನೋಡಬಹುದಾಗಿದೆ. ಅನುಭಾವದ ಹಿನ್ನೆಲೆಯಲ್ಲಿ ಈ ವಚನವನ್ನು ವಿಶ್ಲೇಷಿಸಬಹುದು.

> ಜಲದ ಮಂಟಪದ ಮೇಲೆ ಉರಿಯ ಚಪ್ಪರವನಿಕ್ಕಿ
> ಆಲಿಕಲ್ಲ ಹಸೆಯ ಹಾಸಿ, ಕಾಲಿಲ್ಲದ ಹೆಂಡತಿಗೆ
> ತಲೆಯಿಲ್ಲದ ಗಂಡ ಬಂದು ಮದುವೆಯಾದನು

ಎಂದೆಂದಿಗೂ ಬಿಡದ ಬಾಳುವೆಗೆ ಕೊಟ್ಟರೆನ್ನ
ಚೆನ್ನಮಲ್ಲಿಕಾರ್ಜುನನೆಂಬ
ಗಂಡಂಗೆನ್ನ ಮದುವೆಯ ಮಾಡಿದರು.

ಅಕ್ಕನ ಕನಸಿನಲ್ಲಿ ಕಂಡ ಚೆನ್ನಮಲ್ಲಿಕಾರ್ಜುನ 'ಕರಚೆಲುವ.' ಅವನ ಅತಿಶಯವಾದ ಸೌಂದರ್ಯಕ್ಕೆ ಬೇರೆಯವರನ್ನು ಹೋಲಿಕೆ ಮಾಡಲಾಗದು. ಆದರೆ ಇಲ್ಲಿ 'ತಲೆಯಿಲ್ಲದ ಗಂಡ' ಅವನಿಗೆ ತಾನು 'ಕಾಲಿಲ್ಲದ ಹೆಂಡತಿ' ಆದರೂ; ತಮ್ಮ ಸಂಸಾರದಲ್ಲಿ ಒಡಕಿಲ್ಲ. ನಮ್ಮದು ಎಂದೆಂದೂ ಬೇರ್ಪಡಿಸಲಾಗದ, ಶಾಶ್ವತವಾದ ಅನುಬಂಧ ಎಂದು ಅಭಿಮಾನದಿಂದಲೇ ಹೇಳಿಕೊಂಡಿದ್ದಾಳೆ. ಏಕೆಂದರೆ ಚನ್ನಮಲ್ಲಿಕಾರ್ಜುನ ಅಂಗಹೀನನಲ್ಲ, ಸರ್ವಾಂಗ ಸುಂದರನು. ಆಕೆಯೇ ಪ್ರಶ್ನೆ ಮಾಡುತ್ತಾಳೆ. ಲಿಂಗಕ್ಕೆ, ಲಿಂಗಾಂಗಿಗಳಿಗೆ ಊನತೆ ಹೊರಿಸಬಹುದೆ? ಅಕ್ಕ ಪ್ರತಿಪಾದಿಸಿ ಒಪ್ಪಿಕೊಂಡ 'ಶರಣ ಸತಿ ಲಿಂಗಪತಿ' ಬಾಳುವೆಗೆ ಬಿಡುಗಡೆ ಇಲ್ಲ ಎಂಬ ಅಚಲ ನಂಬಿಕೆ ಅಕ್ಕನಲ್ಲಿದೆ.

ಶರಣ ಅರಿವಿನ ಮಾರಿತಂದೆ ಕ್ರಿ.ಶ. 1160 ರಿಂದ ಈಚೆನವನು ಎಂಬ ಅಭಿಪ್ರಾಯ ಇತ್ತೀಚಿನ ಸಂಶೋಧನೆಗಳಿಂದ ವ್ಯಕ್ತವಾಗಿದೆ.[23] ಇವನ ವಚನಗಳ ಅಂಕಿತ 'ಸದಾಶಿವಮೂರ್ತಿ ಲಿಂಗ' ಎಂಬುದು. ಹಲವಾರು ಮಾರಿತಂದೆಗಳಿದ್ದರೂ ಅವರಲ್ಲಿ ಅರಿವಿನ ಮಾರಿತಂದೆ ಎದ್ದುಕಾಣುವುದು ಆತನ ವಚನಗಳಿಂದ. ತನ್ನ ಬೆಡಗಿನ ವಚನಗಳಲ್ಲಿ ತಾನು ಪಡೆದ ಜ್ಞಾನಾನುಭವವನ್ನು ನಿರೂಪಿಸಿ ತನ್ನ ಹೆಸರನ್ನು ಅನ್ವರ್ಥ ಮಾಡಿಕೊಂಡಿದ್ದಾನೆ. ಈತ ಸುಮಾರು 51 ಬೆಡಗಿನ ವಚನಗಳನ್ನು ರಚಿಸಿದ್ದಾನೆ. ಒಂದು ವಚನವನ್ನು ಉದಾಹರಣೆಗಾಗಿ ನೋಡಬಹುದು.

ಆಡಿನ ಮೊಲೆವಾಲ ಕೋಡಗ ಉಂಡು ಹಾಲಸಿಹಿ ತಲೆಗೇರಿ
ಬಂದವರನೇರಿಸುತ್ತ, ನಿಂದವರ ಕಚ್ಚುತ್ತ ಹಿಂಗದು ನೋಡ
ಕೋಡಗದಂದ ಕೋಡಗವ ತಿಂದು ಆಡುವನೆ ಆರೂಢವಸ್ತು
ಸದಾಶಿವಮೂರ್ತಿ ಲಿಂಗಕ್ಕೆ ಎರಡಿಲ್ಲದಂಗ.

"ಈ ಮನಸ್ಸು ರಜೋಗುಣ ಸಂಬಂಧವಾದ ಸ್ಥೂಲದೇಹದಲ್ಲಿರುವ ಸಂಸಾರ ವಿಷಯವನ್ನು ಸ್ವೀಕರಿಸುತ್ತಿರುವುದು. ಈ ಸಂಸಾರ ವಿಷಯಸುಖವು ಮನಸ್ಸಿನ ವೃತ್ತಿ ಜ್ಞಾನದಲ್ಲಿ ಪ್ರವೇಶಿಸಿ ದೇಹ ಸಂಬಂಧಿಗಳಾಗಿ ಪರಿಭವಕ್ಕೆ ಬಂದ ಜೀವರುಗಳನ್ನು ಹಾಸ್ಯ ಮಾಡಿ ಅವಮಾನಿಸುವುದು, ಅಹಂಭಾವದಲ್ಲಿರುವ ಅದ್ವೈತ ಜ್ಞಾನಿಗಳನ್ನು ಅವಗ್ರಹಿಸುವುದು. ಹೀಗಾಗಿ ಈ ಮನಸ್ಸಿನ ದುರ್ವರ್ತನೆ ನಾಶವಾಗುವುದು. ಸುಜ್ಞಾನಿಯಾದ ಶರಣರು ಶಿವಭಾವದಿಂದ ಮನೋವ್ಯಕ್ತಿಯನ್ನು ನಿವೃತ್ತಿ ಮಾಡಿದನು. ಹೀಗೆ ಗುರು ಕರುಣದಿಂದ ಅಂತರಂಗ ಬಹಿರಂಗಕೀವಿಡಿದಾಚರಿಸಿ ಪರಶಿವತತ್ತ್ವದಲ್ಲಿ ಸಮರಸವಾಗಿರುವುದು" ಹೀಗೆ ಈ ವಚನದ ಅರ್ಥವನ್ನು ವಿಶ್ಲೇಷಿಸಬಹುದು.

ಕದಿರೆ ರೆಮ್ಮವ್ವೆ ಕಲ್ಯಾಣದಲ್ಲಿ ರಾಟೆಯಿಂದ ನೂಲನ್ನು ತೆಗೆಯುವ ಕಾಯಕ ಮಾಡಿಕೊಂಡಿದ್ದ ಈಕೆ ವಚನಕಾರ್ತಿಯೂ ಹೌದು. ಈಕೆಯ ವಚನಗಳ ಅಂಕಿತ 'ಕದಿರೆಮ್ಮಿಯೊಡೆಯ ಗುಮ್ಮೇಶ್ವರಾ' ಎಂದು. ಈಕೆ ನಾಲ್ಕು ವಚನಗಳನ್ನು ರಚಿಸಿದ್ದಾಳೆ. ಇವುಗಳಲ್ಲಿ ಸಿಂಗಳದ ಸಿದ್ಧಬಸವರಾಜ ದೇವರು ತಮ್ಮ ಸಂಕಲನದಲ್ಲಿ ಮೂರು ಬೆಡಗಿನ ವಚನಗಳನ್ನು ಉದ್ಧರಿಸಿದ್ದಾರೆ. ಉದಾಹರಣೆಗೆ –

> ಎಲ್ಲರ ಹೆಂಡತಿಯರು ಕೊಳಸಿಕ್ಕುವರು
> ಎನ್ನ ಗಂಡಗೆ ಕೊಳಸುವುದಿಲ್ಲ
> ಎಲ್ಲರ ಗಂಡಂದಿರು ಬಸಿವರು, ಎನ್ನ ಗಂಡಂಗೆ ಬಸಿವುದಿಲ್ಲ
> ಎಲ್ಲರ ಗಂಡಂದಿರಿಗೆ ಬೀಜವುಂಟು, ಎನ್ನ ಗಂಡಂಗೆ ಅಂಡದ ಬೀಜವಿಲ್ಲ.
> ಎಲ್ಲರ ಗಂಡಂದಿರು ಮೇಲೆ, ಎನ್ನ ಗಂಡ ಕೆಳಗೆ ನಾ ಮೇಲೆ
> ಕದಿರೆಮ್ಮಿಯೊಡೆಯ ಗುಮ್ಮೇಶ್ವರ.

"ಸಾಕಾರಲಿಂಗಕ್ಕೆ ಸತಿಯೆನಿಸಿದ ದ್ವೈತಿಗಳು ಭಿನ್ನಕ್ರಿಯೆಗಳು ಮಾಡಿ ಫಲಪದಗಳನ್ನು ಪಡೆದು ಭೋಗಿಸಿ ಭವಕಾರಣ ಜನನಕ್ಕೆ ಬಂದು ಭಿನ್ನವಿಟ್ಟು ಪದಾರ್ಥಗಳನ್ನು ಲಿಂಗಕ್ಕರ್ಪಿಸಿ ಭೋಗಿಸುತ್ತಿರುವರು. ಮಹಘನಲಿಂಗವ ಸರ್ವಾಂಗದಲಿ ಸಂಬಂಧ ಮಾಡಿಕೊಂಡು ಶರಣ ಸತಿಯು ಸಕಲ ಪದಾರ್ಥಗಳನ್ನು ಅಭಿನ್ನಭಾವದಿಂದ ಲಿಂಗಕ್ಕರ್ಪಿಸಿ ಲಿಂಗಭೋಗೋಪಭೋಗಿಯಾಗಿರುವಳಲ್ಲದೆ ಜೀವಭಾವದಿಂದ ಭವಕ್ಕೆ ಬರಲಿಲ್ಲ. ಮಾಯಾಶಕ್ತಿಯ ವಲ್ಲಭರಾದ ಭಿನ್ನಜ್ಞಾನಿಗಳು ದೇಹೇಂದ್ರಿಯ ವಿಷಯ ರಸಗಳನ್ನು ನಿವೃತ್ತಿ ಮಾಡಬೇಕೆನ್ನುತ್ತಿರುವರು. ಶರಣ ಸತಿಯು ದೇಹೇಂದ್ರಿಯ ವಿಷಯ ರಸಗಳನ್ನು ನಿವೃತ್ತಿ ಮಾಡಿ ಕಳೆಯಲಿಲ್ಲ. ಮಾಯಾಶಕ್ತಿ ವಲ್ಲಭರು ತಾನೆಂಬ ಅಹಂಕಾರದಲ್ಲಿ ಸಿಕ್ಕಿರುವರು. ಶರಣರು ಅಹಂಕಾರ ನಾಸ್ತಿಯಾಗಿರುವರು. ಮಾಯಾಶಕ್ತಿ ವಲ್ಲಭರು ಸ್ವರ್ಗದಲ್ಲಿ ತೇಜಿಸ್ವರು. ಆದರೆ ಶರಣ ಸತಿಯು ಮಹಾಘನಲಿಂಗವನ್ನು ಸರ್ವಾಂಗದಲ್ಲಿ ಹೊಂದಿ ಆ ಲಿಂಗಕ್ಕೆ ಅಧಿಷ್ಠನಾಗಿಹನು"[24] ಎಂದು ವಚನದ ಭಾವವನ್ನು ಗ್ರಹಿಸಬಹುದು.

ಶರಣ ಮೋಳಿಗೆಯ ಮಾರಯ್ಯ ಕಾಶ್ಮೀರ ದೇಶದ ಮಾಂಡವ್ಯಪುರದಲ್ಲಿ ರಾಜನಾಗಿದ್ದು; ಕಲ್ಯಾಣದಲ್ಲಿದ್ದ ಬಸವಣ್ಣನವರ ವ್ಯಕ್ತಿತ್ವಕ್ಕೆ ಮಾರುಹೋಗಿ ವೈರಾಗ್ಯ ಹೊಂದಿ ಸತಿ ಸಮೇತರಾಗಿ ಕಲ್ಯಾಣಕ್ಕೆ ಬಂದು ಕಟ್ಟಿಗೆ ಕಾಯಕವನ್ನು ಕೈಗೊಂಡು, ಶರಣರ ಸಂಗದಲ್ಲಿದ್ದು ಜೀವನ ಸಾಗಿಸಿದಲ್ಲದೆ ವಚನ ರಚನೆಯನ್ನು ಮಾಡಿದ್ದಾನೆ. ವೀರಶೈವ ಕವಿಗಳೆಲ್ಲ ಈ ವಚನಕಾರರನ್ನು ಸ್ಮರಿಸಿರುವುದೂ, ಬಸವಣ್ಣನವರೇ 'ಮೋಳಿಗೆಯ ಮಾರಿತಂದೆಗಳು' ಎಂದು ಸಂಬೋಧಿಸಿರುವುದೂ ಈತನ ಬಗೆಗೆ ಆ ಕಾಲಕ್ಕೆ ಜನಮನದಲ್ಲಿದ್ದ ಗೌರವವನ್ನು ಸೂಚಿಸುತ್ತದೆ. ಈತ ಸುಮಾರು 819 ವಚನಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ಸುಮಾರು 61 ಬೆಡಗಿನ ವಚನಗಳಿವೆ. ಈತನ ವಚನಗಳ ಅಂಕಿತ "ನಿಃಕಳಂಕ ಮಲ್ಲಿಕಾರ್ಜುನ" ಎಂಬುದು. ಮೋಳಿಗೆ ಮಾರಯ್ಯ ರಚಿಸಿದ

ಬೆಡಗಿನ ವಚನಗಳಲ್ಲಿ ಒಂದು ವಚನವನ್ನು ಉದಾಹರಣೆಗೆ ನೋಡಬಹುದು.

"ಹುಲಿಯ ಹುಲ್ಲೆ ನುಂಗಿತ್ತು, ಹುಲ್ಲೆಯ ಹುಲಿಯ ಮೊಲ ನುಂಗಿತ್ತು.

ಆ ಮೊಲನಕೊಂದು ಮುಂದಣ ಕಂಡವ, ಕೊಯ್ದು ತಿಂದವ ಮುಕ್ತ ನಿಃಕಳಂಕ ಮಲ್ಲಿಕಾರ್ಜುನ."

ವಿಶ್ವವನ್ನು ಮುರಿದು ತಿನ್ನುತ್ತಿರುವ ಕಾಲ್ಪ್ಯಾಘ್ರನನ್ನು ಮಾಯೆಯೆಂಬ ಹರಿಣಿ ನುಂಗುವುದು. ಈ ಹರಿಣಿಯನ್ನು ಹುಲಿಯನ್ನು ಜೀವನು ಅನುಗ್ರಹಿಸಿದನು. ಶಿವಕೃಪೆಯಿಂದ ಸುಜ್ಞಾನ ಪಡೆದ ಶರಣನು ಸಕಲ ಪ್ರಪಂಚ ನಿವೃತ್ತಿ ಮಾಡಲು ಜೀವಭಾವವಳಿದು ಶಿವಭಾವವುಂಟಾಗಿ ಗುರುಕಾರುಣ್ಯದಿಂದ ಸರ್ವಾಂಗಲಿಂಗ ಸಂಬಂಧವಾಗಲು ಆತ್ಮರೂಪ ಪದಾರ್ಥವನ್ನು ಜ್ಞಾನಾಗ್ನಿಯಲ್ಲಿ ಸಮರಸ ಪಾಕ ಮಾಡಿ ಮಹಾಘನಲಿಂಗ ಮುಖಕ್ಕೆ ಅರ್ಪಿಸಿ ಲಿಂಗ ಸುಖ ಪ್ರಸನ್ನ ಪ್ರಸಾದ ಸ್ವೀಕರಿಸಿದ ಶರಣ ಸದ್ಯೋನ್ಮುಕ್ತ ಎಂದು ವ್ಯಾಖ್ಯಾನ ನೀಡಬಹುದು.

ವಚನಕಾರರು ತತ್ತ್ವ–ಸಿದ್ಧಾಂತಗಳ, ಯೋಗದ ವಿಷಯಗಳನ್ನು ಹೇಳುವಾಗ, ಬೆಡಗಿನ ತಂತ್ರವನ್ನು ಬಳಸಿ ಪ್ರಸ್ತುತಪಡಿಸಿದ್ದಾರೆ. ಇವುಗಳ ತಂತ್ರ ಗಹನ ಹಾಗೂ ಗಂಭೀರವಾದುದು. ತತ್ತ್ವಜ್ಞಾನವಿದ್ದರೆ ಅರ್ಥ ಇಲ್ಲದಿದ್ದರೆ ಈ ವಚನಗಳು ವ್ಯರ್ಥ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಧರ್ಮಸಿದ್ಧಾಂತಗಳು ಯೋಗ್ಯ ಜನರಿಗೆ ಮನದಟ್ಟಾಗಲು, ಈ ರೀತಿಯ ಬೆಡಗಿನ ತಂತ್ರವೇ ಸೂಕ್ತವೆಂದು ಭಾವಿಸಿ ಸಮರ್ಥ ರೀತಿಯಲ್ಲಿ ಧರ್ಮಪ್ರಚಾರ ಮಾಡಿರುವುದಲ್ಲದೆ, ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿದ್ದಾರೆ.

**ಆಧಾರಸೂಚಿ**

1. ವಚನ ಸಾಹಿತ್ಯ, ಬೆಂ.ವಿ.ವಿ., ಪು. 81
2. ಬೆಡಗು–ಡಾ.ಜಿ.ಎಸ್. ಶಿವರುದ್ರಪ್ಪ, ಪು. 115..
3. Sir Monier Williams, Sanskrit Dictionary, Oxford University Press, 1951. Page 912
4. ಅದೇ ಪುಟ 912
5. ರಾ.ಗೌ. 'ನಮ್ಮ ಒಗಟುಗಳು', ಉಷಾ ಸಾಹಿತ್ಯಮಾಲೆ, ಮೈಸೂರು, 1970, ಪು. ix
6. ಸಂ. ಎಂ.ವಿ. ಸೀತಾರಾಮಯ್ಯ, ಕವಿರಾಜಮಾರ್ಗ, ಕ.ಸಾ.ಪ. 1–34
7. ಅದೇ 1–9
8. ಸಂ. ಎಸ್.ಜಿ. ನರಸಿಂಹಾಚಾರ್ಯ ಮತ್ತು ಮ.ಆ. ರಾಮಾನುಜೈಯಂಗಾರ್ 'ಕರ್ನಾಟಕ ಶಬ್ದಸಾರಂ', 1897, ಪು. 31
9. ಎಪಿಗ್ರಫಿಯಾ ಕರ್ನಾಟಕ 11 : ಶ್ರವಣಬೆಳ್ಗೊಳದ ಶಾಸನ ನಂ. 133,
10. ನಾನಾರ್ಥಕಾಂಡ : ಹಸ್ತಪ್ರತಿ ಕ.ಸಾ.ಪ. ಪದ, ಪು. 463
11. ಬೆಡಗು, ಪು. 117–118

12. ಶರಣಶ್ರೀ, ಕರ್ನಾಟಕ ವೀರಶೈವ ವಿದ್ಯಾಭಿವೃದ್ಧಿ ಸಂಸ್ಥೆ, ಗಾಂಧಿನಗರ, ಬೆಂಗಳೂರು. ಸಂ. ಪ್ರೊ.ಜೆ.ಎಸ್.ಸಿದ್ಧಲಿಂಗಯ್ಯ, ಡಾ.ಎಸ್.ವಿದ್ಯಾಶಂಕರ್ ಪು.161
13. ಮಹಾಮನೆ, ಸಂಪುಟ 5, ಸಂಚಿಕೆ : 2, ಪು. 12
14. ಮಹಾಮನೆ, ಸಂ.ಡಾ.ಎಂ.ಜಿ.ನಾಗರಾಜ, ಎಚ್.ಎಸ್.ಸಿದ್ಧಗಂಗಪ್ಪ, ಅ.ಭಾ.ಶ.ಸಾ. ಪರಿಷತ್ತು, ಬೆಂಗಳೂರು. ಅದೇ ಪು. 14
15. ಅಲ್ಲಮನ ವಚನ ಚಂದ್ರಿಕೆ : ಸಂ. ಡಾ.ಎಲ್.ಬಸವರಾಜು, ಪು.423
16. ಮಹಾಮನೆ, ಸಂ.5, ಸಂಚಿಕೆ 2, ಪು. 1–20
17. ಚೆನ್ನಪ್ಪ ಉತ್ತಂಗಿ – 'ಕಲ್ಯಾಣಕಿರಣ', ಸಂ.–3, ಸಂಚಿಕೆ–4, ಏಪ್ರಿಲ್, 1971
18. ಡಾ. ಎಲ್. ಬಸವರಾಜು 'ಅಲ್ಲಮನ ವಚನ ಚಂದ್ರಿಕೆ', ನಳಿನೀಶಂಕರ ಪ್ರಕಾಶನ, ಮೈಸೂರು, 1960, ಪೀಠಿಕೆ ಪು. 16
19. ಡಾ. ಎಚ್. ತಿಪ್ಪೇರುದ್ರಸ್ವಾಮಿ, 'ಶರಣರ ಅನುಭಾವ ಸಾಹಿತ್ಯ', ಪು. 359
20. ಗೌರವ, ಪು. 416
21. ಡಾ. ಹಿರಣ್ಮಯಿ, 'ಕಬೀರದಾಸ', ಪ್ರಸಾರಾಂಗ, ಮೈಸೂರು.ವಿ.ವಿ., 1970, ಪು. 57–59
22. ಗೌರವ. ಪು. 343
23. ತವನಿಧಿ, ಗೊ.ರು.ಚ. ಅಭಿನಂದನಾ ಗ್ರಂಥ, ಸಂ. ಡಾ. ಸಿ. ವೀರಣ್ಣ, ಪ್ರ: ಗೊ.ರು.ಚ. ಅಭಿನಂದನಾ ಸಮಿತಿ, ಬೆಂಗಳೂರು, ಪು. 430
24. ಜಿ.ಎಸ್. ಸಣ್ಣಯ್ಯ, 'ಅರಿವಿನ ಮಾರಿತಂದೆ ವಚನಗಳು', ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, 1971, ಪು. xiii

❑

ಜಂಗಮವ ಕರತಂದು ಮನೆಯಲ್ಲಿ ಕುಳ್ಳಿರಿಸಿ
ಅಂಗದ ಮೇಲಣ ಜಪವನೆಣಿಸುವ ಭಕ್ತನ
ಜಪದ ಬಾಯಲ್ಲಿ ಕೆರಹನಿಕ್ಕಲಿ!
ಅವನ ಲಿಂಗಾರ್ಚನೆಯ ಬಾಯಲ್ಲಿ ಹುಡಿಯ ಹೊಯ್ಯಲಿ!
ಜಂಗಮದ ತೃಪ್ತಿಯನರಿಯದೆ ಲಿಂಗವಂತನೆಂತಾದನೊ? ಮರುಳೆ!
ಅವ ಪಿಸುಣ, ಹೊಲೆಯನೆಂದಾತನಂಬಿಗರ ಚೌಡಯ್ಯ.

**– ಅಂಬಿಗರ ಚೌಡಯ್ಯ**

# ಮಹಲಿಂಗದೇವ ಸಂಕಲಿತ
# "ಅಲ್ಲಮಪ್ರಭುವಿನ ಷಟ್ಸ್ಥಲ ಟೀಕಿನ ವಚನಗಳು"

**ಡಾ. ಬಿ. ನಂಜುಂಡ ಸ್ವಾಮಿ**

ಪ್ರಪಂಚದ ಧಾರ್ಮಿಕ ಇತಿಹಾಸದಲ್ಲಿ ಬಸವಣ್ಣನವರಿಗೆ ವಿಶೇಷ ಸ್ಥಾನವಿದೆ. ಬಸವಣ್ಣನವರ ನೇತೃತ್ವದಲ್ಲಿ ಅಲ್ಲಮಪ್ರಭುದೇವರ ಅಧ್ಯಕ್ಷತೆಯಲ್ಲಿ ನಡೆದ ವಚನ ಚಳವಳಿಯ ಇತಿಹಾಸ ಬಹಳ ರೋಚಕವಾದದ್ದು, ನಮಗೆಲ್ಲ ತಿಳಿದಿರುವುದು ಹತ್ತು ಪೈಸೆಯಷ್ಟು, ಗೊತ್ತಿಲ್ಲದೆ ಇರುವಂತಹದು 90 ಪೈಸೆ ಎಂದರೆ ವಚನ ಸಾಹಿತ್ಯದ ವಿಸ್ತಾರದ ಅರಿವು ಎಷ್ಟು ಎಂದು ನಾವು ಊಹಿಸಿಕೊಳ್ಳಬಹುದು.

ಪ್ರಭುದೇವರ ವಚನಗಳ ವಿಶ್ಲೇಷಣೆ ಬಹಳ ಕಠಿಣ ಎಂದು ವಚನಾಭ್ಯಾಸಿಗಳ ಅಭಿಪ್ರಾಯ. ಇಲ್ಲಿ ಒಂದು ವಿಷಯ ಸ್ಪಷ್ಟ ಮಾಡಬೇಕು. ಬಸವಣ್ಣನವರ ಷಟ್ಸ್ಥಲ ವಚನ, ಅಲ್ಲಮಪ್ರಭುದೇವರ ಷಟ್ಸ್ಥಲ ವಚನಗಳನ್ನು ಸಂಕಲಿಸಿದವರು ಬಸವಣ್ಣನವರಲ್ಲ, ಅಲ್ಲಮಪ್ರಭುದೇವರಲ್ಲ. ಬಸವಣ್ಣನವರ ಷಟ್ಸ್ಥಲ ವಚನ ಸಂಕಲನ ಮಾಡಿದವನು ಉಮ್ಮತ್ತೂರಿನ ದೊರೆ ನಂಜರಾಜವೊಡೆಯ. ಈತ ಕ್ರಿ.ಶ. 1490ರ ವೇಳೆಯಲ್ಲಿದ್ದ. ಉಮ್ಮತ್ತೂರು (ಕನಕಪುರವರಾಧೀಶ್ವರ) ಬಸವಣ್ಣನವರ 958 ವಚನಗಳನ್ನು "ಬಸವಣ್ಣನವರ ಷಟ್ಸ್ಥಲದ ವಚನಗಳು" ಹೆಸರಿನಲ್ಲಿ ಸಂಕಲಿಸಿದ್ದಾನೆ. ಈ ಅಪೂರ್ವ ಹಸ್ತಪ್ರತಿ ಚಿತ್ರದುರ್ಗ ಬೃಹನ್ಮಠದ ಹಸ್ತಪ್ರತಿ ಭಂಡಾರದಲ್ಲಿದೆ.

ಅಲ್ಲಮಪ್ರಭುದೇವರ ಅಥವಾ ಗುಹಾಲ್ಲಮಪ್ರಭುದೇವರ ಷಟ್ಸ್ಥಲ ವಚನಗಳನ್ನು ಸಂಕಲಿಸಿ, ಅದಕ್ಕೆ ಟೀಕೆ ಬರೆದವನು ಮಹಾಲಿಂಗದೇವ (ಸು. 1425). ಈತನ ಬಗ್ಗೆ ಇಷ್ಟು ಮಾಹಿತಿ ಇದೆ. ಪಾಲಿಗೆರೆಯ ಸೋಮನಾಥದೇವರ ಪಾದಾರಾಧಕನಾದ ಈತನಿಗೆ ವಾರಣಾಸೀಂದ್ರನೆಂಬ ಇನ್ನೊಂದು ಹೆಸರಿದೆ. ತ್ರಿಕಾಲನಿಷ್ಠ, ಪರಮ ವೀರಶೈವಾ ಗಮಾಚಾರ್ಯ ಜಕ್ಕಣ್ಣನ ಪ್ರಾರ್ಥನೆಯಂತೆ ಅವನಿಗೆ ಬೋಧಿಸುವ ರೀತಿಯಲ್ಲಿ ತನ್ನ ಕೃತಿಗಳನ್ನು ಸಂಯೋಜಿಸಿರುವನು.

**ಕೃತಿಗಳು**

**1. ಏಕೋತ್ತರ ಶತಸ್ಥಲ :** ಶರಣರ ವಚನ, ಸ್ವರವಚನಗಳನ್ನು ಏಕೋತ್ತರ ಶತಸ್ಥಲದ ಪರಿವಿಡಿಯಲ್ಲಿ ಜೋಡಿಸಿದ್ದಾನೆ. ಪಿಂಡಸ್ಥಲಾದಿ ಜ್ಞಾನಶೂನ್ಯ ಸ್ಥಲಾಂತ್ಯವಾದ 101 ಸ್ಥಲಗಳಿವೆ. ಪ್ರತಿ ಸ್ಥಲದಲ್ಲೂ ಸೂತ್ರ–ವಚನ–ನಿರ್ದೇಶನದ ಪದಗಳಿವೆ. 34 ಶಿವಶರಣ/

ಶರಣೆಯರ 931 ವಚನಗಳು, 101 ಸ್ವರವಚನಗಳಿವೆ.

**2. ಪ್ರಭುದೇವರ ಷಟ್ಸ್ಥಲಜ್ಞಾನ ಚಾರಿತ್ರದ ವಚನದ ಟೀಕೆ :** ಈ ಕೃತಿಗೆ 'ಷಟ್ಸ್ಥಲ ವಿವೇಕ'ವೆಂಬ ಹೆಸರೂ ಉಂಟು. ಕೆಲವು ಪ್ರತಿಗಳ ಆರಂಭದಲ್ಲಿ ಪ್ರಭುದೇವರ ಪಿಂಡಸಂಭವ ಗದ್ಯವಿದೆ. ಅಲ್ಲಮರ 694 ವಚನಗಳಿಗೆ ಟೀಕೆ ಇದೆ. ಈತನ ಟೀಕೆಯನ್ನು ಮುಂದಿನ ವಚನ ಸಂಕಲನಕಾರರು, ಟೀಕಾಕಾರರು ಬಳಸಿಕೊಂಡಿದ್ದಾರೆ.

3. ಪ್ರೊ. ಸಿ. ಮಹಾದೇವಪ್ಪನವರು **'ಏಕೋತ್ತರ ಶತಸ್ಥಲ ಸಾರಾಮೃತ'** ಸಂಕಲನವನ್ನು ಮಹಾಲಿಂಗದೇವನಿಗೆ ಆರೋಪಿಸಿದ್ದಾರೆ.

**4. ಸೂಕ್ಷ್ಮ ಮಿಶ್ರ ಷಟ್ಸ್ಥಲ :** ಈ ಲಘು ಕೃತಿಯಲ್ಲಿ ಆರು ಸ್ಥಲಗಳಿದ್ದು 108 ವಚನಗಳು, ಹಾಗೂ ಆರು ಸ್ವರವಚನಗಳಿವೆ.

ಮಹಾಲಿಂಗದೇವನ ಚರ್ಚೆ ಪ್ರಾರಂಭವಾಗುವುದೇ ಅವನು ಇದ್ದ ಪಾಲಿಗೆರೆ ಯಾವುದು ಎಂಬುದರಿಂದ. ಈ ಬಗ್ಗೆ ಬಹಳ ವರ್ಷಗಳಿಂದ ಕರಾರುವಾಕ್ಕಾದ ಅಧ್ಯಯನ ನಡೆಸಿರುವ ಪ್ರೊ. ಸಿ. ಮಹಾದೇವಪ್ಪನವರು ಮಹಾಲಿಂಗದೇವ ಮತ್ತು ಅವರ ಶಿಷ್ಯ ಪರಂಪರೆಯವರು ಇದ್ದ ಪಾಲಿಗೆರೆ ಉತ್ತರದಲ್ಲಿ ಅಲ್ಲ, ಅದು ಇದ್ದದ್ದು ದಕ್ಷಿಣದಲ್ಲಿ ಎಂದು ಸ್ಪಷ್ಟಪಡಿಸಿದ್ದಾರೆ. ಅವರಿಗೆ ಆ ಬಗ್ಗೆ ಸ್ಪಷ್ಟವಾದ ಮಾಹಿತಿ ಲಭ್ಯವಾದದ್ದು ಲಕ್ಕಣದಂಡೇಶನ ಶಿವತತ್ತ್ವ ಚಿಂತಾಮಣಿಯ ಒಂದು ಪದ್ಯದಿಂದ, ಆ ಭಾಗವನ್ನು ಕೆಳಗೆ ನೀಡಲಾಗಿದೆ.

**ಗದ್ಯ :** ಸ್ವಸ್ತಿ ಸಮಸ್ತ ಭುವನಜನತಿಮಿರಹರ ಕಾರಣಸ್ವರೂಪರು ಭಕ್ತದೇಹಿಕ ದೇವರುಂ ಭಕ್ತವತ್ಸಲರುಂ ಸರ್ವಾಂಗ ಪ್ರಾಣಲಿಂಗಮೂರ್ತಿವಿಲಾಸರುಂ ಪಾಲಿಗೆರೆಯ ಪುರವರಾಧೀಶ್ವರರುಂ ಅಪೂರ್ವ ಸ್ವಯಂಭು ಪ್ರಸನ್ನ ಚೆನ್ನದಕ್ಷಿಣ ಶ್ರೀ ಸೋಮನಾಥ ದೇವರ ದಿವ್ಯಶ್ರೀಪಾದಪದ್ಮಾರಾಧಕರುಂ.....

ಈ ಗದ್ಯದ ಅಧ್ಯಯನದಿಂದ 'ಚೆನ್ನದಕ್ಷಿಣ' ಅಂದರೆ ದಕ್ಷಿಣ ಭಾಗದಲ್ಲಿ ಪಾಲಿಗೆರೆ ಅರ್ಥಾತ್ ಹುಲಿಕೆರೆ ಇದ್ದು ಅಲ್ಲಿ ಶ್ರೀ ಸೋಮನಾಥನ ಸನ್ನಿಧಾನ ಇರುವುದು ತಿಳಿದು ಬರುತ್ತದೆ. ಲಕ್ಕಣದಂಡೇಶನು ಶಿವತತ್ತ್ವ ಚಿಂತಾಮಣಿಯಲ್ಲಿ ಇದನ್ನು ಸ್ಪಷ್ಟಪಡಿಸಿದ್ದಾನೆ.

ಶಿವತತ್ತ್ವ ಚಿಂತಾಮಣಿ 37ನೇ ಸಂಧಿ 206ನೇ ಪದ್ಯದಲ್ಲಿ ನಂದಿವಾಹನವಾಗಿ ಉಮಾಸಹಿತ ಇರುವ ಪಾಲಿಗೆರೆಯ ಸೋಮೇಶ್ವರನಲ್ಲಿ ಆದಯ್ಯನು ನಡೆಸಿದ ಪವಾಡವನ್ನು ಸೂಕ್ಷ್ಮವಾಗಿ ತಿಳಿಸಿದ್ದಾನೆ. ಅಲ್ಲದೆ ಅಲ್ಲಿನ ಜೈನರನ್ನು ಶಿವಭಕ್ತರನ್ನಾಗಿ ಮಾಡಿದುದನ್ನೂ ಲಕ್ಕಣದಂಡೇಶ ದಾಖಲಿಸಿದ್ದಾನೆ.

ಶಿವತತ್ತ್ವ ಚಿಂತಾಮಣಿ 28ನೇ ಸಂಧಿ 197ನೇ ಪದ್ಯವು ಕಲಿಯುಗದ ಕಲ್ಮಷಗಳಿಗೆ ಅಂಟುಗೊಳ್ಳದೆ ಸದ್ಭಕ್ತಿಯಿಂದ ನೆಲೆಗೊಂಡು, ಪೂರ್ವಾಶ್ರಮದ ಸಂಬಂಧದಿಂದ ಮತ್ತ,

ಮಿತ್ರ, ಕಳತ್ರನೆಂಬ ಪ್ರೀತಿಗೆ ಅಥವಾ ಅಭಿಮಾನದ ಬಲೆಗೆ ಸಿಲುಕಿಕೊಳ್ಳದೆ ಆಚಾರನಿಷ್ಠೆ, ದಾಸೋಹಭಾವ, ಸುಲಲಿತ ಸುಮಾರ್ಗದಿಂದ ಇಷ್ಟಲಿಂಗಾನುಷ್ಠಾನದ ಆನಂದದಲ್ಲಿ ತೇಲಾಡುತ್ತಿರುವ, ಅದನ್ನೇ ತಮ್ಮ ಲೀಲೆಯನ್ನಾಗಿಸಿಕೊಂಡಿದ್ದ ಮಲಿಗೆರೆಯ ಮಠದ ವೀರಮಾಹೇಶ್ವರರ ಚರಣಾಂಬುಜಕ್ಕೆ ಶರಣು ಎಂದಿದ್ದಾರೆ.

ಮಹಾಲಿಂಗದೇವರು ತಮ್ಮ ವಚನ ವ್ಯಾಖ್ಯಾನ ಗ್ರಂಥಗಳ ಆದ್ಯಂತ ಭಾಗಗಳಲ್ಲಿ ತಾವು ಮಲಿಗೆರೆ ಮಠವರಾಧೀಶ್ವರರೆಂದು, "ಚೆನ್ನದಕ್ಷಿಣ ಶ್ರೀ ಸೋಮನಾಥದೇವರ ದಿವ್ಯಶ್ರೀ ಪಾದಪದ್ಮಾರಾಧಕ"ರೆಂದೂ ಹೇಳಿಕೊಂಡಿರುವುದನ್ನು ನೋಡಿದ್ದೇವೆ. ಲಕ್ಷ್ಮೇಶ್ವರ ವೆಂದು ಉತ್ತರ ಕರ್ನಾಟಕದಲ್ಲಿ ಪ್ರಸಿದ್ಧವಾದ ಹುಲಿಗೆರೆಗಿಂತ ಬೇರೆಯಾದುದೆಂಬುದನ್ನು ಸೂಚಿಸುವುದಕ್ಕಾಗಿ 'ಚೆನ್ನದಕ್ಷಿಣ'ವೆಂಬ ವಿಶೇಷಣ ಇಲ್ಲಿ ಪ್ರಯೋಗವಾಗಿದೆ. ಈ ಹುಲಿಗೆರೆ ಯಾವುದೆಂದರೆ ವೀರಕಂಪಣ ಒಡೆಯರಿಂದ ವಾರಣಾಸಿಯೆಂಬ ಮಠವನ್ನು ಮಠಮಠವಾಗಿ ಪಡೆದ ಬಗೆಗೆ ಶಾಸನೋಲ್ಲೇಖ (E.C. X KOLAR PART II 205) ವಿರುವ ವಾಗಟ.

ಈ ಹುಲಿಗೆರೆಗೆ ಇಲ್ಲವೆ ವಾಗಟಕ್ಕೆ ಮಹಾಮಂಡಲಾಚಾರ್ಯ ಸಂಸಿದ್ಧ ಚಕ್ರವರ್ತಿ ಆಚಾರ್ಯವರ್ಯ, ಅಭಂಗ ರಾಹುತ್ತ ಚಂದ್ರಭೂಷಣದೇವ ಒಡೆಯರಿಗೂ ಸಂಬಂಧವಿದ್ದ ಬಗೆಗೆ ಹೊಸಕೋಟೆಯ ವಾಗಟದ 129 ನೇ ಶಿಲಾಶಾಸನ ಪ್ರಸ್ತಾಪವಿದೆ. ಈ ಚಂದ್ರಭೂಷಣದೇವ ಒಡೆಯರು ದಕ್ಷಿಣ ವಾರಣಾಸಿಯ ಸ್ವಯಂಭು ತ್ರಿಯಂಬಕ ದೇವರ ಪಾದಪದ್ಮಾರಾಧಕರಾಗಿದ್ದರೆಂದು ತಿಳಿದುಬರುತ್ತದೆ. ಮಹಾಲಿಂಗದೇವರ ಆರಾಧ್ಯದೈವ ಸೋಮನಾಥದೇವರ ವ್ಯಾಪ್ತತಾಕವೇ (ಹುಲಿಗೆರೆ) ಇಂದಿನ ವಾಗಟ್ಟ ಇಲ್ಲವೆ ವಾಗಟ. ಮಹಾಲಿಂಗಣದೇವರ ಮಠಮಠವಾಗಿದ್ದ ಈ ವಾರಣಾಸಿ ಹಾಗೂ ವಾಗಟಗಳೆರಡೂ ಬೆಂಗಳೂರು ಜಿಲ್ಲೆ ಹೊಸಕೋಟೆ ತಾಲ್ಲೂಕಿಗೆ ಸೇರಿದ ಊರುಗಳು.

ಮಹಾಲಿಂಗದೇವ ಅಲ್ಲಮಪ್ರಭುದೇವರ ವಚನಗಳನ್ನು ವ್ಯವಸ್ಥಿತವಾಗಿ ಷಟ್‌ಸ್ಥಲ ಮಾರ್ಗದಲ್ಲಿ ಅಧ್ಯಯನ ಮಾಡಿ ಸಂಕಲಿಸಿ ಕೊಟ್ಟಿದ್ದಲ್ಲದೆ ಅವುಗಳಿಗೆ ಟೀಕೆಯನ್ನು ಬರೆದು ನಮ್ಮಗಳ ಅಧ್ಯಯನಕ್ಕೆ ಸಹಾಯ ಮಾಡಿದ್ದಾರೆ.

| | |
|---|---|
| ಪಿಂಡಸ್ಥಲ | 4 ವಚನ |
| ಪಿಂಡಜ್ಞಾನಸ್ಥಲ | 7 ವಚನ |
| ಮಾಯಾವಿಲಸ ವಿಡಂಬನ ಸ್ಥಲ | 33 ವಚನ |
| ಸಂಸಾರಹೇಯಸ್ಥಲ | 5 ವಚನ |
| ಗುರುಕರುಣ ಸ್ಥಲ | 13 ವಚನ |
| ಭಕ್ತ ಸ್ಥಲ | 47 ವಚನ |
| ಮಾಹೇಶ್ವರ ಸ್ಥಲ | 43 ವಚನ |
| ಪ್ರಸಾದಿ ಸ್ಥಲ | 17 ವಚನ |

| | |
|---|---|
| ಪ್ರಾಣಲಿಂಗಿ ಸ್ಥಲ | 136 ಸ್ಥಲ ವಚನ |
| ಶರಣ ಸ್ಥಲ | 294 ವಚನ |
| ಐಕ್ಯ ಸ್ಥಲ | 89 ವಚನ |

ಅಲ್ಲಮಪ್ರಭುದೇವರ ವಚನಗಳನ್ನು ಟೀಕಿನ ಸಮೇತ ಕೆಲವು ಉದಾಹರಣೆಗಳನ್ನು ಗಮನಿಸೋಣ.

**ಭಕ್ತಸ್ಥಲದ 72 ವಚನ**

ಹೊನ್ನು ಮಾಯೆಯೆಂಬರು
ಹೆಣ್ಣು ಮಾಯೆಯೆಂಬರು
ಮಣ್ಣು ಮಾಯೆಯೆಂಬರು
ಹೊನ್ನು ಮಾಯೆಯಲ್ಲ,
ಹೆಣ್ಣು ಮಾಯೆಯಲ್ಲ, ಮಣ್ಣು ಮಾಯೆಯಲ್ಲ,
ಮನದ ಮುಂದಣ ಆಸೆಯೆ ಮಾಯೆ
ಕಾಣಾ ಗುಹೇಶ್ವರ

**ಮಹಾಲಿಂಗದೇವನ ಟೀಕು :** ಹೊನ್ನು, ಹೆಣ್ಣು, ಮಣ್ಣೆಂಬ ತ್ರಿವಿಧವನ್ನು ತನ್ನ ಸೊಮ್ಮೆಂದಭಿಲಾಷೆಗೆಯ್ವದೆ ಗುರು, ಲಿಂಗ, ಜಂಗಮಕ್ಕರ್ಪಿಸಿ ನಿರಾಶಾಭರಿತವಾಗಿರಲಲ್ಲದೆ ಆತನು ನಿರ್ಮಾಯನೆಂಬುದೀ ವಚನದ ಬಹುಶಬ್ದಕ್ಕೆ ಅರ್ಥ.

**ನಿರ್ವಚನ :** ಪ್ರಪಂಚದಲ್ಲಿ ನಾಗರಿಕತೆ ಹುಟ್ಟಿದಾಗಿನಿಂದಲೂ ಹೊನ್ನು ಮಾಯೆ, ಹೆಣ್ಣು ಮಾಯೆ, ಮಣ್ಣು ಮಾಯೆ ಎಂದು ಹೇಳುತ್ತಾ ಬರಲಾಗಿದೆ. ಆದರೆ ಈ ಮೂರನ್ನು ಸೂಕ್ಷ್ಮವಾಗಿ ಗಮನಿಸಿದ ಶರಣರು ಹೊನ್ನು ಮಾಯೆಯಲ್ಲ, ಹೆಣ್ಣು ಮಾಯೆಯಲ್ಲ, ಮಣ್ಣು ಮಾಯೆಯಲ್ಲ, ಮನದ ಮುಂದಿರುವ ಆಸೆಯೇ ಮಾಯೆ ಎಂದು ತಮ್ಮ ತೀರ್ಮಾನವನ್ನು ಹೇಳಿದ್ದಾರೆ. ಮನಸ್ಸಿನಲ್ಲಿ ಗಟ್ಟಿ ನಿರ್ಧಾರವಾದರೆ ಮಿಕ್ಕ ಎಲ್ಲಾ ವಿಷಯ ನಗಣ್ಯವಾದದ್ದು. ಆದರೆ ಈ ಸಿದ್ಧಿಗೆ ಮನುಷ್ಯ ತಲುಪಬೇಕಾದರೆ ಸಾಕಷ್ಟು ಸಾಧನೆ ಮಾಡಬೇಕಾಗುತ್ತದೆ.

**ಐಕ್ಯಸ್ಥಲ 73ನೇ ವಚನ**

ಕಳ್ಳಗಂಜಿ ಕಾಡ ಹೊಕ್ಕಡೆ ಹುಲಿ ತಿಂಬುದ ಮಾಬುದೆ?
ಹುಲಿಗಂಜಿ ಹುತ್ತನ ಹೊಕ್ಕಡೆ ಸರ್ಪ ತಿಂಬುದ ಮಾಬುದೆ?
ಕಾಲಕ್ಕಂಜಿ ಭಕ್ತನಾದೊಡೆ ಕರ್ಮ ತಿಂಬುದ ಮಾಬುದೆ?
ಮೃತ್ಯುವಿನ ಬಾಯ ತುತ್ತಾದ ವೇಷಡಂಬಕರನೇನೆಂಬೆ ಗುಹೇಶ್ವರ.

**ಮಹಾಲಿಂಗದೇವನ ಟೀಕೆ:** ಕಾಲಕರ್ಮಕ್ಕಂಜಿ ಭಕ್ತನಾದೊಡೆ ಅದು ಭಕ್ತಿಸ್ಥಲಕ್ಕೆ ಸಲ್ಲದು. ಅದೇನು ಕಾರಣವೆಂದೊಡೆ ಅದು ಸಹಜಭಕ್ತಿಯಿಲ್ಲವಾಗಿ. ಇಂತಪ್ಪ ವೇಷ ಲಾಂಛನ ಡಂಭಕರಿಗೆ ಭಕ್ತಿ ಇಲ್ಲವೆಂಬುದೀ ವಚನದ ಬಹುಶಬ್ದಂಗಳಿಗೇಕಾರ್ಥ.

**ನಿರ್ವಚನ:** ಕಳ್ಳನಿಗೆ ಹೆದರಿಕೊಂಡು ನೇರವಾದ ಊರ ದಾರಿ ಬಿಟ್ಟು ಕಾಡ ದಾರಿಯಲ್ಲಿ ಹೋದರೆ ಕಾಡಲ್ಲಿ ಇರುವ ಹುಲಿ ನಮ್ಮನ್ನು ತಿನ್ನದೆ ಬಿಡುತ್ತದೆಯೆ? ಕಾಡಿನಲ್ಲಿ ಹೋಗುವಾಗ ಹುಲಿಗೆ ಹೆದರಿಕೊಂಡು ಹುತ್ತದಲ್ಲಿ ಅಡಗಿಕೊಂಡರೆ, ಹುತ್ತದಲ್ಲಿ ಇರುವ ಸರ್ಪ ಕಡಿಯದೆ ಬಿಡುತ್ತದೆಯೆ? ಕಾಲ ಅಂದರೆ ಮೃತ್ಯುವಿಗೆ ಹೆದರಿ ಶಿವಭಕ್ತನಾದರೆ, ಯಮಧರ್ಮ ನಮ್ಮನ್ನು ಬಿಟ್ಟುಬಿಡುತ್ತಾನೆ ಎಂದು ನಂಬಿ ಭಕ್ತನಾದರೂ ನನ್ನ ಪ್ರಾರಬ್ಧ ಕರ್ಮದಿಂದಾಗಬೇಕು ಎಂದು ಆ ವಿಧಿ ನಿರ್ಧಾರ ಮಾಡಿರುವುದನ್ನು ತಪ್ಪಿಸಲು ಸಾಧ್ಯವೆ? ಶರಣ ವೇಷಧಾರಿಯಾಗಿ ಬಾಳುವೆಯನ್ನು ಸವೆಸುತ್ತಾ ಇದ್ದರೂ ಮೃತ್ಯುವಿನ ಬಾಯಿಗೆ ತುತ್ತಾದ ವೇಷಡಂಬಕರನ್ನು ನಾನು ಕಣ್ಣಿನಿಂದ ನೋಡಿರುವುದರಿಂದ ಇಂತಹ ಎಲ್ಲಾ ಪ್ರಯತ್ನಗಳು ವ್ಯರ್ಥ ಎಂಬುದೆ ಅಲ್ಲಮಪ್ರಭುವಿನ ಅಭಿಮತ.

**ಪ್ರಾಣಲಿಂಗಿಸ್ಥಲ 264**

> ನಿರಾಳವೆಂಬ ಕೂಸಿಂಗೆ ಬೆಣ್ಣೆಯನಿಕ್ಕಿ ಹೆಸರಿಟ್ಟು ಕರದವರಾರೂ?
> ಅಕಟಕಟಾ ಶಬ್ದದ ಲಜ್ಜೆಯ ನೋಡಾ!
> ಗುಹೇಶ್ವರನರಿಯದ ಅನುಭವಿಗಳೆಲ್ಲರ ತರಕಟ ಕಾಡಿತ್ತು

ನಿರಾಳ ನಿರವಯದ ಅನಿರ್ವಾಚ್ಯವೆಂಬ ಪರಬ್ರಹ್ಮವನ್ನು ಅರಿವಿನ ಬಗೆಗೆ ತಂದು ಹುಟ್ಟಿಸಿಕೊಂಡು ಸವಿಮಾತಿನ ವಶಕ್ಕೆ ತಂದು ವಾಗ್ಬ್ರಹ್ಮವ ನುಡಿವವರನ್ನು ಶಿವತತ್ತ್ವ ತಾನೇ ಮರೆಮಾಡಿ ಕಾಡಿತ್ತೆಂಬುದೀ ವಚನಾರ್ಥ.

**ನಿರ್ವಚನ :** ಇಲ್ಲಿ ಪರಬ್ರಹ್ಮವನ್ನು ಅರ್ಥಾತ್ ತನ್ನ ಅಂಗೈ ಮೇಲಿರುವ ಇಷ್ಟಲಿಂಗ ವನ್ನು ನಿರಾಳ, ನಿರವಯವ, ಅನಿರ್ವಾಚ್ಯನೆಂಬ ಪರಬ್ರಹ್ಮವನ್ನು ತನ್ನ ಅಂಗೈಗೆ ತಂದು ಅನುಷ್ಠಾನ ಮಾಡಬೇಕು. ಬರೀ ವಾಗ್ಬ್ರಹ್ಮವ ನುಡಿವವರ ಮಾತು ಏನೂ ಪ್ರಯೋಜನವಿಲ್ಲ ಎಂದು ನುಡಿದಿದ್ದಾರೆ.

ಅಲ್ಲಮಪ್ರಭುದೇವರ ವಚನಾಭ್ಯಾಸವನ್ನು ಸತತವಾಗಿ ಮಾಡುತ್ತ ಬಂದರೆ ಮಾತ್ರ ಅವುಗಳನ್ನು ಅನುಸಂಧಾನ ಮಾಡಲು ಸಾಧ್ಯ. ಇದಕ್ಕೆ ಸತತ ಅಧ್ಯಯನಶೀಲತೆಯನ್ನು ಬೆಳೆಸಿಕೊಳ್ಳಬೇಕು. ಇಲ್ಲದೆ ಹೋದರೆ ಒಂದು ಅಡಿ ಮುಂದುವರಿಯಲು ಸಾಧ್ಯವಿಲ್ಲ.

ಅಲ್ಲಮಪ್ರಭುದೇವರ ವಚನಾಭ್ಯಾಸಕ್ಕೆ ಮಹಾಲಿಂಗದೇವನ ಟೀಕೆ ಬಹಳ ಸಹಕಾರಿಯಾದದ್ದು. ಸತತ ಅಭ್ಯಾಸದಿಂದ ಇದನ್ನು ಅನುಸಂಧಾನ ಮಾಡಬಹುದು. ಶರಣ ಬಂಧುಗಳು, ವಚನಾಭ್ಯಾಸಿಗಳು ಸದಾ ಅಧ್ಯಯನಶೀಲರಾಗಿದ್ದರೆ ಮಾತ್ರ ಅಲ್ಲಮಪ್ರಭುದೇವರನ್ನು ಅರ್ಥ ಮಾಡಿಕೊಳ್ಳುವುದು ಸಾಧ್ಯ.

❑

# ಸರ್ವೋದಯದ ಕನಸು ಕಂಡ ಯುಗಪುರುಷ

ಡಾ. ಎನ್.ಎಂ. ಗಿರಿಜಾಪತಿ

ಅಕ್ಷಯ ತೃತೀಯ ಕನ್ನಡ ನಾಡಿನ ಮೂಲಕ ಜಗತ್ತಿನ ವಿಚಾರಪರ ಚಿಂತನೆಗಳ ಬೆಳಕು ಮೂಡಿದ ದಿನ. ಈ ದಿನದಂದು ಜನ್ಮತಳೆದ ಬಸವೇಶ್ವರರನ್ನು ಯುಗಪುರುಷ ರೆಂಬ ಅಭಿದಾನದಿಂದ ಗೌರವಿಸಲು ಕಾರಣವಾದ ದಿನವೂ ಆಗಿದೆ. ತನ್ನ ಬದುಕಿನುದ್ದಕ್ಕೂ ಹೋರಾಟದ ಹಾದಿಗಳನ್ನು ತುಳಿದ ಬಸವಣ್ಣ ಅಂದಿನ ಸಮಾಜದಲ್ಲಿ ಮಡುಗಟ್ಟಿದ್ದ ಮೌಢ್ಯಗಳನ್ನು ದೂಡಿ ಸರ್ವೋದಯದ ಬಾಗಿಲುಗಳನ್ನು ತೆರೆದು ಎಲ್ಲರನ್ನೂ ಒಳಗೆ ಕರೆದು ತಂದು ಜೊತೆಗೂಡಿಸಿಕೊಂಡವರು.

'ಬಸವಯುಗ' ಹನ್ನೆರಡನೇ ಶತಮಾನದಲ್ಲಿ ಕರ್ನಾಟಕದ ನೆಲದಲ್ಲಿ ಘಟಿಸಿದ ವೈಚಾರಿಕ ಕ್ರಾಂತಿಯ ನಾಯಕನಾದ ಬಸವಣ್ಣನಿಗೆ ಅಂಕಿತಗೊಂಡಿದೆ. ಸಾಹಿತ್ಯಚರಿತ್ರಕಾರರು ಸಹ ಈ ಕಾಲಘಟ್ಟವನ್ನು 'ಬಸವಯುಗ' ಎಂದು ಕರೆದಿದ್ದಾರೆ. ಯುಗಪ್ರಜ್ಞೆಗೆ ಕಾಲಾತೀತ ವಾಗುವ ಶಕ್ತಿ ಮತ್ತು ಆ ಶಕ್ತಿಯು ಮುಂಬರುವ ಕಾಲಮಾನಗಳೊಂದಿಗೆ ಅನುಸಂಧಾನ ನಡೆಸುವಂತಿರಬೇಕೆಂಬ ಆಶಯಗಳು ಯುಗಪುರುಷರಾಗುವವರಲ್ಲಿ ಇರಬೇಕೆಂಬ ಆಲೋಚನೆಗಳಿಗೆ ರೂಪಕದಂತಿದ್ದವರು ಬಸವಣ್ಣ. ಇಲ್ಲಿನ 'ಬಸವಯುಗ' ಎಂಬ ಕಲ್ಪನೆ ಬಸವಣ್ಣ ಧರ್ಮಸಂಸ್ಥಾಪಕನೆಂಬ ಅಥವಾ ಮತ-ತತ್ವಸಿದ್ಧಾಂತಗಳ ಪ್ರತಿಪಾದಕನೆಂಬ ಕಾರಣಗಳಿಂದ ರೂಪಗೊಂಡ ಪದವೂ ಅಲ್ಲ, ಪದವಿಯೂ ಅಲ್ಲ. ಈ ಯುಗದ ಗೌರವ ಬಸವಣ್ಣನ ವ್ಯಕ್ತಿತ್ವಕ್ಕೆ ಸಂದ ಅಭಿಧಾನ. 'ಇಂತಹ ಯುಗಪ್ರಜ್ಞೆಯುಳ್ಳವನು ಕೇವಲ ತತ್ಕಾಲೀನನೂ ಅಲ್ಲ, ತದ್ದೇಶೀಯನೂ ಅಲ್ಲ, ಏಕೆಂದರೆ ಯಾವಾಗ ಆತ ತನ್ನ ಕಾಲದೇಶದಲ್ಲಿ ಜೀವಂತವಾಗಿರುವನೋ ಅವನು ಎಲ್ಲ ಕಾಲದೇಶದಲ್ಲೂ ಜೀವಂತವಾಗಿರುತ್ತಾನೆ. ತನ್ನ ದೇಶ, ಕಾಲದ ಎಚ್ಚರವಿರುವಾತನಿಗೆ ಎಲ್ಲ ದೇಶ, ಕಾಲದ ಎಚ್ಚರ, ಅರಿವೂ ಇರಲು ಸಾಧ್ಯ. ಪ್ರಗತಿಪರ ಚಿಂತನಶೀಲರ ದೃಷ್ಟಿಯಲ್ಲಿ ಬಸವನದು ಯುಗ ಪ್ರವರ್ತಕ ವ್ಯಕ್ತಿತ್ವ' ಎಂದು ಡಾ. ಮೃತ್ಯುಂಜಯ ರುಮಾಲೆಯವರು ತಮ್ಮ 'ಬಸವ ಸಾಹಿತ್ಯ' ಕೃತಿಯ ಪ್ರಸ್ತಾವನೆಯಲ್ಲಿ ಹೇಳಿದ್ದಾರೆ.

ತನ್ನ ಕಾಲದ ಧಾರ್ಮಿಕ, ಸಾಮಾಜಿಕ, ಆರ್ಥಿಕ ಶೋಷಣೆಗಳಿಗೆ, ಜನಜೀವನ ವಿರೋಧಿ ವರ್ಣಸಂಕರಗಳಿಗೆ 'ಅಂಕುಶ' ಶಕ್ತಿಯಾಗಿ ನಿಂತ ಬಸವಣ್ಣನವರು ಅನಂತರದಲ್ಲಿ ಬಂದ ಎಲ್ಲ ಕಾಲಗಳಲ್ಲಿಯೂ ವಿವಿಧ ರೀತಿಯ ವಿಚಾರಪರ ಸೈದ್ಧಾಂತಿಕ ನೆಲೆಗಳಿಗೆ

ವಸ್ತುವಾದವರು. ವಿಷಯವಾದವರು. ಮಾಧ್ಯಮವಾದವರು. ಅಸಮಾನತೆಯ ತಳಹದಿಯಲ್ಲಿ ರೂಪಗೊಂಡ ಪ್ರಭುತ್ವ ಮತ್ತು ಅದಕ್ಕೆ ಒತ್ತಾಸೆಯಾಗಿ ನಿಂತ ದ್ವಿಜರ ಪ್ರತಿಗಾಮಿ ಧೋರಣೆಗಳ ಕಡುವಿರೋಧಿಯಾಗಿ, ಪ್ರಜಾತಾಂತ್ರಿಕ ಮೌಲ್ಯಗಳ ಪ್ರತಿಪಾದಕರಾಗಿ, ಪುರೋಹಿತ ಶಾಹಿಯನ್ನು ಸಾರಾಸಗಟಾಗಿ ಧಿಕ್ಕರಿಸುವಂತೆ ಕರೆ ನೀಡಿದ ಬಸವಣ್ಣ ಶೋಷಿತರಿಗೆ ದನಿಯಾದ ಈ ನೆಲದ ಮೊದಲ ಮಹಾಪುರುಷ. ಮನುಷ್ಯರು ಬಳಸುವ ಭಾಷೆಗಳೆಲ್ಲವೂ ದೇವಭಾಷೆಗಳೆಂದು ಹೇಳಿ, ಜನಭಾಷೆಯಾಗಿದ್ದ ಕನ್ನಡವನ್ನು ತನ್ನ ವಚನಗಳಿಗೆ ಬಳಸಿಕೊಂಡ ಬಸವಣ್ಣನವರಿಗೆ ಸಂಸ್ಕೃತದ ಜ್ಞಾನ ಆಳವಾಗಿತ್ತು, ಅಷ್ಟೇ ಅಲ್ಲ, ಅಲ್ಲಿನ ಅಂತರಂಗದ ಸಂಗತಿಗಳನ್ನು ಜನಸಾಮಾನ್ಯರಿಗೆ ತೆರೆದಿಡಬೇಕೆಂಬ ಹಂಬಲವೂ ಇದ್ದಿದ್ದರಿಂದ ಉಪನಿಷತ್ತುಗಳ ಸಾರವನ್ನು ಅನುಭವಮಂಟಪದಲ್ಲಿ ಅರಿವಿನ ಕದ ತೆರೆಸಲು ಬಳಸಿಕೊಂಡ ರೀತಿ ಅಚ್ಚರಿ ಹುಟ್ಟಿಸುವಂತಿದೆ.

ನಿಮ್ನವರ್ಗಗಳ ಜನಜೀವನ ಸುಧಾರಣೆಗೆ ಬಸವಣ್ಣ ಮುಂದಾದದ್ದು ಅನಂತರ ನಡೆದ ಹಲವಾರು ಮುಖ್ಯವಾದ ಘಟನೆಗಳಿಗೆ ಸಾಕ್ಷಿಯಾಯಿತು. ಅಲ್ಲಿ ಆತನಿಗೆ ಎದುರಾದ ಸವಾಲುಗಳು ಮತ್ತು ಸಮಸ್ಯೆಗಳಿಗೆ ಹತ್ತಾರು ಮುಖಗಳು. ಒಂದೊಂದು ಮುಖವೂ ಭಯಾನಕ; ಮನುಷ್ಯ ಮನುಷ್ಯರನ್ನು ಕೀಳು ಜಂತುಗಳಿಗಿಂತಲೂ ಕಡೆಯಾಗಿ ಕಾಣುತ್ತಿದ್ದ ದೃಶ್ಯ. ಈ ಅಮಾನವೀಯ ನಡೆಗಳಿಗೆ ಕಡಿವಾಣ ಹಾಕಿ ಅವುಗಳನ್ನು ಸರಿಯಾದ ದಾರಿಗೆ ತರುವಲ್ಲಿ ಮುಂದಾದ ಬಸವನ ನೆರವಿಗೆ ಬಂದದ್ದು ಆತ ಅಧ್ಯಯನ ಮಾಡಿ ಅರ್ಥೈಸಿಕೊಂಡಿದ್ದ ಧರ್ಮಶಾಸ್ತ್ರಗಳ ನಿಜವಾದ ಪರಿಕಲ್ಪನೆಗಳು. ಆ ಕಾರಣಗಳಿಂದಾಗಿಯೇ ಬಸವಣ್ಣ ಧರ್ಮದ ತಳಹದಿಯಲ್ಲಿಯೇ ಸಮಾಜವನ್ನು ಇತರರನ್ನು ಶುದ್ಧೀಕರಿಸಲು ಮುಂದಾದ. ಅಕ್ಷರವಂಚಿತರನ್ನಾಗಿ ಮಾಡಿದ ಅಕ್ಷರಸ್ಥ ವರ್ಗಗಳ ನಡೆಗಳಲ್ಲಿನ ಹುಳುಕುಗಳನ್ನು ಎತ್ತಿತೋರಿಸಲು ಬಸವ ಅಕ್ಷರಕಲಿಕೆಯ ಕ್ರಮವನ್ನೇ ನಿರಾಕರಿಸಿ ಅನುಭಾವದ ತಳಹದಿಯ ಮೇಲೆ 'ಆನು ಒಲಿದಂತೆ ಹಾಡುವೆ' ಎನ್ನುವ ಅಕ್ಷರಮುಕ್ತ ಪ್ರಪಂಚವನ್ನು ಮೌಖಿಕ ಪರಂಪರೆಗೆ ಜೋಡಿಸಿದ. ಅದರ ಪರಿಣಾಮವಾಗಿ ಬಸವನ ಬಳಗಕ್ಕೆ ಸೇರಿದ ಶರಣಶರಣೆಯರಲ್ಲಿ ಅಕ್ಷರಸ್ಥರಿಗಿಂತಲೂ ಅನಕ್ಷರಸ್ಥರ ಸಮೂಹದ ಪ್ರಮಾಣ ದೊಡ್ಡದಿತ್ತು. ಜ್ಞಾನಕ್ಕೂ ಅಕ್ಷರಗಳಿಗೂ ಇದ್ದ ಹುಸಿ ಸಂಬಂಧಗಳನ್ನು ಒಪ್ಪದ ಶರಣರ ನಡೆನುಡಿಗಳು ಅಂತರಂಗದ ಪರಿಪಾಕದಲ್ಲಿ ಅದ್ದಿ ತೆಗೆದಂತೆ ಇರುತ್ತಿದ್ದವು. ಶರಣರ ಪರಿಕಲ್ಪನೆಯಲ್ಲಿ ವಿದ್ಯೆ ಎಂದರೆ ಅಕ್ಷರ ಕಲಿಕೆ, ಓದಾಳಿತನ ಅಥವಾ ಜ್ಞಾನಾರ್ಜನೆ. ಅದರಲ್ಲಿಯೂ ಆ ಕಾಲದಲ್ಲಿ ಪ್ರಚುರವಾಗಿದ್ದ ಬ್ರಹ್ಮಜ್ಞಾನ, ವೇದಾಗಮ, ಶಾಸ್ತ್ರವೈದುಷ್ಯ ಎಂಬಂತಿರಲಿಲ್ಲ, ಬದಲಿಗೆ ಆತ್ಮಜ್ಞಾನವೇ ನಿಜವಾದ ವಿದ್ಯೆ. ಇಲ್ಲಿ ಆತ್ಮಜ್ಞಾನ ಎಂದರೆ ತನ್ನನ್ನು ತಾನು ಅರಿತುಕೊಳ್ಳುವುದು. ಆ

ಅರಿವಿನ ಮೂಲಕ ತಾನೇ ಗುರುವಿನ ಸ್ಥಾನ ಪಡೆದುಕೊಳ್ಳುವುದು. ತನ್ನರಿವೆ ತನಗೆ ಗುರು, ತನ್ನಿರವಿನ ಕ್ರಮಗಳೇ ತನ್ನ ಮುನ್ನಿನ ಜೀವನದ ಬೆಳಕು. ಈ ಇರವು ಮತ್ತು ಮುನ್ನಿನ ಬದುಕು ಎನ್ನುವುದು ಕಾಯಕಮಾರ್ಗವನ್ನು ಅವಲಂಬಿಸಿತ್ತು. ಈ ಎಲ್ಲ ಸಂಗತಿಗಳನ್ನೂ ಗಮನಿಸಿದಾಗ ದೇವರನ್ನು ಹೊರಗೆ ಕಾಣುವೆನೆಂಬ ಮೂರ್ಖತನವಾಗಲೀ, ಅಥವಾ ದೇವರೇ ಇಲ್ಲವೆಂಬ ಅಜ್ಞಾನದ ವಾದ ವಿವಾದಗಳಾಗಲಿ ನಮಗೆ ಪ್ರಯೋಜನಕ್ಕೆ ಬರಲಾರವು. ಇರುವ ದೇವರು ಅಥವಾ ಕಾಣದ ದೇವರು ಈ ಎರಡೂ ಇರುವುದು ಮತ್ತು ಆ ದೇವರ ಇರುವಿಕೆಯನ್ನು ಕಾಣಬೇಕೆನ್ನುವುದು ಅವರವರ ಅಂತರಂಗಕ್ಕೆ ಸಂಬಂಧಿಸಿದ ವಿಚಾರ. ಅದಕ್ಕಾಗಿ ಬೇಕಾಗಿರುವುದು ಅಂತರಂಗದ ಶುದ್ಧಿ, ತೊರೆಯಬೇಕಾದದ್ದು ಬಹಿರಂಗದ ಆಡಂಬರಗಳು ಎಂಬ ಆಲೋಚನೆಗಳು ಜೀವನದ ಮಹತ್ತರ ಸೂತ್ರಗಳಾಗಿ ವಚನಗಳಾದವು. ಮನುಷ್ಯರಲ್ಲಿಯೇ ದೇವರನ್ನು ಕಾಣುವಂತೆ ಮಾಡುವ, ಪರಲೋಕದ ಕಲ್ಪನೆಗಳನ್ನು ಅಲ್ಲಗಳೆದು ಈ ಲೋಕದ ನಮ್ಮ ನಮ್ಮ ಬದುಕಿನ ರೀತಿ ನೀತಿಗಳು ಸ್ವರ್ಗ ಮತ್ತು ನರಕಗಳೆಂಬ ಸತ್ಯವನ್ನು ಮನಗಾಣಿಸಿದ ಬಸವನು ಕಂಡ ಸರ್ವೋದಯದ ಕನಸು ಎಲ್ಲವನ್ನೂ ಉತ್ತೇಜಿಸಿದಂತೆ ತೋರುತ್ತದೆ. ಹಾಗಾಗಿ ಪ್ರಕೃತಿಯಲ್ಲಿ ಸಹಜವಾಗಿ ಜನ್ಮ ತಳೆದು, ಬಾಳಿ, ಪುನಃ ಪ್ರಕೃತಿಯ ಮಡಿಲು ಸೇರುವ ಮನುಷ್ಯನಿಗೆ ಬಾಳಿನ ಸಮಾನತೆಯನ್ನು ಸಾಧಿಸಿಕೊಳ್ಳುವ ಅವಕಾಶಗಳನ್ನು ತೆರೆದು ತೋರಿಸಿದ ಮೊದಲಿಗನೆಂದರೆ ಬಸವಣ್ಣ.

ಬಸವಣ್ಣನು ಪರಾಶ್ರಯದ ಬದುಕಿಗಿಂತ ಪರಮಾತ್ಮನ ಆಶ್ರಯದಲ್ಲಿ ಬದುಕಬೇಕೆಂಬ ಹಂಬಲವನ್ನು ಜನತೆಯಲ್ಲಿ ಬಿತ್ತಿ ಬೆಳೆಸಿದವನು. ಇದಕ್ಕಾಗಿ ಸಮಾಜವನ್ನು ಭಕ್ತ ಮತ್ತು ಭವಿ ಎಂದು ಆತ ವಿಂಗಡಿಸಿದ (ಇಲ್ಲಿ ಭವಿ ಎಂದರೆ ಸದಾಚಾರಿಯಲ್ಲದವನು, ಭೋಗಲಾಲಸೆಗಳ ಜೀವನಗಳಿಗೆ ಪಕ್ಕಾದವನು ಎಂದರ್ಥ). ಭಕ್ತರಾದವರು ಶ್ರದ್ಧೆಯಿಂದ ಕಾಯಕ ಮಾಡಿಕೊಂಡು, ಬರುವ ದುಡಿಮೆಯನ್ನು ಕೂಡಿಡದೆ ಹಂಚಿ ಉಣ್ಣಬೇಕೆಂಬ ಕಟ್ಟಳೆಗಳನ್ನು ವಿಧಿಸಿದ. ಇಲ್ಲಿ ಕಾಯಕ ಎಂದರೆ ವೃತ್ತಿ; ಅದು ಯಾವುದೇ ವೃತ್ತಿಯಾಗಿದ್ದರೂ ಸರಿ ಎಂದು ನುಡಿದ ಬಸವ ಎಲ್ಲರೂ ವೃತ್ತಿಘನತೆಯನ್ನು (Dignity of Labour) ಗೌರವಿಸುವಂತೆ ಮಾಡಿದ್ದು ಜಗತ್ತಿನ ಇತಿಹಾಸದಲ್ಲಿಯೇ ಮೊದಲು. ಇಲ್ಲಿ ದುಡಿಮೆಯು ಬದುಕಿನ ಹೊಸ ದಾರಿಗಳನ್ನು ನಿರ್ಮಿಸುತ್ತದೆ, ಆರ್ಥಿಕ ಸ್ವಾತಂತ್ರ್ಯವು ಜೀವನದ ಇತರ ಸ್ವಾತಂತ್ರ್ಯದ ಬಾಗಿಲುಗಳನ್ನು ತೆರೆದಿಡಬಲ್ಲವೆಂಬ ಜಿಜ್ಞಾಸೆಯಲ್ಲಿ ಎರಕಗೊಂಡ ಬಸವಣ್ಣನ ಕಾಯಕ ಮತ್ತು ದಾಸೋಹದ ಪರಿಕಲ್ಪನೆಗಳು ಹುಟ್ಟುಹಾಕಿದ ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಬದಲಾವಣೆಗಳು ಎಲ್ಲ ಕಾಲಕ್ಕೂ ಮಾದರಿಯಾಗುವಂತಿವೆ. ಹೀಗಾಗಿ ಬಸವನೆಂದರೆ "ಬರೆದಷ್ಟು ಬರೆಯಿಸಿಕೊಳ್ಳುವ, ಓದಿದಷ್ಟು ಓದಿಸಿಕೊಳ್ಳುವ, ನೋಡಿದಷ್ಟು ಕಾಣುವ, ಚಿಂತಿಸಿದಷ್ಟು

ಚಿಂತನೆಗೆ ಒಳಗಾಗುವ ಹನ್ನೆರಡನೆಯ ಶತಮಾನದ ಬಸವಣ್ಣ, ಈ ಶತಮಾನದುದ್ದಕ್ಕೂ ಒಂದು ಚಿಂತನಶೀಲ ಪರಂಪರೆಯನ್ನು ಜೀವಂತವಾಗಿ ಸೃಷ್ಟಿಸಿದ್ದಾನೆ. ಎಲ್ಲಾ ಪ್ರಜ್ಞಾವಂತ ಬರಹಗಾರರಿಗೆ ನಿಲುಕುವ, ಎಲ್ಲ ಪಂಥದ ಓದುಗರಿಗೂ ಹಿಡಿಸುವ ಇವನು ಇಂದಿಗೂ ನಮ್ಮಿಂದ ಬರೆಯಿಸಿಕೊಳ್ಳುತ್ತಿದ್ದಾನೆ ಎನ್ನುವ ರುವಾಲೆಯವರ ಮಾತುಗಳು ಬಸವನ ವಿಶ್ವವ್ಯಾಪಕತೆಯ ಚಿಂತನೆಗಳನ್ನು ನಿರೂಪಿಸುತ್ತದೆ.

ವಿಶ್ವಗುರು ಬಸವಣ್ಣ, ವಿಶ್ವಾರಾಧ್ಯ ಬಸವಣ್ಣ, ಲೋಕಾರಾಧ್ಯ ಬಸವೇಶ್ವರರು, ಜಗಜ್ಯೋತಿ, ಗುರುಬಸವ, ಶಿವಬಸವ, ಸಂಗನಬಸವ, ಕಲ್ಯಾಣಬಸವ, ಸಿದ್ಧಬಸವ, ಬಸವರಾಜದೇವರು, ಬಸವಪ್ರಭು, ಬಸವಾರಾಧ್ಯ, ಬಸವಲಿಂಗ, ಬಸವೇಶ್ವರ, ಬಸವಿದೇವ, ಬಸವಯ್ಯ ಎನ್ನುವವರೆಗೆ ಅನೇಕ ಹೋಲಿಕೆ ಮತ್ತು ಆಪ್ತ ಸಂಬಂಧಗಳಿಗೆ ಕಾರಣರಾದ ಬಸವಣ್ಣ ಒಂದರ್ಥದಲ್ಲಿ ಕಾರಣಪುರುಷರೂ ಹೌದು. ಹಾಗಾಗಿ ಬಸವಣ್ಣನನ್ನು ಕುರಿತ ಪುರಾಣಗಳು, ಪುರಾಣಕಾವ್ಯಗಳು, ಧಾರ್ಮಿಕ ಚೌಕಟ್ಟಿನಲ್ಲಿ ರಚಿತವಾದ ಸಂಪಾದನೆಗಳು, ಆಧುನಿಕ ಸಂದರ್ಭದಲ್ಲಿನ ಕಾದಂಬರಿಗಳು, ನಾಟಕಗಳು, ಸಂಶೋಧನಾ ಪ್ರಬಂಧಗಳು, ವ್ಯಕ್ತಿಚಿತ್ರಗಳು, ಜೀವನಚರಿತ್ರೆಗಳು ಅವರನ್ನು ಕಾಣಿಸುವಲ್ಲಿ ತೋರಿರುವ ಅನನ್ಯ ಪ್ರೀತಿ ಮತ್ತು ಅಪರಿಮಿತ ಅಚ್ಚರಿ ಹುಟ್ಟಿಸುವಂಥವು. ಅವು ಬಸವಣ್ಣನ ಭೂಮ ವ್ಯಕ್ತಿತ್ವವನ್ನು ಹಲವು ಆಯಾಮಗಳಲ್ಲಿ ತೆರೆದಿಡಲು ಪ್ರಯತ್ನಿಸಿವೆ.

ಈ ಪ್ರಯತ್ನಗಳಿಗಿಂತಲೂ ಹೆಚ್ಚಾಗಿ ಬಸವಣ್ಣನನ್ನು ಮತ್ತಷ್ಟು ಅರ್ಥೈಸಿಕೊಳ್ಳಲು ಸಾಧ್ಯವಾಗಿದ್ದು ಇಂಗ್ಲಿಷ್ ಶಿಕ್ಷಣದಿಂದ ಬೆಳೆದು ಬಂದ ವಿವಿಧ ಜ್ಞಾನಶಿಸ್ತುಗಳ ಅನುಸಂಧಾನ ಮತ್ತು ನೇರ ಸಂಶೋಧನೆಗಳಿಂದ. ಬಸವಣ್ಣನ ಚಿಂತನೆಗಳಲ್ಲಿ ಜ್ಞಾನಶಿಸ್ತುಗಳ ಬಹುಳವಿದೆ. ಜಗತ್ತಿನ ವಿವಿಧ ಮೂಲೆಗಳಲ್ಲಿ ಬೆಳೆದು ಬಂದ ಮಾರ್ಕ್ಸ್‌ವಾದ, ಸಮಾಜವಾದ, ಅಸ್ತಿತ್ವವಾದ, ಭೌತವಾದ, ಸ್ತ್ರೀವಾದ ಮತ್ತು ಇತ್ತೀಚಿಗಿನ ಸಬಾಲ್ಟ್ರನ್ ಅಧ್ಯಯನ ಮೊದಲಾದವುಗಳಿಗೆಲ್ಲ ಆಕರಗಳಾಗಿ ವಚನಗಳ ವಿಶ್ಲೇಷಣೆ ಮತ್ತು ಅಧ್ಯಯನ ನಡೆಯುತ್ತಿದೆ. ಪ್ರಾಯಶಃ ಭಾರತದ ಮಧ್ಯಕಾಲೀನ ಚರಿತ್ರೆಯಲ್ಲಿ ಆಗಿಹೋದ ಮಹಾಪುರುಷರ ಸಾಲಿನಲ್ಲಿ ಗಮನ ಸೆಳೆಯುವ ಬಸವಣ್ಣನನ್ನು ಕುರಿತು ನಡೆದಿರುವಷ್ಟು ಅಧ್ಯಯನಗಳು ಇತರರ ಬಗ್ಗೆ ನಡೆದಿರಲಾರದು. ಇದಕ್ಕೆ ಕಾರಣ ಬಸವಣ್ಣನನ್ನು ಧಾರ್ಮಿಕ ಪರದೆಗಳಲ್ಲಿ ನೋಡುವುದಕ್ಕಿಂತಲೂ ಅದರಾಚೆಗಿನ ಚೌಕಟ್ಟುಗಳಲ್ಲಿ ನೋಡುವ ಅವಕಾಶಗಳು ಅಧಿಕ ಪ್ರಮಾಣದಲ್ಲಿವೆ. ಅವು ಸರ್ವೋದಯದ ಬಾಗಿಲುಗಳನ್ನು ಎಲ್ಲ ವರ್ಗದವರಿಗೆ ಎಲ್ಲ ಕಾಲಗಳಲ್ಲಿಯೂ ತೆರೆದಿಡುವಂತಿವೆ.

❑

# ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣನವರು

**ನಗಲೇ ಶಿವಕುಮಾರ**

'ಬ' ಎಂಬಲ್ಲಿ ಎನ್ನ ಭವವು ಹರಿಯಿತ್ತು
'ಸ' ಎಂಬಲ್ಲಿ ಸರ್ವಜ್ಞಾನಿಯಾದೆನು
'ವ' ಎಂಬಲ್ಲಿ ವಚಿಸುವಡೆ ವಸ್ತುಚೈತನ್ಯಾತ್ಮಕನಾದೆನು
ಇಂತೀ ಬಸವಾಕ್ಷರತ್ರಯವೆನ್ನ ಸರ್ವಾಂಗದಲ್ಲಿ
ತೊಳಗಿ ಬೆಳಗಿದ ಭೇದವನರಿದು
ಆನು ನೀನು 'ಬಸವಾ, ಬಸವಾ, ಬಸವಾ'
ಎನುತಿರ್ದೆನಯ್ಯಾ ಗುಹೇಶ್ವರಾ

**– ಅಲ್ಲಮಪ್ರಭುದೇವರು**

'ಅನುಭವ ಮಂಟಪ'ವನ್ನು ಬಸವಣ್ಣನವರು ಸ್ಥಾಪಿಸಿ ಅಮರಗಣಂಗಳೆನಿಸಿದ 770 ಶರಣಶರಣೆಯರಿಗೆ ಇಷ್ಟಲಿಂಗಸಾಧನೆಯ ಭಕ್ತಿಮಾರ್ಗವನ್ನು ತೋರಿ, ಸತ್ಯಶುದ್ಧ ಕಾಯಕ, ನಿತ್ಯಲಿಂಗಾರ್ಚನೆ, ಭಕ್ತಿದಾಸೋಹ, ಪ್ರಸಾದಸಂತೃಪ್ತಿಯ ಜೀವನವನ್ನು ನಡೆಸುವಂತೆ ತಿಳಿಸಿಕೊಟ್ಟು ಅವರನ್ನೆಲ್ಲ ಅನುಭಾವಮೂರ್ತಿಗಳನ್ನಾಗಿ ಮಾಡಿದರು. ಜ್ಞಾನದಾಸೋಹದೊಡನೆ ಅನ್ನದಾಸೋಹವೂ ಅನುಭವಮಂಟಪದಲ್ಲಿ ನಡೆಯುತ್ತಿತ್ತು. ಇದು ವರ್ಣಾಶ್ರಮರಹಿತ, ವರ್ಗ–ಲಿಂಗ–ರಹಿತ, ಸರ್ವರಿಗೂ ಮುಕ್ತವಾದ ಹಾಗೂ ಸಮಾನಾವಕಾಶವುಳ್ಳ ಸಮಾಜೋಧಾರ್ಮಿಕ ಚಿಂತನ–ಮಂಥನದ ಸಂಸ್ಥೆಯಾಗಿತ್ತು.

**ವಚನಗಳು ಕನ್ನಡದ ಉಪನಿಷತ್ತುಗಳು :** ಬಸವಣ್ಣನವರು ತಾವು ರೂಪಿಸಿದ ಆ ಶಿವಾನುಭವ ಮಂಟಪದಲ್ಲಿ ಅಪ್ಪ, ಅಯ್ಯ, ಅಣ್ಣ, ಅಕ್ಕ, ಅಮ್ಮ, ಅವ್ವ ಮುಂತಾದ, ಕಕ್ಕುಲತೆಯನ್ನು ಹೊರಸೂಸುವ, ಹಳೆಯ ಅರ್ಥದ ಹೊಸ ಶಬ್ದಗಳನ್ನು ವಿನೂತನವಾಗಿ ಪ್ರಯೋಗಕ್ಕೆ ತಂದರು. ಆ ಪದಗಳು ಅನುಭವಮಂಟಪಕ್ಕಾಗಿಯೇ ಜನ್ಮ ತಾಳಿದವು ಗಳೆಂದೂ ಅನುಭವಮಂಟಪಕ್ಕಾಗಿಯೇ ಇವು ಮೀಸಲಾಗಿರುವಂಥವೆಂದೂ ಹೇಳಿದರೆ ಅತಿಶಯೋಕ್ತಿಯಾಗದು. ಬಸವಾದಿ ಶರಣರ ವಚನಗಳು ಕನ್ನಡ ಉಪನಿಷತ್ತುಗಳೆಂದು ಮಾನ್ಯತೆ ಪಡೆದಿವೆ.

ಎಲ್ಲರೂ ತಿಳಿದಿರುವಂತೆ ವಿಶ್ವಗುರು ಬಸವಣ್ಣನವರು ಒಬ್ಬ ಚಾರಿತ್ರಿಕ ಯುಗಪುರುಷ ರಾಗಿದ್ದಾರೆ. ಅವರ ವಚನಗಳು ಅವರ ವ್ಯಕ್ತಿತ್ವದ ಸಾಧನೆಯ ಪ್ರತಿಬಿಂಬಗಳಾಗಿವೆ. ಪ್ರತಿಯೊಂದು ವಚನದಲ್ಲಿಯೂ ಅವರ ಸೈದ್ಧಾಂತಿಕ ನಿಲುವು ಸುಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

ಅವರ ಇಡೀ ಜೀವನವೇ ಎಲ್ಲ ಮಾನವರ ಪಾಲಿಗೆ ಒಂದು ಉನ್ನತ ಆದರ್ಶವಾಗಿ ನಿಲ್ಲುವಂತಹುದು.

**ವಚನಕಾರರಲ್ಲಿ ಅಗ್ರಗಣ್ಯರು :** ಶಿವಾನುಭವ ಮಂಟಪದಲ್ಲಿ ಶಿವಶರಣರು ಸುಪ್ರಭಾತ ಸಮಯದಲ್ಲಿ ಬಸವೇಶ್ವರರೊಡನೆ ಸಭೆ ಸೇರಿ ಒಂದು ಜಾವ ಹೊತ್ತು ವಚನಾಮೃತವನ್ನು ಕೇಳಿ ಅದನ್ನು ಕುರಿತು ಧ್ಯಾನಿಸಿದ ಬಳಿಕ ತಮ್ಮ ತಮ್ಮ ಕೆಲಸಕಾರ್ಯಗಳಿಗೆ ಹೋಗುತ್ತಿದ್ದರು. ಕಲ್ಯಾಣದ ಶರಣಶರಣೆಯರು ಅಮೂಲ್ಯವಾದ ವಚನಗಳನ್ನು ರಚಿಸಿ ಕನ್ನಡನಾಡಿಗೆ ನೀಡಿದ್ದಾರೆ. ಆ ಕಾಲಕ್ಕೆ ವಚನರಚನೆ ಎಂಬುದು ಒಂದು ಸಮಷ್ಟಿಕಾರ್ಯವಾಗಿ ನಡೆಯಿತು. ಬಸವಣ್ಣನವರ ವಚನಗಳ ಅಂಕಿತನಾಮ 'ಕೂಡಲಸಂಗಮದೇವ'ಎಂದಿದ್ದು ಅವರ ವಚನಗಳಲ್ಲಿ 960 ಷಟ್ಸ್ಥಲ ವಚನಗಳು ಮತ್ತು 460ಕ್ಕೂ ಹೆಚ್ಚಿನ ವಚನಗಳು – ಒಟ್ಟು 1,426 ವಚನಗಳು ಲಭ್ಯವಾಗಿವೆ.

**ಲೋಕಪೂಜ್ಯರು (ಇಷ್ಟಲಿಂಗ ಪ್ರತಿಪಾದಕರು) :** ಬಸವಣ್ಣನವರು ಇಷ್ಟಲಿಂಗದ ಪ್ರತಿಪಾದಕರು. ವ್ಯಕ್ತಿಯು ತನ್ನೊಳಗೆಯೇ ಗುರುಲಿಂಗಜಂಗಮದ ಸ್ವರೂಪವನ್ನು ಅರಿಯುವ ಒಂದು ಸುಲಭೋಪಾಯ. ಅಂಗೈಯಲ್ಲಿ ಲಿಂಗವನ್ನು ಅಭಿಮುಖವಾಗಿಟ್ಟು ಕೊಂಡು ಮಾಡುವ ಈ ಉಪಾಸನೆ ಸುಲಭ ಎಂದು ಜನರಿಗೆ ತಿಳಿಹೇಳಿ ಇಷ್ಟಲಿಂಗೋಪಾಸನೆಗೆ ಮಹತ್ವ ಕೊಟ್ಟು, ಎಲ್ಲರಿಗೂ ಗುರುವಾದರು. ಬಸವಣ್ಣನವರು ಇಷ್ಟಲಿಂಗವನ್ನು ಕೊಟ್ಟಿದ್ದರಿಂದಲೇ ಅವರ ಹೆಸರು 'ಶ್ರೀ ಗುರುಬಸವಲಿಂಗಾಯ ನಮಃ' ಎಂಬ ಮಹಾಮಂತ್ರವಾಯಿತು. 'ಆದಿಯಲ್ಲಿ ನೀನೇ ಗುರುವಾದ ಕಾರಣ ನಿನ್ನಿಂದ ಹುಟ್ಟಿತ್ತು ಲಿಂಗ' ಎಂದರು ಅಲ್ಲಮಪ್ರಭುದೇವರು. 'ಲಿಂಗಕ್ಕೆ ಆಧಾರ ಬಸವಣ್ಣ' ಎಂದರು ಅಂಬಿಗರ ಚೌಡಯ್ಯ. 'ಲಿಂಗ ಬಸವಣ್ಣನಿಂದ' ಎಂದರು ಮಾಚಿದೇವರು. 'ಬಸವಣ್ಣನು ಅನಾದಿ, ಲಿಂಗವಾದಿ' ಎಂಬುದು ಮರುಳಶಂಕರದೇವರ ನುಡಿ.

> ದೇವಲೋಕದವರಿಗೂ ಬಸವಣ್ಣನೇ ದೇವರು
> ಮರ್ತ್ಯಲೋಕದವರಿಗೂ ಬಸವಣ್ಣನೇ ದೇವರು
> ನಾಗಲೋಕದವರಿಗೂ ಬಸವಣ್ಣನೇ ದೇವರು
> ಮೇರುಗಿರಿ ಮಂದರಗಿರಿ ಮೊದಲಾದುವೆಲ್ಲಕ್ಕೂ
> ಬಸವಣ್ಣನೇ ದೇವರು ಚೆನ್ನಮಲ್ಲಿಕಾರ್ಜುನಯ್ಯಾ
> ನಿಮಗೂ ಎನಗೂ ನಿಮ್ಮ ಶರಣರಿಗೂ ಬಸವಣ್ಣನೇ ದೇವರು

ಎಂದು ಅಕ್ಕಮಹಾದೇವಿಯವರು ಬಸವಣ್ಣನನ್ನು ಮನದುಂಬಿ ಹೊಗಳಿದ್ದಾರೆ. ಹಲವಾರು ಶರಣರು ತಮ್ಮ ವಚನಗಳಲ್ಲಿ ಬಸವಣ್ಣನವರ ವ್ಯಕ್ತಿತ್ವವನ್ನು ಭಕ್ತಿ, ಗೌರವಗಳಿಂದ ಸ್ಮರಿಸಿದ್ದಾರೆ. ಅಣ್ಣನಾಗಿ, ಜಗದಣ್ಣನಾಗಿ, ಜಗಜ್ಯೋತಿಯಾಗಿ ಬಸವಣ್ಣನವರು ಜನಮಾನಸವನ್ನು ಬೆಳಗಿದ್ದಾರೆ. ಇದಕ್ಕೆ ಆ ಕಾಲದ ವಚನಗಳೇ ಸಾಕ್ಷಿ.

**ಜನಪರ ಸಂಸ್ಕೃತಿ :** ಬಸವಪ್ರಜ್ಞೆ ಮತ್ತು ವಚನಪ್ರಜ್ಞೆ ಬೆಳೆಯುತ್ತಾ ಈಗ ಎಲ್ಲೆಡೆ ಬಸವಸಂಸ್ಕೃತಿಯಾಗಿ ಅರಳಿ ನಿಂತಿದೆ. ಬಸವಾದಿ ಶರಣರು ಅನುಭವಮಂಟಪವೆಂಬ ಧಾರ್ಮಿಕ ಸಂಸ್ಥೆಯನ್ನು ರೂಪಿಸಿ, ಅಲ್ಲಿ ನಡೆದ ಚರ್ಚೆಗಳನ್ನು ವಚನಗಳ ರೂಪದಲ್ಲಿ ನೀಡಿದ್ದಾರೆ. ತಮ್ಮ ಆಧ್ಯಾತ್ಮಿಕ ಚಿಂತನೆಗಳು ಎಲ್ಲಾ ಸಮುದಾಯಗಳಿಗೂ ಗ್ರಾಹ್ಯವಾಗುವಂತೆ ಮಾಡಿದ ಬಸವಣ್ಣನವರು ಜನಪರ ಸಂಸ್ಕೃತಿಯ ಹರಿಕಾರರಾಗಿದ್ದರು. ಬಸವಣ್ಣನವರ ವಚನಗಳು ಅವರನ್ನು ಮಹಾನ್ ದಾರ್ಶನಿಕರನ್ನಾಗಿ ಲೋಕಕ್ಕೆ ಪರಿಚಯಿಸುತ್ತವೆ. ವಚನಸಾಹಿತ್ಯವನ್ನು ತತ್ವಜ್ಞಾನ, ಅನುಭಾವ, ಮನೋವಿಜ್ಞಾನ, ಭಾಷಾವೈವಿಧ್ಯ, ಇತಿಹಾಸ, ಆರ್ಥಿಕತೆ, ಕೃಷಿ, ವೈದ್ಯವಿಜ್ಞಾನ, ಪರಿಸರಪ್ರಜ್ಞೆ, ಖಗೋಳವಿಜ್ಞಾನ, ಸಂಗೀತ, ದೃಶ್ಯಕಲೆ, ನ್ಯಾಯಸ್ವರೂಪ, ಸಾರ್ವಜನಿಕ ಆಡಳಿತ, ಸಮಾಜಸುಧಾರಣೆ – ಹೀಗೆ ವೈವಿಧ್ಯಮಯ ಆಯಾಮಗಳಲ್ಲಿ ಅಧ್ಯಯನ ಮಾಡಬಹುದಾಗಿದೆ.

ಬಸವಣ್ಣನವರು ಮಾನವೀಯ ಮೌಲ್ಯಗಳ, ಸಮಾನತೆಯ ಪ್ರತಿಪಾದಕರಾಗಿ ಅಂದು ಪ್ರಬಲವಾಗಿದ್ದ ಶ್ರೇಣೀಕೃತ ಚಾತುರ್ವರ್ಣ ಪದ್ಧತಿಯನ್ನು ನಿರಾಕರಿಸಿದರು. ಎಲ್ಲಾ ತಾರತಮ್ಯಗಳನ್ನು ಅಳಿಸಿಹಾಕುವಲ್ಲಿ ಪ್ರಯತ್ನಶೀಲರಾದರು. ಎಲ್ಲ ಮನುಷ್ಯರಿಗೂ ಒಳಿತಾಗುವಂತೆ ತಮ್ಮ ವಚನಗಳ ಮೂಲಕ ಅವರು ಸಾರ್ವಕಾಲಿಕ ಮೌಲ್ಯಗಳನ್ನು ಬಿತ್ತರಿಸಿದ್ದಾರೆ. ಅವರನ್ನು ಅನುಸರಿಸಿ ಉಳಿದ ವಚನಕಾರರೂ ತಮ್ಮತಮ್ಮ ನಿಲುವುಗಳನ್ನು ಸ್ಪಷ್ಟಪಡಿಸಿದ್ದಾರೆ. ಮೌಲ್ಯಯುತ ಸಾಮಾಜಿಕ ವ್ಯವಸ್ಥೆ ಎಂಬುದು ಎಲ್ಲರ ಶ್ರೇಯಸ್ಸಿಗಾಗಿ ಶ್ರಮಿಸಬೇಕು ಎಂದು ಒತ್ತಾಯಿಸುತ್ತಾರೆ.

**ಚಿರಸ್ಮರಣೀಯರು:** ಬಸವಣ್ಣನವರ ಕೀರ್ತಿಯನ್ನು ಮುಕ್ತಕಂಠದಿಂದ ಪ್ರಶಂಸಿಸಿದವರು ಯಾರೋ ಸಾಮಾನ್ಯ ವ್ಯಕ್ತಿಗಳಲ್ಲ. ಸ್ವತಃ ಶೂನ್ಯಸಿಂಹಾಸನದ ಅಧಿಪತಿಗಳಾಗಿದ್ದ ಅಲ್ಲಮಪ್ರಭುದೇವರು ತಮ್ಮ ಹಲವಾರು ವಚನಗಳಲ್ಲಿ ಅಣ್ಣನವರನ್ನು ತೆರೆದ ಮನಸ್ಸಿನಿಂದ ಪ್ರಶಂಸಿಸುತ್ತಾರೆ. ಬಸವಣ್ಣನೆಂಬ ಜ್ಯೋತಿಯ ಪ್ರಕಾಶದಿಂದ ಆಕರ್ಷಿತರಾಗಿ ಕನ್ನಡನಾಡಿನಿಂದಷ್ಟೇ ಅಲ್ಲದೆ ಹೊರನಾಡಿನಿಂದಲೂ ಅಪಾರ ಸಂಖ್ಯೆಯ ಶರಣರು ಕಲ್ಯಾಣದತ್ತ ಬಂದರು. ಸಾಧನೆ, ಸಿದ್ಧಿಗಳ ಬಲದಿಂದ ಶಾಶ್ವತವಾಗಿ ಕನ್ನಡನಾಡಿನವರೇ ಆಗಿ ಇತಿಹಾಸದ ಪುಟಗಳಲ್ಲಿ ಚಿರಸ್ಮರಣೀಯರಾದರು. ಕಲ್ಯಾಣ ವೆಂಬುದು ಸಾಕ್ಷಾತ್ ಅವಿಮುಕ್ತಕ್ಷೇತ್ರವಾಯಿತು. ಕನ್ನಡನಾಡೆಲ್ಲವೂ ಪಾವನವಾಯಿತು.

ಬಸವಣ್ಣನವರ ವಿಚಾರಗಳು ಅತ್ಯಂತ ಬೋಧಪ್ರದವಾಗಿದ್ದು ಎಲ್ಲ ಮನೋಭಾವದ ಜನರಿಗೂ ಚಿಂತನೆಗೆ ಸಾಮಗ್ರಿಯನ್ನು ಒದಗಿಸುತ್ತವೆ. "ಪಾಪಪುಣ್ಯಗಳೆಂಬ ಉಭಯದ ನಡುವಿನ ಭೇದವ ಬಲ್ಲವರಾರು? ಇವನಾರುಂಬರು? ಇವನಾರುಡುವರು? ಕಾಯವೆಂದಡೆ ಕಾಯ ತಾ ಮಣ್ಣು, ಜೀವವೆಂದಡೆ ಜೀವ ತಾ ಬಯಲು" ಪಾಪ–ಪುಣ್ಯಗಳ ಪರಿಣಾಮಗಳನ್ನು ಯಾರು ಅನುಭವಿಸಬೇಕು? ಆಯಾ ವ್ಯಕ್ತಿಗಳ ದೇಹ

ಅನುಭವಿಸಬೇಕೆ? ಅದು ಸಾಧ್ಯವಿಲ್ಲ. ಏಕೆಂದರೆ ಸತ್ತ ನಂತರ ದೇಹ ಮಣ್ಣಿನೊಂದಿಗೆ ಮಣ್ಣಾಗುತ್ತದೆ. ಹಾಗಾಗಿ ಜೀವವು ಪಾಪ–ಪುಣ್ಯಗಳನ್ನು ಅನುಭವಿಸಬೇಕೆನ್ನುವ ಮಾತು ಸಾಧ್ಯವಿಲ್ಲ. ಏಕೆಂದರೆ ಜೀವವು ಬಯಲಲ್ಲಿ ಬಯಲಾಗುತ್ತದೆ.

**ಮಹಿಳಾ ಸಮಾನತೆ :** ಪುರುಷರಿಗಿದ್ದ ಎಲ್ಲಾ ಧಾರ್ಮಿಕ ಹಕ್ಕುಗಳನ್ನೂ ಬಸವಾದಿ ಶರಣರು ಹನ್ನೆರಡನೆಯ ಶತಮಾನದಲ್ಲಿ ಮಹಿಳೆಯರಿಗೂ ವಿಸ್ತರಿಸಿದರು. ಹಾಗೆ ಸಮಾನತೆ ಸಿಕ್ಕಿದ್ದರಿಂದ ಅನುಭವಮಂಟಪದಲ್ಲಿ 34 ಜನ ಮಹಿಳೆಯರು ವಚನಗಳನ್ನು ರಚಿಸಲು ಸಾಧ್ಯವಾಯಿತು. ಶತಶತಮಾನಗಳಿಂದ ಬೇರೂರಿದ್ದ ಮೂಢನಂಬಿಕೆ, ಶೋಷಣೆ, ತಾರತಮ್ಯಗಳನ್ನು ಹೋಗಲಾಡಿಸಲು ಬಸವಣ್ಣನವರು ಶರಣಧರ್ಮವನ್ನು ಸ್ಥಾಪಿಸಿದರು. ಶರಣ (ಲಿಂಗಾಯತ) ಧರ್ಮದ ನೀತಿಗಳೆಂದರೆ ಪಂಚಾಚಾರಗಳು (ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರ). ಇದಲ್ಲದೆ ವಚನಸಾಹಿತ್ಯವು ವೈಯಕ್ತಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ನೀತಿಗಳನ್ನು, ತತ್ವಗಳನ್ನು ಬೋಧಿಸುತ್ತದೆ.

ಬಸವಣ್ಣನವರು ಹಾಕಿಕೊಟ್ಟ ದಾರಿಯಲ್ಲಿ ನಡೆಯುವಲ್ಲಿ ಇಂದಿನ ಸಮಾಜ ಸೋತಿದೆ. ಅವರ ಚಿಂತನೆಗಳು ಕೇವಲ ಆದರ್ಶಗಳಾಗಿ ಉಳಿಯಕೊಳ್ಳದೆ ಆಚರಣೆಯಲ್ಲಿ ಬಂದಾಗ ಮಾತ್ರ ನಿಜವಾದ ಪರಿವರ್ತನೆ ಸಾಧ್ಯ. ಅವರು ತೋರಿದ ಮಾರ್ಗದಲ್ಲಿ ನಡೆಯಲು ಎಲ್ಲರೂ ತ್ರಿಕರಣಪೂರ್ವಕವಾಗಿ ಪ್ರಯತ್ನಿಸಬೇಕು. ಆಗ ಮಾತ್ರ ಬಸವಣ್ಣನವರನ್ನು ಸಾಹಿತ್ಯಕವಾಗಿ, ಧಾರ್ಮಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ನಾಯಕನೆಂದು ಪರಿಭಾವಿಸಿದಂತಾಗುತ್ತದೆ. 12ನೇ ಶತಮಾನದಲ್ಲಿ ಆರಂಭವಾದ ಶರಣರ ಚಿಂತನೆಗಳು ಇಂದಿಗೂ ಪ್ರಸ್ತುತವಾಗಿದ್ದು ಅವು ಎಲ್ಲರಿಗೂ ತಲುಪಬೇಕಾದುದು ಅತ್ಯಂತ ಅಗತ್ಯ. ಶರಣರ ಜೀವಪರ ನಿಲುವುಗಳನ್ನು, ವಚನಸಂವಿಧಾನದ ತಿರುಳನ್ನು ಜನರಿಗೆ ಪರಿಣಾಮಕಾರಿಯಾಗಿ ಮುಟ್ಟಿಸುವ ಪ್ರಯತ್ನವಾಗಬೇಕಾಗಿದೆ. ಶರಣ ಧರ್ಮವನ್ನು ಪ್ರೀತಿಸುವ ಎಲ್ಲರೂ – ಧರ್ಮಗುರುಗಳು, ರಾಜಕಾರಣಿಗಳು, ಚಿಂತಕರು ಈ ಜವಾಬ್ದಾರಿಯನ್ನು ಗಂಭೀರವಾಗಿ ನಿರ್ವಹಿಸಬೇಕು. ಇಡೀ ಜಗತ್ತಿನ ಸಾಂಸ್ಕೃತಿಕ, ಸಾಮಾಜಿಕ ಹಾಗೂ ರಾಜಕೀಯ ಚಿಂತನೆಗಳಿಗೆ ಹೊಸ ದಿಕ್ಕನ್ನು ತೋರಿಸಿದ ವಚನಚಳುವಳಿಯ ನಾಯಕತ್ವವನ್ನು ವಹಿಸಿದ್ದ ಬಸವಣ್ಣನವರು ಜಗತ್ತಿನ ಮೊದಲ ಪ್ರಜಾಪ್ರಭುತ್ವ ಮಾದರಿಯ 'ಅನುಭವ ಮಂಟಪ' ಎಂಬ ಸಮಾಜೋಧಾರ್ಮಿಕ ವಿಚಾರವೇದಿಕೆಯನ್ನು ಸ್ಥಾಪಿಸಿದುದು ಕನ್ನಡಿಗರ ಪಾಲಿಗೆ ಹೆಮ್ಮೆಯ ವಿಷಯ. ಆ ಮಹಾಸಂಸತ್ತಿನಲ್ಲಿ ಭಾಗವಹಿಸಿದ್ದ 770 ಜನ ಶರಣಶರಣೆಯರು ಭಾರತದ ಮೂಲೆಮೂಲೆಗಳಿಂದ ಆಗಮಿಸಿ, ವಚನಸಾಹಿತ್ಯವನ್ನು ರಚಿಸಿದರು. ಈ ವಚನಗಳು ತ್ರಿಕಾಲಾಬಾಧಿತವಾದ ಶಾಶ್ವತ ಮೌಲ್ಯಗಳನ್ನು ಒಳಗೊಂಡಿವೆ. ದಯವೇ ಧರ್ಮದ ಮೂಲ, ಕಾಯಕವೇ ಕೈಲಾಸ, ದಾಸೋಹವೇ ದೇವಧಾಮ, ಮಾನವರೆಲ್ಲ ದೇವರ

ಮಕ್ಕಳು, ಆಚಾರವೇ ಸ್ವರ್ಗ, ಅನಾಚಾರವೇ ನರಕ ಎಂಬ ಮೌಲಿಕ ತತ್ವಗಳು ಇಂದಿಗೂ ನಮಗೆಲ್ಲರಿಗೂ ದಾರಿದೀಪವೇ.

**ಕರ್ನಾಟಕದ ಸಾಂಸ್ಕೃತಿಕ ನಾಯಕ :** ಬಸವಣ್ಣನವರು ಕರ್ನಾಟಕದ ಸಾಂಸ್ಕೃತಿಕ ನಾಯಕರಷ್ಟೇ ಅಲ್ಲದೆ ಭಾರತದ ಸಾಂಸ್ಕೃತಿಕ ನಾಯಕರೂ ಹೌದು, ವಿಶ್ವದ ಸಾಂಸ್ಕೃತಿಕ ನಾಯಕರೂ ಹೌದು. ಇಂದು ಬಸವತತ್ವವು ಜಗತ್ತನ್ನೇ ಬೆಳಗುವ ಕಾಲ ಸನ್ನಿಹಿತವಾಗಿದೆ. ಬಸವಣ್ಣನವರ ಹೆಸರನ್ನು ವ್ಯಕ್ತಿಸೂಚಕವಾಗಿ ಅಥವಾ ಜಾತಿಸೂಚಕವಾಗಿ ನೋಡದೆ, ಕನ್ನಡ ಸಂಸ್ಕೃತಿಯ, ಮೌಲ್ಯಗಳ ರೂಪಕವಾಗಿ ನೋಡಬೇಕು. ಬಸವಣ್ಣನವರ ಕರ್ತೃತ್ವಶಕ್ತಿಯಿಂದ ರೂಪುಗೊಂಡ 'ಅನುಭವಮಂಟಪ' ಇಂದಿನ ಪ್ರಜಾಪ್ರಭುತ್ವದ ಮೂಲ ವಿನ್ಯಾಸವನ್ನು ಹೊಂದಿದೆ ಎಂದು ವಿದ್ವಾಂಸರು ಹೇಳುವರು. ನಾಡಿನ ಸಾಂಸ್ಕೃತಿಕ ಮತ್ತು ಸಾಹಿತ್ಯಕ ಪರಂಪರೆಯು ವಿಶ್ವಕ್ಕೆ ಕೊಡುಗೆಯಾಗಿ ನೀಡಿರುವ 'ವಿಶ್ವಮಾನವ ಪರಂಪರೆ'ಯ ಬಹು ಮುಖ್ಯ ಕೊಂಡಿ ಎನ್ನುವ ಕಾರಣದಿಂದಲೂ ಬಸವೇಶ್ವರರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕರೆಂದು ಗುರುತಿಸಿರುವ ಕ್ರಮ ಸಾಧುವಾಗಿದೆ. 'ಬಸವಪಥ'ವನ್ನು ಅನುಸರಿಸುವ ಮೂಲಕ 'ಸೌಹಾರ್ದ ಕರ್ನಾಟಕ'ವನ್ನು ರೂಪಿಸುವ ಮಾರ್ಗದಲ್ಲಿ ಸಾಗುವುದು ಇಂದಿನ ಅಗತ್ಯವಾಗಿದೆ.

ಛತ್ರಪತಿ ಶಿವಾಜಿ ಮಹಾರಾಜರನ್ನು ಮಹಾರಾಷ್ಟ್ರ ಸರ್ಕಾರ 'ಸಾಂಸ್ಕೃತಿಕ ನಾಯಕ' ಎಂದು ಹಿಂದೆಯೇ ಘೋಷಿಸಿದಂತೆ ಶ್ರೀ ಬಸವೇಶ್ವರರನ್ನು 'ಕರ್ನಾಟಕದ ಸಾಂಸ್ಕೃತಿಕ ನಾಯಕ' ಎಂದು ಕರ್ನಾಟಕ ಸರ್ಕಾರ ದಿನಾಂಕ 18.1.2024ರಂದು ಘೋಷಿಸಿತು. ಇದರಿಂದ ಇಡೀ ಕನ್ನಡನಾಡಿಗೆ ಹೊಸ ಗೌರವ ದೊರೆತಂತಾಗಿದೆ. ನಾಡಿನ ಹಲವಾರು ಜನ ಮಠಾಧೀಶರ ಈ ಮಹತ್ವಪೂರ್ಣ ಮನವಿಯನ್ನು ರಾಜ್ಯ ಸರ್ಕಾರ ಸಾಕಾರಗೊಳಿಸಿದೆ. ಬಸವಕಲ್ಯಾಣದಲ್ಲಿ ನಿರ್ಮಾಣವಾಗುತ್ತಿರುವ ಆಧುನಿಕ ಅನುಭವಮಂಟಪವು ಜಾಗತಿಕ ಪ್ರವಾಸಿತಾಣವಾಗಿ ರೂಪುಗೊಳ್ಳುತ್ತಿದೆ. ಬಸವಣ್ಣನವರ ಬದುಕು, ಬರಹ, ಸಂದೇಶಗಳನ್ನು ವಿಶ್ವದ ಪ್ರಮುಖ ಭಾಷೆಗಳಿಗೆ ಅನುವಾದಿಸುವುದು, ಅವುಗಳನ್ನು ಶಾಲಾಕಾಲೇಜುಗಳ ಪಠ್ಯಪುಸ್ತಕಗಳಲ್ಲಿ ಅಳವಡಿಸುವುದು, ಎಲ್ಲಾ ಗ್ರಂಥಾಲಯಗಳಿಗೂ ಅವುಗಳನ್ನು ತಲುಪಿಸು ವುದು, ದೇಶವಿದೇಶಗಳ ವಿಶ್ವವಿದ್ಯಾನಿಲಯಗಳಲ್ಲಿ ಬಸವ ಅಧ್ಯಯನ ಪೀಠಗಳನ್ನು ಸ್ಥಾಪಿಸುವುದು ಮುಂತಾದ ಕ್ರಮಗಳನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕೈಗೊಳ್ಳಬೇಕಾಗಿದೆ.

ಶರಣರ ಸಂದೇಶಗಳುಳ್ಳ ಫಲಕಗಳನ್ನು ಬಸ್ಸು, ರೈಲು, ವಿಮಾನ ನಿಲ್ದಾಣಗಳಲ್ಲಿ ಹಾಕುವುದು, ವಿವಿಧ ಸ್ಥಳಗಳಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಆಗಿಂದಾಗ್ಗೆ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು ಅಗತ್ಯ. ಸರ್ಕಾರದ ಎಲ್ಲ ಇಲಾಖೆಗಳು ಒಗ್ಗೂಡಿ ಈ ಕಾರ್ಯವನ್ನು ಅರ್ಥಪೂರ್ಣವಾಗಿ ಸಾಧಿಸಬೇಕಾಗಿದೆ.

ಬಸವಣ್ಣನವರಿಗಿದ್ದ ಆಶಾವಾದವೇ ಅವರು ಅಲ್ಪಾವಧಿಯಲ್ಲಿ ಅದ್ಭುತ ಸಾಧನೆ ಮಾಡಲು ಸಾಧ್ಯವಾಯಿತು. ದುರ್ದೈವದ ಸಂಗತಿ ಎಂದರೆ ಅವರ ಜನಪರ ಕಾರ್ಯಗಳನ್ನು ಇಂದಿನವರು ಮುಂದುವರಿಸಿಕೊಂಡು ಹೋಗಲು ಸಾಧ್ಯವಾಗುತ್ತಿಲ್ಲ. ಈ ಸಂದರ್ಭದಲ್ಲಿ ಬಸವಾದಿ ಶರಣರ ಆದರ್ಶಗಳನ್ನು ಸಮಾಜದಲ್ಲಿ ಬೆಳೆಸುವುದು ಮಠಾಧೀಶರು, ಚಿಂತಕರು, ವಿದ್ವಾಂಸರುಗಳ ಆದ್ಯ ಕರ್ತವ್ಯ.

ಹನ್ನೆರಡನೆಯ ಶತಮಾನದಲ್ಲಿ ಲೋಕಸೋಜಿಗವೆಂಬಂಥ ಒಂದು ಸಮಾಜೋಧಾರ್ಮಿಕ ಚಳವಳಿಯನ್ನು ಹುಟ್ಟುಹಾಕಿದ ಮಹಾನ್ ದಾರ್ಶನಿಕ ಬಸವಣ್ಣನವರ ಹೆಸರಿನೊಂದಿಗೆ ಬೆಸೆದುಕೊಂಡಿರುವ ಕೂಡಲಸಂಗಮ ಮತ್ತು ಬಸವಕಲ್ಯಾಣ ಕ್ಷೇತ್ರಗಳು ಬಹಳ ಕಾಲ ಅಲಕ್ಷ್ಯಕ್ಕೆ ಒಳಗಾಗಿದ್ದುವು. ಅವುಗಳ ಪುನರುತ್ಥಾನಕ್ಕಾಗಿ ಕರ್ನಾಟಕದ ಇತ್ತೀಚಿನ ಸರ್ಕಾರಗಳು ಕ್ರಮ ಕೈಗೊಂಡಿರುವುದು ಶ್ಲಾಘನೀಯ. ಅಲ್ಲಿ ಹಲವಾರು ಯೋಜನೆಗಳು ಕಾರ್ಯಗತವಾಗಿವೆ. ಈ ಚಾರಿತ್ರಿಕ ಕ್ಷೇತ್ರಗಳ ಅಭಿವೃದ್ಧಿ ಕಾರ್ಯ ಇನ್ನೂ ಆಗಬೇಕಾಗಿದೆ.

ಬಸವಪೀಠವು ಎದ್ದು ಒಸೆದು ನಾಣ್ಯವು ಬೆಳಗಿ
ಬಸವನ ಮುದ್ರೆ ಮೆರೆದಾವು। ಜಗವವಗೆ
ವಶವಾಗದಿಹುದೆ ಸರ್ವಜ್ಞ॥

ಭಾರತ ಸರ್ಕಾರವು 1967 ಮತ್ತು 1997ರಲ್ಲಿ ಬಸವಣ್ಣನವರ ಅಂಚೆಚೀಟಿಗಳನ್ನು ಬಿಡುಗಡೆ ಮಾಡಿದೆ. ಶ್ರೀ ಬಸವೇಶ್ವರರ ಎರಡು ನಾಣ್ಯಗಳನ್ನು 2006ರಲ್ಲಿ ಬಿಡುಗಡೆ ಮಾಡಿದೆ. ಲಂಡನ್ನಿನ ಥೇಮ್ಸ್ ನದೀತೀರದಲ್ಲಿ 2015ರಲ್ಲಿ ಬಸವಣ್ಣನವರ ಪುತ್ಥಳಿಯನ್ನು ನಿರ್ಮಿಸಲಾಗಿದೆ. ಬೆಂಗಳೂರಿನ ಬಸವ ಸಮಿತಿಯವರು ವಚನಗಳನ್ನು ಭಾರತದ ವಿವಿಧ ಭಾಷೆಗಳಿಗೆ ಅನುವಾದಿಸಿದ್ದಾರೆ. ಮೈಸೂರಿನ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು 1986ರಿಂದಲೂ ಬಸವಾದಿ ಶರಣರ ಕೃತಿಗಳ ಪ್ರಕಟಣೆ ಹಾಗೂ ದತ್ತಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ. ನಾಡಿನ ಮಠಮಾನ್ಯಗಳು, ಸಂಘಸಂಸ್ಥೆಗಳು ಶರಣರ ಕುರಿತಂತೆ ಚಿಂತನಾಗೋಷ್ಠಿಗಳನ್ನು ನಡೆಸಿಕೊಂಡು ಬರುತ್ತಿವೆ.

ಕನ್ನಡನಾಡಿನ ಜನಸಾಮಾನ್ಯರ ಬದುಕಿನಲ್ಲಿ ಬಸವಣ್ಣನವರು ನಿತ್ಯಸಂಸ್ಕೃತಿಯ ಒಂದು ಆಚರಣೆಯಾಗಿ, ಮನೋಧರ್ಮವಾಗಿ ಬೆರೆತುಹೋಗಿದ್ದಾರೆ. ನಾಡಿನ ಇತಿಹಾಸದಲ್ಲಿ ಅಂಥ ಮತ್ತೊಂದು ಚೇತನ ಕಾಣಸಿಗುವುದಿಲ್ಲ. ಅವರನ್ನು ರಾಜ್ಯ ಸರ್ಕಾರವು ಕನ್ನಡ ನಾಡಿನ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿರುವುದು ನಾಡಿನ ಎಲ್ಲ ಪ್ರಜ್ಞಾವಂತರಿಗೂ ಸಂತಸವನ್ನುಂಟುಮಾಡಿದೆ.

❑

# ರುದ್ರಾಕ್ಷಿ : ವೈಜ್ಞಾನಿಕ ವಿಶ್ಲೇಷಣೆ

ಡಾ. ವಿ.ಎಚ್. ಮೂಲಿಮನಿ

ಶಿವನು ತಪಸ್ಸು ಮಾಡುತ್ತಿರುವಾಗ ಜಗತ್ ಕಲ್ಯಾಣಕ್ಕಾಗಿ ಕಣ್ಣು ತೆರೆದಾಗ ಕಣ್ಣುಗಳಿಂದ ಜಾರಿಬಿದ್ದ ನೀರ ಹನಿಗಳು ರುದ್ರಾಕ್ಷಿ ಗಿಡಗಳಾದವೆಂದು ಹೇಳುತ್ತಾರೆ. ಶಿವನು ತ್ರಿಪುರ ದೈತ್ಯರ ಸಂಹಾರಕ್ಕೆ ತಪಸ್ಸು ಮಾಡಿದನು. ತೀವ್ರ ತಪಸ್ಸು ಮಾಡುತ್ತಿರುವಾಗ, ಅರೆ ತೆರೆದ ಕಣ್ಣುಗಳಿಂದ ಕಣ್ಣೀರಿನ ಹನಿಗಳು ಕೆಳಗೆ ಬಿದ್ದು ರುದ್ರಾಕ್ಷಿ ಗಿಡಗಳು ಉತ್ಪನ್ನವಾದವೆಂದು ಹೇಳುತ್ತಾರೆ. ಇನ್ನೊಂದು ಐತಿಹ್ಯದ ಪ್ರಕಾರ ತ್ರಿಪುರಾಸುರರನ್ನು ಸಂಹಾರ ಮಾಡುವಾಗ ಶಿವನ ಶರೀರದಿಂದ ಬೆವರು ಹನಿಗಳು ಭೂಮಿಯ ಮೇಲೆ ಬಿದ್ದು ರುದ್ರಾಕ್ಷಿಗಳಾದವೆಂದೂ ಹೇಳಲಾಗಿದೆ. ಶಿವನ ಇಚ್ಛೆಯಂತೆ ಸೂರ್ಯ, ಚಂದ್ರ, ಅಗ್ನಿ ಕಣ್ಣುಗಳಿಂದ 38 ವಿಧದ ರುದ್ರಾಕ್ಷಿಗಳು ಬೆಳೆದವು ಎಂದು ಹೇಳುತ್ತಾರೆ. ಸೂರ್ಯ ಕಣ್ಣಿನಿಂದ (ಬಲಗಣ್ಣಿನಿಂದ) 12 ಕೆಂಪು, ಚಂದ್ರ ಕಣ್ಣಿನಿಂದ (ಎಡಗಣ್ಣಿನಿಂದ) 16 ಬಿಳಿ, ಅಗ್ನಿ ಕಣ್ಣಿನಿಂದ (ತ್ರಿನೇತ್ರದಿಂದ) 10 ಕಪ್ಪು, ಒಟ್ಟಾಗಿ 38 ವಿಧದ ರುದ್ರಾಕ್ಷಿಗಳು ಎಂದು ಹೇಳುತ್ತಾರೆ.

ರುದ್ರಾಕ್ಷಿ ವೃಕ್ಷವು ಎಲ್ಲಿ ಬೇಕಾದರೆ ಅಲ್ಲಿ ಬೆಳೆಯುವುದಿಲ್ಲ. ಭಾರತದ ಹಿಮಾಲಯ ಪ್ರಾಂತ್ಯಗಳಲ್ಲಿ ನೇಪಾಳ ದೇಶದಲ್ಲಿ, ಜಾವಾ ಮತ್ತು ಸುಮಿತ್ರಾ ದ್ವೀಪಗಳಲ್ಲಿ ಮಾತ್ರ ಬೆಳೆಯುತ್ತದೆ. ಸುಮಾರು ಅರವತ್ತು ಅಡಿಗಳಷ್ಟು ಎತ್ತರಕ್ಕೆ ಬೆಳೆಯುತ್ತದೆ. ಮರಗಳು ಮಧ್ಯಮ ಗಾತ್ರವಿರುತ್ತವೆ. ಎಲೆಗಳು ವಿಳ್ಯದೆಲೆಗಳಂತೆ ಇರುತ್ತವೆ. ಹೂಗಳು ನೀಲಿ, ಶ್ಯಾಮ, ಕೆಂಪು ಬಣ್ಣದವು ಇರುತ್ತವೆ. ಹನ್ನೆರಡು ವರ್ಷಗಳು ಬೆಳೆದನಂತರವೇ ರುದ್ರಾಕ್ಷ ಪುಷ್ಪಗಳಿಂದ ಹಣ್ಣುಗಳು ತಯಾರಾಗುತ್ತವೆ. ರುದ್ರಾಕ್ಷ ಫಲದಲ್ಲಿನ ಬೀಜವೇ ರುದ್ರಾಕ್ಷಿ. ರುದ್ರಾಕ್ಷಿಗೆ ರಂಧ್ರವು ಸಹಜವಾಗಿಯೇ ಇರುತ್ತದೆ. ರುದ್ರಾಕ್ಷಿಯೂ ಸಟ್ಟುಗವೂ ಒಂದೇ ಪ್ರಧಾನ ಜಾತಿಗೆ (genus) ಸೇರಿವೆಯಾದರೂ ಎರಡೂ ಬೇರೆ ಬೇರೆ ಒಳಜಾತಿಗಳು. ರುದ್ರಾಕ್ಷಿ ಎಲಿಯಾಕಾರ್ಪಸ್ ಗಾನಿಟ್ರಸ್ (Elaeoacarpus ganitrus), ಸಟ್ಟುಗ ಎಲಿಯಾ ಕಾರ್ಪಸ್ ಟ್ಯೂಬರ್ಕುಲೇಟಸ್ (Elaeocarpus tuberculatus). ರುದ್ರಾಕ್ಷಿ ಮರ ದಕ್ಷಿಣ ಭಾರತದಲ್ಲಿ ಎಲ್ಲಿಯೂ ಬೆಳೆಯುವುದಿಲ್ಲ. ರುದ್ರಾಕ್ಷಿಯ ಬೀಜ ದುಂಡು, ಸಟ್ಟುಗದ್ದು ಚಪ್ಪಟೆ. ಆದರೆ ರುದ್ರಾಕ್ಷಿಗಿರುವಂತೆ ಸಟ್ಟುಗದ ಬೀಜಕ್ಕೂ ಹೊರಮೈ ಗುಬುಟುಗಳಿರುತ್ತವೆ. ಸಟ್ಟುಗದ ಬೀಜವನ್ನು ಕೆಲವರು ಭದ್ರಾಕ್ಷಿಯೆಂದೂ ಕರೆಯುವುದುಂಟು. ರುದ್ರಾಕ್ಷಿಗಳ

ನಡುವೆ ಒಂದನ್ನೊ, ಎರಡನ್ನೊ ಪೋಣಿಸಿರುವುದೂ ಉಂಟು.

ಕಾಶ್ಮೀರ ಹಾಗೂ ನೇಪಾಳದಲ್ಲಿ ಬೆಳೆಯುವ ರುದ್ರಾಕ್ಷಿ ದಕ್ಷಿಣ ದೇಶದ ಶೈವ ಸಿದ್ಧಾಂತಗಳಿಗೂ, ವೀರಶೈವರಿಗೂ, ಸ್ಮಾರ್ತರಿಗೂ ಅತಿ ಪವಿತ್ರವಾದ ಚಿಹ್ನೆಯಾಗಿ ಪರಿಣಮಿಸಿರುವುದು ನಮ್ಮ ಸಾಂಸ್ಕೃತಿಕ ಚರಿತ್ರೆಯಲ್ಲಿ ಗಮನಿಸತಕ್ಕ ಸಂಗತಿ. ರುದ್ರಾಕ್ಷಿ ಮರವನ್ನು ಹೆಚ್ಚು ದೈವಿಕ ಸ್ವರೂಪದಲ್ಲಿ ಕಾಣುತ್ತೇವೆ. ರುದ್ರಾಕ್ಷಿ ನೇಪಾಳದಲ್ಲಿ ಬೆಳೆಯುವ ಬೆಳೆಯಾಗಿ ಕರ್ನಾಟಕದಲ್ಲಿ ಈ ಬೆಳೆಯನ್ನು ಬೆಳೆದು ದೇಗುಲಗಳಿಗೆ ಉಚಿತವಾಗಿ ಕೊಡುತ್ತಿರುವ ಚಿಕ್ಕಮಗಳೂರಿನ ಶೃಂಗೇಶ್ವರ ರಾವ್ ಅವರನ್ನು ಒಳ್ಳೆಯ ಕೃಷಿಕ ಎಂದು ಹೇಳಬಹುದು. ಚಿಕ್ಕಮಗಳೂರ ಜಿಲ್ಲೆಯ ಕೊಪ್ಪ ತಾಲೂಕಿನ ಕೊಳೂರಿನ ಎಲ್. ಶೃಂಗೇಶ್ವರ ರಾವ್ ಅವರು ಇಂಜಿನೀಯರ್ ಪದವೀಧರ. ಅವರು ತಮ್ಮ 28 ಎಕರೆ ಜಮೀನಿನಲ್ಲಿ ಕಾಫಿ, ತೆಂಗು, ಅಡಿಕೆ, ಕಾಳುಮೆಣಸನ್ನು ಪ್ರಮುಖ ಬೆಳೆಗಳನ್ನಾಗಿ ಬೆಳೆಯುತ್ತಿದ್ದಾರೆ. ಅವರು ಹೊಸ ಬೆಳೆಗಳನ್ನು ಬೆಳೆಯಲು ಹೆಚ್ಚು ಆಸಕ್ತಿಯನ್ನು ಹೊಂದಿದ್ದಾರೆ. ಕಳೆದ ಎರಡು ದಶಕಗಳಿಂದ 1997ರಲ್ಲಿ ನೇಪಾಳದ ಸಾಂಪ್ರದಾಯಿಕ ಬೆಳೆಯಾದ ರುದ್ರಾಕ್ಷಿ ಮರಗಳನ್ನು ಪೋಷಿಸುತ್ತಾ ನೆಮ್ಮದಿಯನ್ನು ಕಂಡುಕೊಂಡಿದ್ದಾರೆ. ರುದ್ರಾಕ್ಷಿ ಇದು ಧಾರ್ಮಿಕ ಸ್ವರೂಪ ಹೊಂದಿರುವ ಕಾರಣ ಶೃಂಗೇಶ್ವರ ರಾವ್ ಅವರು ಇದನ್ನು ಶ್ರದ್ಧೆಯಿಂದ ಬೆಳೆಯುತ್ತಿದ್ದಾರೆ. ರುದ್ರಾಕ್ಷಿ ನಾಟಿ ಮಾಡಿ 6 ವರ್ಷದ ನಂತರ ಫಲ ಬರುತ್ತದೆ. ಸುಮಾರು 40 ಗಿಡಗಳನ್ನು ಅವರು ಬೆಳೆಸಿದ್ದಾರೆ. ಪ್ರತಿ ವರ್ಷ 15–20 ಕ್ವಿಂಟಾಲ್ ರುದ್ರಾಕ್ಷಿ ಬೆಳೆಯುತ್ತಾರೆ. ಹಸಿರು ಮತ್ತು ನೀಲಿ ಬಣ್ಣದ ಕಾಯಿಗಳಾಗುತ್ತವೆ. ರುದ್ರಾಕ್ಷಿ ಮುಖಗಳ ಸಂಖ್ಯೆ ಆಧಾರದ ಮೇಲೆ ವಿಂಗಡಣೆ ಮಾಡಲಾಗುತ್ತದೆ. 90% ಪಂಚ ಮುಖ ರುದ್ರಾಕ್ಷಿ, ಬೆರಳೆಣಿಕೆಯಷ್ಟು ಏಕಮುಖ ರುದ್ರಾಕ್ಷಿ ಇರುತ್ತದೆ. ಏಕಮುಖ ರುದ್ರಾಕ್ಷಿ ಸಿಗುವುದು ಅದೃಷ್ಟ ಎಂದು ನಂಬುತ್ತಾರೆ. ಶೃಂಗೇಶ್ವರ ರಾವ್ ಅವರಿಗೆ ಇಲ್ಲಿಯವರೆಗೆ 3 ಮುಖದಿಂದ 18 ಮುಖಗಳವರೆಗೆ ರುದ್ರಾಕ್ಷಿಗಳು ಸಿಕ್ಕಿವೆ.

ಅನೇಕ ದೇವಾಲಯಗಳಿಗೆ ಉಚಿತವಾಗಿ ರುದ್ರಾಕ್ಷಿ ಕೊಡುತ್ತಿದ್ದರು. ಆದರೆ ದುರುಪಯೋಗ ಪ್ರಾರಂಭವಾಯಿತು. ಇದರಿಂದ ಮುಖಗಳ ಸಂಖ್ಯೆಯ ಆಧಾರದ ಮೇಲೆ ಕನಿಷ್ಠ ಬೆಲೆಯನ್ನು ನಿಗದಿ ಮಾಡಿದ್ದಾರೆ. ರುದ್ರಾಕ್ಷಿ ಮರ ಶ್ರೇಷ್ಠವಾಗಿದೆ. ಅವರು ರುದ್ರಾಕ್ಷಿ ಮರಗಳನ್ನು ಸಾವಯವ ವಿಧಾನದಲ್ಲಿ ಬೆಳೆಸಿದ್ದಾರೆ. ಮರಗಳಿಗೆ ದನದ ಗೊಬ್ಬರ ಹಾಕುತ್ತಾರೆ. ರುದ್ರಾಕ್ಷಿ ಹಣ್ಣನ್ನು ತಂದು ನೀರಿನಲ್ಲಿ 4 ದಿನ ಇಟ್ಟು ಸ್ವಚ್ಛ ಮಾಡಿ ಬಿಸಿಲಿನಲ್ಲಿ ಒಣ ಹಾಕುತ್ತಾರೆ. ನಂತರ ಅದು ಹಾಳಾಗದಂತೆ ಎಳ್ಳೆಣ್ಣೆಯಲ್ಲಿ ನೆನೆಸಿ 4 ದಿವಸಗಳ ಕಾಲ ಬಿಸಿಲಿಗೆ ಒಣ ಹಾಕುತ್ತಾರೆ. ಇದರಿಂದ ಕಾಂತಿ ಬರುತ್ತದೆ. ಶೃಂಗೇಶ್ವರ್ ರಾವ್ ಅವರಿಗೆ ರುದ್ರಾಕ್ಷಿ ಮರಗಳ ನಿರ್ವಹಣೆಗೆ ಎರಡೂವರೆ ಲಕ್ಷ ರೂ. ಖರ್ಚಾಗುತ್ತದೆ.

ಒಂದು ಮರದಿಂದ ಒಂದು ವರ್ಷಕ್ಕೆ 50 ಕೆ.ಜಿ. ರುದ್ರಾಕ್ಷಿ ಪಡೆಯುತ್ತಿದ್ದಾರೆ. ರುದ್ರಾಕ್ಷಿಯಲ್ಲಿ ಔಷಧೀಯ ಗುಣಗಳು ಹೇರಳವಾಗಿದೆ. ರುದ್ರಾಕ್ಷಿ ರಸವನ್ನು ಕುಡಿಯುವುದರಿಂದ ಕ್ಯಾನ್ಸರ್ ತಡೆಯಬಹುದು. ಸುಮಾರು 25 ರೋಗಗಳಿಗೆ ರುದ್ರಾಕ್ಷಿ ಔಷಧಿಯಾಗಿ ಕೆಲಸ ಮಾಡುತ್ತದೆ. ವಿನಯ್ ಗುರೂಜಿ ಅವರ ಶಿಷ್ಯರಾದ ಶೃಂಗೇಶ್ವರ್ ರಾವ್ ಅವರು ಬೆಳೆದ ರುದ್ರಾಕ್ಷಿಯನ್ನು ಗುರೂಜಿ ದೇಶ ವಿದೇಶಕ್ಕೆ ಕಳುಹಿಸಿದ್ದಾರೆ. ಲಿಂಗಾಯತ ಮಠಕ್ಕೆ ಶೃಂಗೇಶ್ವರ್ ರಾವ್ ಅವರು ಉಚಿತವಾಗಿ ರುದ್ರಾಕ್ಷಿ ಕೊಟ್ಟಿದ್ದಾರೆ. ಆಮ್ಲ, ಅಶ್ವತ್ಥ, ಆಲ, ಬನ್ನಿ, ಬೇವು ಹೀಗೆ ಅನೇಕ ಮರಗಳು ದೈವ ಸ್ವರೂಪವನ್ನು ಹೊಂದಿದೆ. ಇಂತಹ ಮರಗಳಲ್ಲಿ ರುದ್ರಾಕ್ಷಿ ಮರಗಳಿಗೆ ವಿಶೇಷ ಸ್ಥಾನವಿದೆ. ಹಲವು ಧಾರ್ಮಿಕ ಕಾರ್ಯಗಳಲ್ಲಿ ರುದ್ರಾಕ್ಷಿಯನ್ನು ಬಳಸಲಾಗುತ್ತದೆ. ರುದ್ರ ಎಂದರೆ ಶಿವ ಅಕ್ಷಿ ಎಂದರೆ ಕಣ್ಣು. ಶಿವನ ಕಣ್ಣಿನ ಅಗ್ನಿಯಿಂದ ಮನ್ಮಥನನ್ನು ವಧೆ ಮಾಡಿದಾಗ ಅಗ್ನಿ ಭೂಮಿಯನ್ನು ಸ್ಪರ್ಶ ಮಾಡಿದಾಗ ಅಗ್ನಿಕಣಗಳು ರುದ್ರಾಕ್ಷಿ ಮಣಿಗಳಾಗಿ ಪರಿವರ್ತನೆ ಹೊಂದಿದವು.

ಎಲ್ಲ ದೇವರಿಗೂ ಆ ದೇವರಿಗೆ ಪ್ರಿಯವಾದ ಮುಖಗಳ ರುದ್ರಾಕ್ಷಿಯನ್ನು ಹಾಕಲಾಗುತ್ತದೆ. ಮನುಷ್ಯನ ಮೇಲೆ ಸಕಾರಾತ್ಮಕ ಶಕ್ತಿಯನ್ನು ರುದ್ರಾಕ್ಷಿ ಬೀರುತ್ತದೆ. ಇತ್ತೀಚೆಗೆ ಚಲನಚಿತ್ರ ನಟ ಅರ್ಜುನ್ ಸರ್ಜಾ ಅವರು ಕಟ್ಟಿಸಿರುವ ಆಂಜನೇಯ ದೇವಾಲಯಕ್ಕೆ ಶೃಂಗೇಶ್ವರ್ ರಾವ್ ಬೆಳೆದ ರುದ್ರಾಕ್ಷಿಯನ್ನು ಕೊಡಲಾಗಿದೆ. ಈ ಕಾಲದಲ್ಲಿ ಹಣಕ್ಕಿಂತ ಭಾವನೆ ಶ್ರದ್ಧೆ ದೊಡ್ಡದು ಎಂದು ಶೃಂಗೇಶ್ವರ ರಾವ್ ಅವರು ಹೇಳುತ್ತಾರೆ. ಒಟ್ಟಿನಲ್ಲಿ ಕೊಳೂರ ಎಂಬ ಪುಟ್ಟ ಗ್ರಾಮದಲ್ಲಿ ಬೆಳೆದ ರುದ್ರಾಕ್ಷಿ ರಾಜ್ಯ, ದೇಶ ವಿದೇಶದ ದೇವಾಲಯಗಳಲ್ಲಿ ರಾರಾಜಿಸುತ್ತದೆ.

ರುದ್ರಾಕ್ಷಿ, ಭದ್ರಾಕ್ಷಿಗಳನ್ನು ಬಳಕೆಯ ಮಾತಿನಲ್ಲಿರುವಂತೆ "ಬೀಜ" ಎಂದೇ ಕರೆಯುತ್ತಾರೆ. ವೈಜ್ಞಾನಿಕ ದೃಷ್ಟಿಯಲ್ಲಿ ಇದು ಬೀಜವಲ್ಲ, ಹಣ್ಣಿನ ಒಳಪದರ. ಮೃದುವಾದ ಹೊರಪದರ ಕೊಳೆತುಹೋಗಿ ಈ ಒಳಪದರ ಕಾಣಿಸಿಕೊಳ್ಳುತ್ತದೆ. ರುದ್ರಾಕ್ಷಿಗಳು "ವಿದ್ಯುತ್ ಆಯಸ್ಕಾಂತ" ತರಂಗಗಳನ್ನು ಉಂಟುಮಾಡುತ್ತವೆ. ಈ ತರಂಗಗಳು ರುದ್ರಾಕ್ಷಿಗಳನ್ನು ಧರಿಸಿದವರ ಮೇಲೆ ಪ್ರಭಾವ ಬೀರುತ್ತವೆ. ರಕ್ತದ ಒತ್ತಡ (ಬಿ.ಪಿ) ಮತ್ತು ಮಾನಸಿಕ ಉದ್ರೇಕ, ಮನೋಚಿಂತೆ, ಹುಚ್ಚು, ಮತಿಭ್ರಮಣ, ಉಗ್ರವಾದ ಅತಿಯಾದ ಮನೋಚಂಚಲತೆ ಮುಂತಾದ ಹೃದಯಸಂಬಂಧಿತ ವ್ಯಾಧಿಗಳಿಗೆ ರುದ್ರಾಕ್ಷಧಾರಣ ಮಹೋತ್ತಮವಾಗಿರುತ್ತದೆ. ರುದ್ರಾಕ್ಷಿಯಲ್ಲಿ ಎಲೆಕ್ಟ್ರೋಮ್ಯಾಗ್ನೆಟಿಕ್ ಪ್ಯಾರಮಾಗ್ನೇಟಿಕ್ ಗುಣಗಳಿದ್ದು ಮೆದುಳಿನ ಮೇಲೆ ಪ್ರಭಾವ ಬೀರಿ ಮನಸ್ಸನ್ನು ಶಾಂತವಾಗಿಸುತ್ತದೆ. ಖಿನ್ನತೆ, ಆಂತರಿಕ ಏಕಾಗ್ರತೆ ಕೊರತೆ ಮುಂತಾದ ಸಮಸ್ಯೆಗಳು ನಿವಾರಣೆಯಾಗುತ್ತವೆ ಎಂದು ಸಂಶೋಧಕರು ತಿಳಿಸಿದ್ದಾರೆ. ರುದ್ರಾಕ್ಷಿಮಣಿ, ಅದರ ಬೇರುಗಳು, ತೊಗಟೆ ಎಲ್ಲವೂ ದಿವ್ಯ ಔಷಧೀಯ ಗುಣಗಳಿಂದ ತುಂಬಿವೆ. ರುದ್ರಾಕ್ಷಿಯಲ್ಲಿ

ಔಷಧ ಗುಣಗಳು ಹೇರಳವಾಗಿವೆ. ರುದ್ರಾಕ್ಷಿ ಚಿಕಿತ್ಸೆ ಬಗ್ಗೆ ಬಾಬಾಲಿ ಋಷಿಯಿಂದ ರಚಿತವಾದ "ಬಾಬಾಲೋಪನಿಷತ್ತು" ಪ್ರಸಿದ್ಧವಾಗಿದೆ ಎಂದು ಹೇಳುತ್ತಾರೆ.

ಬೌದ್ಧಮತಸ್ಥರು ಸಹ ರುದ್ರಾಕ್ಷಿಧಾರಣ ಮಾಡುತ್ತಾರೆ. ಚೈನಾ, ಜಪಾನ್, ಕೊರಿಯಾ, ನೇಪಾಳ, ಇಂಡೋನೇಷಿಯಾ ಮುಂತಾದ ದೇಶಗಳಲ್ಲಿ ರುದ್ರಾಕ್ಷಿಗಳನ್ನು ಧರಿಸುವ ಸಂಪ್ರದಾಯವಿದೆ. ನಮ್ಮ ನಾಡಿಗಳಲ್ಲಿ ಮಜ್ಜೆಯಲ್ಲಿ ಇರುವಂಥ ದ್ರವ ಧಾತುಗಳು ರುದ್ರಾಕ್ಷಿಯಲ್ಲಿವೆ. ಹೀಗಾಗಿ ಅದನ್ನು ತಾಮ್ರ ಅಥವಾ ಬೆಳ್ಳಿ ಸೂತ್ರದಲ್ಲಿ ಧರಿಸಿದರೆ ಯೋಗಿಕ ಅಭ್ಯಾಸಗಳಿಗೆ ಬಹಳ ಲಾಭಕರ. ಅಷ್ಟಾವರಣಗಳಲ್ಲಿ ರುದ್ರಾಕ್ಷಿ ಏಳನೆಯದು. ಇದನ್ನು ಧರಿಸಿದರೆ ಯಾವುದೇ ಚರ್ಮರೋಗದ ಭಯವಿಲ್ಲ. ಎಂದು ಆಯುರ್ವೇದ ಗ್ರಂಥಗಳು ಹೇಳುತ್ತವೆ.

ಆಯುರ್ವೇದದ ವನಸ್ಪತಿ ಶಾಸ್ತ್ರದಲ್ಲಿ ರುದ್ರಾಕ್ಷಿ ವಿಶೇಷ ಶಕ್ತಿ ಹೊಂದಿದೆ. 1 ರಿಂದ 38 ಮುಖಗಳುಳ್ಳ ರುದ್ರಾಕ್ಷಿಗಳ ಬಗ್ಗೆ ಧಾರಣೆ ಮತ್ತು ಚಿಕಿತ್ಸಾ ವಿಧಾನಗಳಲ್ಲಿ ಸಂಶೋಧನೆ ನಡೆಸಿ, ವಾಸ್ತವಿಕ ಸತ್ಯದೊಂದಿಗೆ; ತಾಂತ್ರಿಕ ವಿಧಾನದೊಂದಿಗೆ ಆಯುರ್ವೇದ ಶಾಸ್ತ್ರದ ಮಹಾವಿದ್ಯಾಲಯಗಳು ಸಂಶೋಧನೆ ನಡೆಸುವುದು ಯೋಗ್ಯವಾಗಿದೆ. "ಬಾಬಾಲೋಪನಿಶತ್ತು" ಆಧಾರವಾಗಿಟ್ಟುಕೊಂಡು ಸಂಶೋಧಿಸಬಹುದು. ಸದರೀ ಉಪನಿಷತ್ತನ್ನು ವಿವಿಧ ಭಾಷೆಗಳಿಗೆ ಭಾಷಾಂತರಿಸಿ ಹೆಚ್ಚಿನ ಅಭ್ಯಾಸಕ್ಕೆ ಸಂಶೋಧನೆಗೆ ಅನುಕೂಲ ಕಲ್ಪಿಸುವುದು ಯೋಗ್ಯವಾಗಿದೆ.

ರುದ್ರಾಕ್ಷಿ ಆಧ್ಯಾತ್ಮ ಸಾಧನೆಗೂ, ಶರೀರರಕ್ಷಣೆಗೂ ಸಹಾಯಕವಾಗಿದೆ. ಬಸವಣ್ಣನವರು ರುದ್ರಾಕ್ಷಿ ಮಹಿಮೆಯನ್ನು ಹೀಗೆ ತಿಳಿಸಿದ್ದಾರೆ.

ಅಯ್ಯಾ ಎನಗೆ ರುದ್ರಾಕ್ಷಿಯೇ ಸರ್ವಪಾವನವು
ಅಯ್ಯಾ ಎನಗೆ ರುದ್ರಾಕ್ಷಿಯೇ ಸರ್ವಕಾರಣವು
ಅಯ್ಯಾ ಎನಗೆ ರುದ್ರಾಕ್ಷಿಯೇ ಸರ್ವಸಾಧನವು
ಅಯ್ಯಾ ಎನಗೆ ರುದ್ರಾಕ್ಷಿಯೇ ಸರ್ವಸಿದ್ಧಿ
ಅಯ್ಯಾ ಎನಗೆ ರುದ್ರಾಕ್ಷಿಯೇ ಸರ್ವ ಪಾಪ ಕ್ಷಯವು
ಅಯ್ಯಾ ನಿಮ್ಮ ಪಂಚವ್ಯಕ್ತ್ರಂಗಳೇ ಪಂಚಮುಖದ
ರುದ್ರಾಕ್ಷಿಗಳಾದುವಾಗಿ ಅಯ್ಯಾ ಕೂಡಲಸಂಗಮದೇವಯ್ಯಾ
ಎನ್ನ ಮುಕ್ತಿಪಥಕ್ಕೆ ಶ್ರೀ ರುದ್ರಾಕ್ಷಿಯೆ ಸಾಧನವಯ್ಯಾ.

ಇದು ಶರಣರಿಗೆ ಆಭರಣದಂತೆ. ಮೈಲಾರ ಬಸಲಿಂಗ ಶರಣರು ತಮ್ಮ ಗುರುಕರುಣ ತ್ರಿವಿಧಿಯಲ್ಲಿ ಹೀಗೆ ಹೇಳಿದ್ದಾರೆ :

ಪರಮ ರುದ್ರಾಕ್ಷಿಯನು ಕರ ಬಾಹು ಕರ್ಣಗಳ
ಉರ ಶಿಖೆ ಶಿರ ಬಳಸಿ ಧರಿಸುವಾತನೇ ಮೋಕ್ಷ
ಪರನೆಂದ ಗುರುವೆ ಕೃಪೆಯಾಗು.

ಶ್ರೇಷ್ಠ ರುದ್ರಾಕ್ಷಿಗಳನ್ನು ಮುಂಗೈ, ತೋಳು, ಕೊರಳು, ಕಿವಿ, ಎದೆ, ನೆತ್ತಿ ಶಿಖೆಯಲ್ಲಿ ಕ್ರಮವಾಗಿ ಧರಿಸುವವನು ಜನನ ಮರಣಗಳ ಬಾಧೆಯಿಂದ ಮುಕ್ತನಾಗುವುದರಲ್ಲಿ ಸಂದೇಹವೇ ಇಲ್ಲವೆಂದಿದ್ದಾರೆ. ಅವರು ಗುರು–ಲಿಂಗ–ಜಂಗಮಕ್ಕೆ ಭಕ್ತಿಯಿಂದ ಮಾಡುವ ಸೇವೆಯನ್ನು ಸಂಪೂರ್ಣಗೊಳಿಸಲು ಯತ್ನಿಸುವವರಿಗೆ ರುದ್ರಾಕ್ಷಿ ಪ್ರೇರಕಶಕ್ತಿಯಾಗಿರುತ್ತದೆ.

ತತ್ವಚಿಂತಾಮಣಿಗಳೆಂಬ ರುದ್ರಾಕ್ಷಿಗಳ
ಭಕ್ತಿದಾರದಲ್ಲಿ ಸರಗೊಳಿಸಿ
ಯುಕ್ತಿವಿಧಾನವಿಡಿದು ಧರಿಸಿ ಸದ್ಯೋನ್ಮುಕ್ತನಾದೆನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ

ಎಂದಿದ್ದಾರೆ ತೋಂಟದ ಶಿವಯೋಗಿಗಳು. ರುದ್ರಾಕ್ಷಿಯ ಮಹತ್ವವನ್ನು ಷಣ್ಮುಖ ಶಿವಯೋಗಿಗಳು ಹೀಗೆ ತಿಳಿಸಿದ್ದಾರೆ.

ಅನಂತ ಕೋಟಿ ಯಜ್ಞಂಗಳ ಮಾಡಿ
ಕೊಳಲಿ ಬಳಲಲದೇಕೋ?
ಆ ಯಜ್ಞಂಗಳ ಫಲವು ರುದ್ರಾಕ್ಷಿಯ ಧರಿಸಿದಾಕ್ಷಣದಲ್ಲಿಯೇ
ದೊರೆಕೊಂಬುದು ನೋಡಾ!
ಅನಂತಕಾಲ ತಪವಮಾಡಿ ಕೊಳಲಿ ಬಳಲಲದೆಕೊ?
ಆ ತಪಸ್ಸಿನ ಫಲವು ರುದ್ರಾಕ್ಷಿಯ ಧರಿಸಿದಾಕ್ಷಣದಲ್ಲಿಯೇ
ದೊರೆಕೊಂಬುದು ನೋಡಾ!
ಅನಂತಕಾಲ ದಾನವ ಮಾಡಿ ಕೊಳಲಿ ಬಳಲಲದೆಕೊ?
ಆ ದಾನದ ಫಲವು ರುದ್ರಾಕ್ಷಿಯ ಧರಿಸಿದಾಕ್ಷಣದಲ್ಲಿಯೇ
ದೊರೆಕೊಂಬುದು ನೋಡಾ!
ಅನಂತಕಾಲ ವೇದಾಭ್ಯಾಸಮಾಡಿ ಕೊಳಲಿ ಬಳಲಲದೆಕೋ?
ಆ ವೇದಾಭ್ಯಾಸದ ಫಲವು ರುದ್ರಾಕ್ಷಿಯ ಧರಿಸಿದಾಕ್ಷಣದಲ್ಲಿಯೇ
ದೊರೆಕೊಂಬುದು ನೋಡಾ!
ಅದೆಂತೆಂದೊಡೆ ಪದ್ಮಪುರಾಣದಲ್ಲಿ,
ಸರ್ವಯಜ್ಞತಪೋದಾನವೇದಾಭ್ಯಾಸೈಶ್ಚ ಯತ್ಫಲವತ್
ತತ್ಫಲಂ ಲಭತೇ ಸದ್ಯೋ ರುದ್ರಾಕ್ಷಸ್ಯ ತು ಧಾರಣಾತ್
ಎಂದುದಾಗಿ
ಇಂತಪ್ಪ ರುದ್ರಾಕ್ಷಿಯ ಧರಿಸಿದ ಮಹಾತ್ಮನು
ವಿಶ್ವಾಧಿಕನು ವಿಶ್ವಾತೀತನು ತಾನೇ ನೋಡಾ ಅಖಂಡೇಶ್ವರಾ.

ಹಸ್ತಕಡಗ ಕೈಗಧಿಕ ನೋಡಾ
ಕೊಡಲಹುದು ಕೊಳ್ಳಲಾಗದು
ಬಾಹುಬಳೆ ತೋಳಿಗಧಿಕ ನೋಡಾ
ಪರಮವಧುವನಪ್ಪಲಾಗದು.

ಕರ್ಣಕ್ಕೆ ರುದ್ರಾಕ್ಷಿ ಅಧಿಕ ನೋಡಾ
ಶಿವನಿಂದೆಯ ಕೇಳಲಾಗದು
ಕಂಠಮಾಲೆ ಕೊರಳಿಂಗಧಿಕ ನೋಡಾ
ಅನ್ಯದೈವಕ್ಕೆ ತಲೆವಾಗಲಾಗದು.
ಆವಾಗಲೂ ನಿಮ್ಮುವನೇ ನೆನೆದು ಕೂಡಲಸಂಮದೇವಾ
ನಿಮ್ಮವನೇ ಪೂಜಿಸಿ ಸದಾ ಸನ್ನಿಹಿತನಾಗಿಪ್ಪನು
ಕೂಡಲಸಂಗಯ್ಯನ ಪದ
ಲಿಂಗಶಿಖಾಮಣಿಯಯ್ಯಾ

ಶರಣನಿಗೆ ರುದ್ರಾಕ್ಷಿ ಮಾಲೆ ಎಷ್ಟೊಂದು ಮಹಿಮಾತೀತವಾದುದು ಎಂಬುದನ್ನು ಬಸವಣ್ಣನವರು ಈ ವಚನದಲ್ಲಿ ಅರುಹಿದ್ದಾರೆ.

ಈ ಮಾಲೆಯನ್ನು ಪರರಿಗೆ ಕೊಡಬಹುದು. ಪರರಿಂದ ಪಡೆಯಲಾಗದು. ರಟ್ಟೆಗೆ ಬೆಳ್ಳಿ, ಬಂಗಾರದ ಬಳೆಗಿಂತಲೂ ರುದ್ರಾಕ್ಷಿಮಾಲೆಯೇ ಭೂಷಣ. ಇದನ್ನು ಧರಿಸಿದವರು ಪರಸ್ತ್ರೀ ಸ್ಪರ್ಶ ಮಾಡಬಾರದು. ರುದ್ರಾಕ್ಷಿ ಕಿವಿಗೂ ಸಹ ಧರಿಸಲು ಭೂಷಣ. ಹಾಗೆ ಧರಿಸಿದವರು ಒಂದು ವಿಚಾರವನ್ನು ನೆನಪಿನಲ್ಲಿಡಬೇಕು. ಶಿವನಿಂದೆಯನ್ನು ಎಂದೂ ಕೇಳಬಾರದು. ರುದ್ರಾಕ್ಷಿ ಮಾಲೆ ಕೊರಳಿಗೂ ಅಲಂಕೃತವೇ. ಹಾಗೆ ಧರಿಸಿದವರು ಪರದೈವ ಕಲ್ಪನೆಗೆ ಸಿಲುಕಿ, ಅದಕ್ಕೆ ಶಿರಬಾಗಿ ನಮಸ್ಕರಿಸಬಾರದು. ಆದರೆ ಎಲ್ಲಾ ದೇವರಲ್ಲೂ ಒಬ್ಬನೇ ದೇವರೆಂದು ನಂಬಿ ನಮಸ್ಕರಿಸಬಹುದು. ಸದಾ ಕಾಲವೂ ನಿಮ್ಮನ್ನೇ ಸ್ಮರಿಸುತ್ತಾ ಆರಾಧಿಸುತ್ತಾ ಇರುವವನೇ ನಿಜವಾದ ಲಿಂಗಶಿಖಾಮಣಿ, ಶಿವಶರಣಶಿಖಾಮಣಿ.

ರುದ್ರಾಕ್ಷಿಗಳನ್ನು ಕೊರಳಲ್ಲಿ ಕೈಯಲ್ಲಿ ಕಿವಿಗಳಲ್ಲಿ ಧರಿಸಬಹುದು. ಉಂಗುರಗಳಲ್ಲಿಡ ಬಾರದು. ರುದ್ರಾಕ್ಷಮಾಲೆ ತಯಾರಿಸಲಿಕ್ಕೆ ಬೆಳ್ಳಿ ಉತ್ತಮವಾಗಿದೆ. ಬಂಗಾರವಷ್ಟು ಉತ್ತಮವಲ್ಲ. ರುದ್ರಾಕ್ಷಿಗಳನ್ನು ಧರಿಸಿ ರಾತ್ರಿ ಸಮಯದಲ್ಲಿ ನಿದ್ದೆಗೆಡಬಾರದು. ರುದ್ರಾಕ್ಷಿಗಳನ್ನು ಸ್ತ್ರೀ ಪುರುಷರು ಧರಿಸಬಹುದು. ಒಬ್ಬರ ರುದ್ರಾಕ್ಷಿಗಳನ್ನು ಮತ್ತೊಬ್ಬರು ಧರಿಸಬಾರದು. ರುದ್ರಾಕ್ಷಿಗಳನ್ನು ಎಲ್ಲಿ ಬೇಕೆಂದರಲ್ಲಿಡಬಾರದು.

ಬದರಿಫಲ ಪ್ರಮಾಣದಲ್ಲಿ ರುದ್ರಾಕ್ಷಿಯು ಇಹಲೋಕದ ಸುಖಸೌಭಾಗ್ಯವನ್ನು ಹೆಚ್ಚಿಸುವುದು. ನೆಲ್ಲಿಕಾಯಿ ಪ್ರಮಾಣದ ರುದ್ರಾಕ್ಷಿಯು ಸಕಲ ಅರಿಷ್ಟಗಳನ್ನು ನಾಶಮಾಡುವುದು. ಗುಲಗಂಜಿ ಅಥವಾ ಕಡಲೆಕಾಳು ಪ್ರಮಾಣದ ರುದ್ರಾಕ್ಷಿ ಸಕಲ ಇಷ್ಟಾರ್ಥಗಳನ್ನು ಉಂಟುಮಾಡುವುದು. ಎಷ್ಟೆಷ್ಟು ಚಿಕ್ಕದಾಗಿರುವುದೋ ಅಷ್ಟಷ್ಟು ಹೆಚ್ಚು ಫಲಗಳನ್ನು ಒಂದಕ್ಕಿಂತ ಹತ್ತರಷ್ಟು ಹೆಚ್ಚಾಗಿ ಕೊಡುತ್ತದೆ. ಪಾಪನಾಶಕ್ಕಾಗಿ ಮಾತ್ರವಲ್ಲದೆ, ಸರ್ವಾರ್ಥ ಸಾಧನೆಗೂ ರುದ್ರಾಕ್ಷಿಯನ್ನು ಧರಿಸಲೇಬೇಕು. ರುದ್ರಾಕ್ಷಿ ಮಾಲೆಯಷ್ಟು ಫಲಪ್ರದವಾದ ಶುಭ್ರವಾದ ಮತ್ತು ಪವಿತ್ರವಾದಂತಹ ಮಾಲೆ ಇನ್ನೊಂದಿಲ್ಲ.

ಒಂದೇ ಆಕಾರದ ಮನೋಹರವಾದ ಗಟ್ಟಿಯಾದ, ದೊಡ್ಡದಾದ ಮತ್ತು ಮುಳ್ಳುಗಳಿರುವಂತಹ ರುದ್ರಾಕ್ಷಿಗಳು ಶುಭವಾದವು. ಇವು ಭೋಗ ಮತ್ತು ಮುಕ್ತಿಯನ್ನು ಉಂಟುಮಾಡುವಂಥವು. ನೂರು ರುದ್ರಾಕ್ಷಿಗಳನ್ನು ಧರಿಸಿದರೆ ಸಿಗುವ ಫಲವನ್ನು ನೂರು ವರ್ಷಗಳಾದರೂ ಹೇಳಲು ಸಾಧ್ಯವಿಲ್ಲ. ಅಷ್ಟೊಂದು ಫಲ ಸಿದ್ಧಿಸುವುದು. ಐದು ಸಾವಿರದ ಐನೂರು ರುದ್ರಾಕ್ಷಿಗಳಿಂದ ಕಿರೀಟವನ್ನು ಭಕ್ತಿಯಿಂದ ನಿರ್ಮಿಸಬೇಕು. ಮುನ್ನೂರ ಅರವತ್ತು ರುದ್ರಾಕ್ಷಿಗಳಿಂದ ಒಂದೊಂದು ಎಳೆಯಂತೆ, ಮೂರು ಎಳೆಯುಳ್ಳ ಯಜ್ಞೋಪವೀತವನ್ನು ರುದ್ರಾಕ್ಷಿಗಳಿಂದ ಭಕ್ತಿಪೂರ್ವಕವಾಗಿ ನಿರ್ಮಿಸಬೇಕು.

"ರುದ್ರಾಕ್ಷಿ" ಶಬ್ದವು "ರುದ್ರ+ಅಕ್ಷಿ" ಎಂಬ ಎರಡು ಶಬ್ದಗಳಿಂದ ಕೂಡಿದೆ.

ರುದ್ರ – ಶಿವ, ಅಕ್ಷಿ – ಕಣ್ಣು

ಅಕ್ಷಿ – ಶುದ್ಧವಾದ ಜ್ಞಾನದೃಷ್ಟಿ

ಶುದ್ಧ ವಿದ್ಯಾಶಕ್ತಿಯ ಸಹಾಯದಿಂದ ಪರಶಿವನಲ್ಲಿ ಬೆರೆತು ಒಂದಾಗುವುದು ನಿರೂಪಾಧಿಕ "ರುದ್ರಾಕ್ಷಿ" ಧರಿಸುವುದಾಗಿದೆ. ರುದ್ರಾಕ್ಷಿಯು ಅಷ್ಟಾವರಣಗಳಲ್ಲಿ ಏಳನೇ ಸ್ಥಾನದಲ್ಲಿ ಒಂದಾಗಿದೆ. ರುದ್ರಾಕ್ಷಿಯೆಂದರೆ ಶಿವನಿಗೆ ಬಲು ಪ್ರೀತಿ. ರುದ್ರಾಕ್ಷಿಯನ್ನು ಧರಿಸಿದರೂ, ಪೂಜಿಸಿದರೂ ಬರುವ ಪುಣ್ಯವನ್ನು ವರ್ಣಿಸಲಸಾಧ್ಯ. ರುದ್ರಾಕ್ಷಿಯನ್ನು ನೋಡಿದರೂ ಸಾಕು ಪಾಪಗಳು ಭಸ್ಮವಾಗುತ್ತವೆ.

**ಆಭರಣ ರುದ್ರಾಕ್ಷಿ**

'ರುದ್ರನೇತ್ರಸಮುತ್ಪನ್ನಾ ರುದ್ರಾಕ್ಷಾ ಲೋಕಪಾವನಾಃ' ಎಂಬ ಶ್ರೀ ಸಿದ್ಧಾಂತ ಶಿಖಾಮಣಿಯ ಉಕ್ತಿಯಂತೆ ತ್ರಿಪುರಸಂಹಾರ ಕಾಲದಲ್ಲಿ ಶಿವನ ಕಣ್ಣಿನಿಂದ ಹೊರಬಂದ ಯೋಗಾಶ್ರುಗಳಿಂದ ನಿರ್ಮಾಣವಾದ ವೃಕ್ಷಗಳ ಬೀಜಗಳೇ ರುದ್ರಾಕ್ಷಗಳು. ಇವು ಒಂದರಿಂದ 14 ಮುಖಗಳವರೆಗೆ ಇರುತ್ತವೆ. ಶಿವಭಕ್ತನು ಶಿವಪೂಜಾ ಕಾಲದಲ್ಲಿ ವಿಧಿವತ್ತಾಗಿ ರುದ್ರಾಕ್ಷಿಗಳನ್ನು ಧರಿಸಬೇಕು. ಶಿಖೆ, ಶಿರಸ್ಸು, ಮಸ್ತಕ, ಎರಡೂ ಕಿವಿ, ಕಂಠ, ಎದೆ, ಎರಡೂ ತೋಳು, ಎರಡೂ ಮುಂಗೈ ಹಾಗೂ ಯಜ್ಞೋಪವೀತದಂತೆ ಹೆಗಲಮೇಲೆ ಒಂದು ಮಾಲೆಯನ್ನು ಧರಿಸಿಕೊಳ್ಳಬೇಕು. 'ರುದ್ರಾಕ್ಷಧಾರಣಾದೇವಮುಚ್ಯತೇ ಸರ್ವಪಾತಕೈಃ' ಎಂಬ ಶ್ರೀ ಸಿದ್ಧಾಂತ ಶಿಖಾಮಣಿ ಉಕ್ತಿಯಂತೆ ರುದ್ರಾಕ್ಷಿಯನ್ನು ಧರಿಸಿಕೊಂಡವನು ಮಹಾಪಾತಕಗಳ ದೋಷದಿಂದ ಮುಕ್ತನಾಗುತ್ತಾನೆ.

> ಭಸ್ಮದ್ಧೂಳಿತಸರ್ವಾಂಗಾಃ ಧೃತರುದ್ರಾಕ್ಷಮಾಲಿಕಾಃ
> ಯೇ ಭವಂತಿ ಮಹಾತ್ಮಾನೋ ರುದ್ರಾಸ್ತೇ ನಾತ್ರ ಸಂಶಯಃ

ಎಂಬ ಶ್ರೀ ಸಿದ್ಧಾಂತ ಶಿಖಾಮಣಿ ಉಕ್ತಿಯಂತೆ ಯಾರು ಆಚಾರ–ವಿಚಾರ ಸಂಪನ್ನರಾಗಿ ಭಕ್ತಿಯಿಂದ ದೇಹದ ಮೇಲೆ ಭಸ್ಮ ಮತ್ತು ರುದ್ರಾಕ್ಷಿಯನ್ನು ಧರಿಸಿಕೊಂಡು ಮನಸ್ಸಿನಲ್ಲಿ

ಇರುವರೋ ಅವರು ಸಾಕ್ಷಾತ್ ರುದ್ರ ಸ್ವರೂಪರೇ ಆಗುತ್ತಾರೆ.

ಈಗ ನಮಗೆ ಸಿಗುವ ರುದ್ರಾಕ್ಷಿಗಳೆಲ್ಲವೂ ನಿಜವಾದ ರುದ್ರಾಕ್ಷಿಗಳಲ್ಲ. ಕಾಶಿಯ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಕೃತ್ರಿಮ ರುದ್ರಾಕ್ಷಿಗಳನ್ನು ತಯಾರಿಸುತ್ತಾರೆ. ನಮ್ಮ ಕಣ್ಣಿಗೆ ನಿಜವಾದ ರುದ್ರಾಕ್ಷಿಗಳಂತೆಯೇ ಕಾಣುತ್ತವೆ. ರುದ್ರಾಕ್ಷಿಗಳನ್ನು ಹಾಲಿನಲ್ಲಿ ಹಾಕಿದರೆ ರುದ್ರಾಕ್ಷ ಮುಖವು ಕೆಳಕ್ಕೆ ತಿರುಗಿ ನಮಗೆ ಕಾಣಿಸುವುದಿಲ್ಲವಂತೆ. ರುದ್ರಾಕ್ಷಿಗಳ ಬಗ್ಗೆ ದೇವಿಭಾಗವತದಲ್ಲಿ, ರುದ್ರಹೃದಯೋಪನಿಷತ್‌ನಲ್ಲಿ, ಸ್ಕಂದಪುರಾಣದಲ್ಲಿ ವಿವರಣೆ ಇದೆ.

ರುದ್ರಾಕ್ಷಿಯನ್ನು ಧರಿಸಿದವರು ಜ್ಞಾನ ಮತ್ತು ಧ್ಯಾನಗಳನ್ನು ತಿಳಿಯದವರಾದರೂ, ಅವರ ಸಕಲ ಪಾಪಗಳು ನಾಶವಾಗಿ ಪರಮಗತಿಯನ್ನು ಪಡೆಯುವರು ಎಂದು ಶಿವನು ಪಾರ್ವತಿಗೆ ತಿಳಿಸಿದ್ದನ್ನು ಸೂತಮುನಿಯು ಋಷಿಗಳಿಗೆ ಹೇಳುತ್ತಾನೆ.

ರುದ್ರಾಕ್ಷಿಯಿಂದ ಶಿವಪಂಚಾಕ್ಷರ ಮಂತ್ರವನ್ನು ಜಪಿಸಿದರೆ ಕೋಟಿಯಷ್ಟು ಹೆಚ್ಚು ಫಲ ಲಭಿಸುತ್ತದೆ. ರುದ್ರಾಕ್ಷಿಯನ್ನು ಧರಿಸಿ ಜಪಿಸಿದರೆ ಹತ್ತುಕೋಟಿ ಪುಣ್ಯ ಬರುತ್ತದೆ. ರುದ್ರಾಕ್ಷಿಯನ್ನು ಶರೀರದಲ್ಲಿ ಧರಿಸುವವರಿಗೆ ಅಪಮೃತ್ಯುವಾಗಲೀ ಅಲ್ಪಮೃತ್ಯುವಾಗಲೀ ಬರುವುದೇ ಇಲ್ಲ. ಭಸ್ಮತ್ರಿಪುಂಡ್ರವನ್ನೂ ರುದ್ರಾಕ್ಷಿಯನ್ನೂ ಧರಿಸಿ ಮೃತ್ಯುಂಜಯಮಂತ್ರವನ್ನು ಜಪಿಸುವವನನ್ನು ದರ್ಶನಮಾಡಿದರೆ ರುದ್ರಾಕ್ಷಿಯನ್ನು ದರ್ಶನ ಮಾಡಿದಷ್ಟೇ ಪುಣ್ಯಫಲ ಲಭಿಸುತ್ತದೆ. ಭಸ್ಮ–ರುದ್ರಾಕ್ಷಿಧಾರಿಯಾದ ಶಿವಭಕ್ತನು ಈಶ್ವರನ ಅಘೋರಾದಿ ಪಂಚಬ್ರಹ್ಮದೇವತೆಗಳೂ ಸೇರಿದಂತೆ, ಎಲ್ಲಾ ದೇವತೆಗಳಿಗೂ ಪ್ರಿಯನಾಗುವನು. ಅಲ್ಲದೆ ಮಿಕ್ಕ ಎಲ್ಲಾ ಮಂತ್ರಗಳನ್ನೂ ರುದ್ರಾಕ್ಷಮಾಲೆಯಿಂದಲೇ ಜಪಿಸಬೇಕು.

ಇಂದಿನ ವಿಜ್ಞಾನದ ಯುಗದಲ್ಲಿ ರುದ್ರಾಕ್ಷಿಗಳ ಪ್ರಯೋಜನ ಮತ್ತು ರುದ್ರಾಕ್ಷಿ ಚಿಕಿತ್ಸಾ ವಿಧಾನದಲ್ಲಿ ಸಂಶೋಧನೆಯ ಅವಶ್ಯವಿದೆ. ಅದರಲ್ಲಿರುವ ರಾಸಾಯನಿಕ ಸಂಗ್ರಹ, ಅದರ ಚಿಕಿತ್ಸಾ ವಿಧಾನದ ರೀತಿಯಲ್ಲೂ ಸಂಶೋಧನೆ ಅವಶ್ಯವಾಗಿದೆ.

□

ಅಂಗದ ಗುಣವನರತು ಲಿಂಗವನರಿಯಬೇಕೆಂಬರು
ಅಂಗವರತ ಮತ್ತೆ ಲಿಂಗಕ್ಕೆ ಕುರುಹುಂಟೆ ?
ಅಂಗವೆ ಲಿಂಗ, ನಿರಂಗವೆ ಸಂಗ.
ಭಾವದ ಅಂಗವನರಿಯಬೇಕೆಂದನಂಬಿಗ ಚೌಡಯ್ಯ.

**– ಅಂಬಿಗರ ಚೌಡಯ್ಯ**

## ಧಾರ್ಮಿಕ ಕ್ಷೇತ್ರಗಳ ದರ್ಶನಮಾಲಿಕೆ

# ಕೊತ್ತೇಗಾಲ ಗ್ರಾಮದ ಈಶ್ವರ ದೇವಾಲಯ

**ಡಾ. ಎಸ್.ಜಿ. ರಾಮದಾಸ ರೆಡ್ಡಿ**

ರಾಜಮಹಾರಾಜರು ಸಾಮ್ರಾಜ್ಯಗಳನ್ನು ಕಟ್ಟಿ ಆಳುತ್ತಿರುವಾಗ ಭವ್ಯವಾದ ಭವನ, ಕಟ್ಟಡ, ಕೋಟೆಕೊತ್ತಲ, ದೇವಾಲಯ, ಮೂರ್ತಿಶಿಲ್ಪ ಹಾಗೂ ಇತರೆ ಕಟ್ಟೋಣಗಳನ್ನು ನಿರ್ಮಿಸುತ್ತಿದ್ದರು. ದೇವಾಲಯಗಳನ್ನು ರಾಜರು ಪ್ರಮುಖವಾಗಿ ಧರ್ಮದ, ಆದಾಯದ, ಹೆಸರು ಶಾಶ್ವತವಾಗಿರಲೆಂದು ರಾಜರ ಹಾಗೂ ಸಾರ್ವಜನಿಕರ ಶಕ್ತಿಗನುಗುಣವಾಗಿ ದೇವಾಲಯಗಳ ಭವ್ಯತೆ ಹಾಗೂ ವಿಶಾಲತೆ ಆಗುತ್ತಿತ್ತು. ಈ ನಿಟ್ಟಿನಲ್ಲಿ ಕ್ರಿಪೂ. ಶತಮಾನದಿಂದ ಇಂದಿನವರೆಗೆ ದೇವಾಲಯಗಳು ನಿರ್ಮಾಣ ಆಗಿವೆ, ಆಗುತ್ತಿವೆ. ಇತಿಹಾಸದ ಆರಂಭಕಾಲದ ಎಷ್ಟೋ ದೇವಾಲಯಗಳು ಕಾಲಗರ್ಭದಲ್ಲಿ ಸಿಕ್ಕಿ ಹಾಳಾಗಿವೆ. ಉಳಿದವು ಹಾಳಾಗುತ್ತಿವೆ. ಮಧ್ಯಯುಗೀನ ಇತಿಹಾಸದ ಹಾಗೂ ನಂತರದ ಅವಧಿಯಲ್ಲಿ ನಿರ್ಮಾಣಗೊಂಡ ವಿಶಾಲವಾದ, ಭವ್ಯವಾದ ದೇವಾಲಯಗಳು ಇಂದು ಗ್ರಾಮಗಳಲ್ಲಿ ಬಿಸಿಲು, ಮಳೆ, ಗಿಡ, ಮರ, ಗೆಂಟೆ, ಬಳ್ಳಿ ಬೆಳೆದು ಗ್ರಾಮಸ್ಥರ, ಇಲಾಖೆಗಳ ಆಸರೆಯಿಲ್ಲದೆ ನಶಿಸುತ್ತಾ ಅಳಿವಿನಂಚಿಗೆ ಸರಿಯುತ್ತಿವೆ.

ಇಂಥ ದೇವಾಲಯಗಳಲ್ಲಿ ಮೈಸೂರು ಜಿಲ್ಲೆ, ಹೆಗ್ಗಡದೇವನಕೋಟೆ ತಾಲ್ಲೂಕಿನ ಆಲನಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿರುವ ಆಲನಹಳ್ಳಿ ಮತ್ತು ಕೊತ್ತೇಗಾಲಗಳ ಮಧ್ಯೆಯಿರುವ, ಕೊತ್ತೇಗಾಲ ಗ್ರಾಮದ ವ್ಯಾಪ್ತಿಗೆ ಸೇರಿರುವ ಲಕ್ಷ್ಮಿನರಸಿಂಹ ದೇವಾಲಯ, ಉಪ್ಪರಿಗೆ ಬಸಪ್ಪ, ಆಂಜನೇಯ ದೇವಾಲಯಗಳು ಸಾಕ್ಷಿಯಾಗಿವೆ.

ಆಲನಹಳ್ಳಿ ಗ್ರಾಮದ ಪೂರ್ವಕ್ಕೆ ಕೊತ್ತೇಗಾಲದ ದಕ್ಷಿಣಕ್ಕೆ ಹೊಲಗದ್ದೆಗಳ ಮಧ್ಯೆಯಿರುವ "ಈಶ್ವರ ದೇವಾಲಯ"ವು ವಿಶಾಲವಾದ ನವರಂಗ, ಸುಕನಾಸಿ, ಗರ್ಭಗುಡಿ, ಹಾಗೂ ಮುಂಭಾಗದ ಮಂಟಪಗಳಿಂದ ಕೂಡಿದ ದೇವಾಲಯವಾಗಿದೆ. ಈ ದೇವಾಲಯದ ಸುತ್ತಮುತ್ತ ಹಾಗೂ ದೇವಾಲಯದ ಹತ್ತಿರ ಆಲನಹಳ್ಳಿ ಕೃಷ್ಣ ಅವರು "ಕಾಡು" ಚಿತ್ರದ ಚಿತ್ರೀಕರಣವನ್ನು ಸಹ ಮಾಡಿದ್ದಾರೆ.

ದೇವಾಲಯದ ಒಳಗೆ ಪ್ರವೇಶಿಸುತ್ತಿದ್ದಂತೆ ನವರಂಗವು 20 ಅಡಿಯ ಚಚ್ಚೌಕಾರದಲ್ಲಿದ್ದು, ಎತ್ತರ 8 ಅಡಿಯಿದೆ. 4 ಕಂಬಗಳು, 8 ಅರೆಕಂಬಗಳು 7

ಅಡಿ ಎತ್ತರವಿವೆ. ನವರಂಗದ ಬಲಭಾಗದಲ್ಲಿ 2 ಗಣೇಶ ಶಿಲ್ಪಗಳು, 2 ಬಸವನ ಶಿಲ್ಪಗಳು, 2 ಬೋದಿಗೆ ಮೇಲಿರುವ ಹೊಯ್ಸಳರ ಕಾಲದ ಲಿಂಗಗಳು, ಎಡಭಾಗದಲ್ಲಿ ಸ್ತ್ರೀಶಿಲ್ಪಗಳಿವೆ. ಪ್ರತಿ ಕಂಬಗಳ ಮೇಲೆ ವಿವಿಧ ನಮೂನೆಯ ಶಿಲ್ಪಗಳ ಕೆತ್ತನೆಯನ್ನು ಸಹ ಕಾಣಬಹುದು.

ಸುಕನಾಸಿಯ ಬಾಗಿಲಿನಿಂದ ಒಳನಡೆದರೆ "ಸುಕನಾಸಿ" ಸರಳವಾಗಿ ಉತ್ತರ ದಕ್ಷಿಣ 8 ಅಡಿ, ಪೂರ್ವ ಪಶ್ಚಿಮ 13 ಅಡಿ, 7 ಅಡಿ ಎತ್ತರ ಇದೆ. ನಂತರ ಗರ್ಭಗುಡಿಯು ಪೂರ್ವ ಪಶ್ಚಿಮವಾಗಿ 8 ಅಡಿ, ದಕ್ಷಿಣೋತ್ತರವಾಗಿ 8 ಅಡಿ, ಎತ್ತರ 9 ಅಡಿ ಇದೆ. ಗರ್ಭಗುಡಿಯ ಬೋದಿಗೆಯ ಮೇಲಿರುವ ಲಿಂಗ ಭಗ್ನವಾಗಿದೆ. ಆದರೂ ಗ್ರಾಮಸ್ಥರು ಪ್ರತಿ ಸೋಮವಾರದ ದಿನ ಈ ಲಿಂಗಕ್ಕೆ ಹಾಗೂ ದೇವಾಲಯದಲ್ಲಿರುವ ಇತರ ಶಿಲ್ಪಗಳಿಗೆ ಪೂಜೆ ಮಾಡುತ್ತಿದ್ದಾರೆ. ಜೊತೆಗೆ ನವರಂಗದಲ್ಲಿರುವ ಲಿಂಗಗಳಿಗೆ, ಬಸವ, ಗಣೇಶ ಶಿಲ್ಪಗಳಿಗೂ ಸಹ ಪೂಜೆ ನಡೆಯುತ್ತಿದೆ. ಗರ್ಭಗುಡಿ ಸರಳವಾಗಿದೆ.

ದೇವಾಲಯದ ಮುಂಭಾಗದಲ್ಲಿ 4 ಕಂಬಗಳು, ದ್ವಾರಪಾಲಕರ ಶಿಲ್ಪಗಳಿವೆ. ಹೆಬ್ಬಾಗಿಲು 2½ ಅಡಿ ಅಗಲ, 6 ಅಡಿ ಎತ್ತರ ಇದೆ. ದೇವಾಲಯದ ಒಳಗೆ ಪ್ರವೇಶಿಸುತ್ತಿದ್ದಂತೆ ನವರಂಗದ ಎಡಭಾಗದಲ್ಲಿ ಬೃಹತ್ ಗಾತ್ರದ ಹೆಜ್ಜೇನು ಕಟ್ಟಿದೆ. ಬಲಭಾಗದಲ್ಲಿ ಭಾರೀ ಗಾತ್ರದ ಹುತ್ತ ವಿಶಾಲವಾಗಿದೆ. ಹುತ್ತವನ್ನು ನೋಡಿದರೆ ಹಾವುಗಳ ಸಂಚಾರಕ್ಕೆ ಯೋಗ್ಯವಾದ ಸ್ಥಳವಾಗಿದೆ. ವರಾಂಡದ ಮೇಲ್ಭಾಗದಲ್ಲಿ ಗೋಪುರ ಹಾಗೂ ಶಿಲ್ಪಗಳಿವೆ. ಈ ಶಿಲ್ಪಗಳು ಮತ್ತು ಗೋಪುರ ಗಿಡ ಮರ ಬಳ್ಳಿಗಳಿಂದ ಸುತ್ತುವರಿದು ಅವನತಿಯ ಅಂಚಿನಲ್ಲಿದೆ. ಗೋಪುರ ಮತ್ತು ಶಿಲ್ಪಗಳನ್ನು ದೊಡ್ಡ ಇಟ್ಟಿಗೆ, ಗಾರೆ, ಮಣ್ಣು ಬಳಸಿ ನಿರ್ಮಿಸಲಾಗಿದೆ. ದೇವಾಲಯದ ಹತ್ತಿರ ಯಾವುದೇ ಶಾಸನಗಳಿಲ್ಲದಿರುವುದರಿಂದ ಖಚಿತವಾದ ಕಾಲಮಾನ ನಿರ್ಧರಿಸುವುದು ಕಷ್ಟಸಾಧ್ಯ.

ದೇವಾಲಯದ ಮೇಲೆ ಗರ್ಭಗುಡಿಯ ಹತ್ತಿರ ಬೃಹತ್ ಗಾತ್ರದ ಮರಗಳು, ಚಿಕ್ಕ ಪುಟ್ಟಮರಗಳು ಬೆಳೆದು ಇಡೀ ದೇವಾಲಯವೇ ಗಿಡಮರಗಳಿಂದ ಸುತ್ತುವರಿದಿದೆ. ಈ ದೇವಾಲಯವನ್ನು ಹೊರಭಾಗದಿಂದ ನೋಡಿದರೆ ಹಾಳು ದೇವಾಲಯದಂತೆ ಕಂಡುಬಂದರೂ ಒಳಭಾಗದಲ್ಲಿ ಪೂಜೆ ಪುನಸ್ಕಾರಗಳು ಇಂದಿಗೂ ನಡೆಯುತ್ತಿವೆ. ಇಂಥ ಬೃಹತ್ ದೇವಾಲಯವನ್ನು ಉಳಿಸುವ ಪ್ರಯತ್ನವನ್ನು ಗ್ರಾಮಸ್ಥರು ಮಾಡುತ್ತಿಲ್ಲ. ಇಂಥ ದೇವಾಲಯವನ್ನು ಕಾಲೇಜಿನ ಸ್ವಯಂ ಸೇವಕರಾದ ದಿನೇಶ್, ಎಂ.ಆರ್. ಮಂಜುನಾಥ, ಚಂದ್ರಶೇಖರ್,

ಕೀರ್ತಿಕುಮಾರ್, ಶಾಂತಕುಮಾರ್ ಮುಂತಾದವರೊಡನೆ ಕ್ಷೇತ್ರ ಕಾರ್ಯಮಾಡಿ ಗ್ರಾಮಸ್ಥರಲ್ಲಿ ಅರಿವು ಮೂಡಿಸುವ ಪ್ರಯತ್ನ ಕೈಗೊಳ್ಳಲಾಯಿತು.

ಇಂಥ ದೊಡ್ಡದೊಂದು ದೇವಾಲಯವನ್ನು ಹಿಂದಿನ ಯಾರೋ ರಾಜರು ಸಾಮ್ರಾಜ್ಯದ ಮತ್ತು ಜನರ ಹಿತದೃಷ್ಟಿಯಿಂದ ಕಟ್ಟಿದರು. ನಮ್ಮ ಹಿರಿಯರಿಂದ ಸಂಗ್ರಹಿಸಿದ ಹಣದಿಂದಲೇ ಕಟ್ಟಿಸಿದ ಇಂಥ ದೇವಾಲಯಗಳನ್ನು ಉಳಿಸಿಕೊಳ್ಳಲು ಪ್ರಯತ್ನಿಸದೇ, ಸ್ವಾರ್ಥಕ್ಕಾಗಿ ಆಧುನಿಕ ಜಗತ್ತಿನ ಸೋಗಿಗೆ ಸಿಲುಕಿದ್ದೇವೆ. ದೇವಾಲಯದ ಪಕ್ಕದಲ್ಲೇ ಬೃಹತ್ ಗಾತ್ರದ ಶಿಲ್ಪಗಳು, ದೇವಾಲಯಗಳು ಅವನತಿಯ ಅಂಚಿನಲ್ಲಿದ್ದರೂ, ದೇವಾಲಯಗಳನ್ನು ಕಟ್ಟಿಸುವ ನೆಪದಲ್ಲಿ ಇಂದು ಜನರ ಶೋಷಣೆ ಮಾಡಿ ಹೊಸ ದೇವಾಲಯಗಳನ್ನು ನಿರ್ಮಿಸುತ್ತಿರುವುದು ವಿಷಾದದ ಸಂಗತಿ. ಇನ್ನು ಮುಂದಾದರೂ ನಮ್ಮ ಯುವ ಜನರು, ಮುಖಂಡರು, ಸರ್ಕಾರಗಳು ಹಿಂದಿನ ಸಂಸ್ಕೃತಿಯತ್ತ ಗಮನ ಹರಿಸಿ ಗ್ರಾಮಗಳಲ್ಲಿರುವ ಪ್ರಾಚೀನ ದೇವಾಲಯಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಬೇಕಾಗಿದೆ. ಇಲ್ಲವಾದಲ್ಲಿ ಮುಂದಿನ ಪೀಳಿಗೆಗೆ ನಮ್ಮ ಸಂಸ್ಕೃತಿಯು ಹಿಂದೆ ಹೇಗಿತ್ತು ಎಂದು ತಿಳಿಸುವುದು ಕೇವಲ ದಾಖಲೆಗಳಲ್ಲಿ ಮಾತ್ರ ಸಾಧ್ಯವಾಗಬಹುದು.

ಜೊತೆಗೆ ಇದೇ ಜಾಗದಲ್ಲಿ ನವಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ಬೂದು ಬಣ್ಣದ, ಕೆಂಪು ಬಣ್ಣದ, ಕಪ್ಪು ಬಣ್ಣದ ಮಡಕೆ ತುಣುಕುಗಳು, ಅರೆಯುವ ಕಲ್ಲುಗಳು ಇತರೆ ಅವಶೇಷಗಳು ದೊರಕಿದವು. ಬೃಹತ್ ಶಿಲಾಯುಗ ಸಂಸ್ಕೃತಿಯ ಕೆಂಪುಬಣ್ಣದ, ಕೆಂಪು ಮತ್ತು ಕಪ್ಪು ಬಣ್ಣದ ಮಡಕೆ ಭಾಗಗಳು, ನೀರಿನ ಹೂಜಿಯ ಮೂತಿಗಳು, ಕಬ್ಬಿಣ ಕರಗಿಸಿದ ನಂತರ ಉಳಿಯುವ ಕಿಟ್ಟ, ಹಣತೆಯ (ದೀಪ) ಚೂರುಗಳು, ಹೂಜಿಯ ಹಿಡಿ, ಅಲಂಕಾರ ಮಾಡಿದ ಮಡಿಕೆ ಭಾಗಗಳು, ಬಳಪದ ಕಲ್ಲಿನ ತುಂಡುಗಳು, ಅಲಂಕಾರಿಕ ಸುಟ್ಟಮಣ್ಣಿನ ಶಿಲ್ಪ ಮುಂತಾದ ಅವಶೇಷಗಳು ಹೇರಳವಾಗಿ ದೊರಕಿವೆ. ಹಾಗೂ ಇತಿಹಾಸ ಆರಂಭಕಾಲದ ಇಟ್ಟಿಗೆಗಳು, ಮಣ್ಣಿನ ಮಡಕೆಯ ಅವಶೇಷಗಳು ಸಹ ದೊರಕಿವೆ.

ವಿಶೇಷವಾಗಿ ಈ ಸ್ಥಳದಲ್ಲಿ ಕಪ್ಪು ಹಾಗೂ ಕೆಂಪು ಬಣ್ಣದ 'ಭಂಗಿ ಸೇದುವ ಚುಟ್ಟಿ'ಗಳ ತುಂಡುಗಳು ದೊರಕಿವೆ. ಈ ಚುಟ್ಟಿಗಳು ನಯವಾಗಿರುವ, ಒರಟಾಗಿರುವ, ಗಾಜಿನಂತೆ ಹೊಳೆಯುವ, ವಿವಿಧ ಅಳತೆ, ಅಲಂಕಾರದಿಂದ ಕೂಡಿವೆ. ಇವುಗಳಲ್ಲಿ (1) 4 ಸೆಂ.ಮೀ.ಉದ್ದ, ಸುತ್ತಳತೆ 9 ಸೆಂ.ಮೀ., ರಂಧ್ರ 1 ಸೆಂ.ಮೀ. ಇರುವ ಒರಟಾಗಿರುವ ಕೆಂಪು ಬಣ್ಣದ ಚುಟ್ಟಿ ; (2) 2 ಸೆಂ.ಮೀ.ಉದ್ದ, 6 ಸೆಂ.ಮೀ. ಸುತ್ತಳತೆ, 1 ಸೆಂ.ಮೀ. ರಂಧ್ರವಿದ್ದು ನಯವಾಗಿ,

ಕಪ್ಪು ಬಣ್ಣದ, ಚಿಕ್ಕ, ಉದ್ದನೆಯ ಗೆರೆಗಳಿಂದ ಅಲಂಕಾರಿಕವಾಗಿದೆ ; (3) 2 ಸೆಂ.ಮೀ. ಉದ್ದ, 1¾ ಸೆಂ.ಮೀ. ಸುತ್ತಳತೆ ರಂಧ್ರ, 1¾ ಸೆಂ.ಮೀ ಉದ್ದ, 1¾ ಸೆಂ.ಮೀ.ನ ಕಪ್ಪುಬಣ್ಣದ್ದಾಗಿದೆ; (5) ಉದ್ದ 4 ಸೆಂ.ಮೀ. ಸುತ್ತಳತೆ 8 ಸೆಂ.ಮೀ. ರಂಧ್ರ 1 ಸೆಂ.ಮೀ. ಈ ರೀತಿ ವಿವಿಧ ನಮೂನೆಯ, ಅಳತೆಯ, ಬಣ್ಣಗಳ, ಚುಟ್ಟಾದ 25 ಭಾಗಗಳು ದೊರಕಿವೆ.

ಇಂಥ ಚುಟ್ಟದ ಭಾಗಗಳು ತಲಕಾಡು ಉತ್ಖನನದಲ್ಲಿ ಹಾಗೂ ನನ್ನ ಮೈಸೂರು ನಗರದ ಬೋಗಾದಿಯ ನಾಗಲಿಂಗೇಶ್ವರ ದೇವಾಲಯದ ಮುಂಭಾಗದ ನೆಲೆಯುಲ್ಲಿ ನಡೆಸಿದ ಕ್ಷೇತ್ರಕಾರ್ಯದಲ್ಲಿ ದೊರಕಿವೆ. ಚುಟ್ಟಗಳು ಹೆಚ್ಚಾಗಿ ದೊರಕುತ್ತಿರುವುದರಿಂದ ಈ ಸ್ಥಳವು ಹಿಂದೆ ಧಾರ್ಮಿಕ ಕೇಂದ್ರವಾಗಿತ್ತೆಂದು, ಧಾರ್ಮಿಕ ಮುಖಂಡರು ಇದರ ಸುತ್ತಮುತ್ತ ನೆಲೆಸಿರುವ ಸಾಧ್ಯತೆಯಿದೆ ಎಂದು ಹೇಳಬಹುದು. ಚುಟ್ಟಗಳು ಹೆಚ್ಚಾಗಿ ದೊರಕಿರುವುದರಿಂದ ಈ ಗ್ರಾಮ ಚುಟ್ಟಗಳನ್ನು ತಯಾರಿಸುವ ಕೇಂದ್ರವಾಗಿತ್ತೆಂದು ಊಹಿಸಬಹುದು.

ಇದೇ ಸ್ಥಳದಲ್ಲಿ 4 ಹಣತೆಯ (ದೀಪ) ಭಾಗಗಳು ದೊರಕಿದ್ದು ಸುತ್ತಳತೆ 13 ಸೆಂ.ಮೀ., ಆಳ 1 ಸೆಂ.ಮೀ., ದಪ್ಪ 1 ಸೆಂ.ಮೀ. ಇದೆ. ಇನ್ನೊಂದು ದೊಡ್ಡ ದೀಪವಿದ್ದು ಅದು ಮುರಿದು ಹೋಗಿದೆ. ಹಾಗೂ 2 ಬಳಪದ ಕಲ್ಲಿನ ಭಾಗಗಳು ದೊರಕಿವೆ. ಜೊತೆಗೆ 26 ಸೆಂ.ಮೀ. ಉದ್ದ, 16 ಸೆಂ.ಮೀ. ಅಗಲ, 5 ಸೆಂ.ಮೀ. ದಪ್ಪವಿರುವ ಸುಟ್ಟಮಣ್ಣಿನ ಇಟ್ಟಿಗೆಗಳು ಹೇರಳವಾಗಿ ದೊರಕಿವೆ. ಇಂಥ ಇಟ್ಟಿಗೆಗಳಿರುವ ಸುಟ್ಟಮಣ್ಣಿನ ಇಟ್ಟಿಗೆಗೋಡೆ ಭೂಮಿಯ ಒಳಗಡೆ ಇದೆ, ಉಳುವಾಗ ಕೆಲವೊಮ್ಮೆ ಮೇಲಕ್ಕೆ ಬರುತ್ತವೆ, ವಿವಿಧ ನಮೂನೆಯ ಮಣಿಗಳು ಸಹ ದೊರಕುತ್ತವೆ ಎಂದು ಗ್ರಾಮದ ಮುಖಂಡ ಶ್ರೀ ಲಿಂಗರಾಜು ಅವರು ಅಭಿಪ್ರಾಯಪಟ್ಟರು.

ಗ್ರಾಮದ ಪ್ರಾಚೀನ ನೆಲೆ ಮತ್ತು ಅವಶೇಷಗಳು ಹಾಗೂ ದೇವಾಲಯ ಮತ್ತು ಮೂರ್ತಿಶಿಲ್ಪಗಳು ಅವನತಿಯ ಅಂಚಿಗೆ ಸರಿಯುತ್ತಿವೆ. ಗ್ರಾಮಸ್ಥರು ಹಾಗೂ ಸಂಬಂಧಪಟ್ಟ ಇಲಾಖೆಯವರು ಇವುಗಳನ್ನು ಸಂರಕ್ಷಿಸಬೇಕಾಗಿದೆ.

❑

## ಗ್ರಂಥ ಪರಾಮರ್ಶೆ

# ಶ್ರೀಮತಿ ಲಕ್ಷ್ಮಿ ಸುದರ್ಶನ್‌ರವರ "ಮೌನವಾಗುವ ಮಾತುಗಳು"

**ಕೆ. ಸುಷ್ಮ**
ನಂ. 61, 'ಶಂಕರ ನಿಲಯ', ಹೊಯ್ಸಳ ನಗರ, ಮೈಸೂರು

ಶ್ರೀಮತಿ ಲಕ್ಷ್ಮಿ ಸುದರ್ಶನ್‌ರವರ "ಮೌನವಾಗುವ ಮಾತುಗಳು" ಷಟ್‌ಸ್ಥಲದಲ್ಲಿ ವರ್ಗೀಕರಿಸಲಾದ ಅಕ್ಕಮಹಾದೇವಿಯ 108 ವಚಗಳ ವಿಶ್ಲೇಷಣೆ. ಇದು ಉತ್ತಮ ಕೃತಿಯಾಗಿದೆ. ಅಕ್ಕಮಹಾದೇವಿಯ ವಚನಗಳಲ್ಲಿ ವ್ಯಕ್ತವಾಗಿರುವ ಅಳಲು, ದುಃಖ, ಶಾಂತ, ವಿರಕ್ತಿ, ಆನಂದದ ತೀವ್ರತೆಯ ಹಿನ್ನೆಲೆಯಲ್ಲಿ ಕಂಡಿದ್ದಾರೆ. ಈ ಕೃತಿಯಲ್ಲಿ ನೀಡಲಾಗಿರುವ ಮನೋಜ್ಞ ವ್ಯಾಖ್ಯಾನದ ಜೊತೆಗೆ ಷಟ್‌ಸ್ಥಲದಲ್ಲಿನ ಭಕ್ತಿಯ ನಿರರ್ಗಳ ಮತ್ತು ಸರಳ ವಿವರಣೆಯೂ "ಮಾತುಗಳನ್ನು ಮೌನವಾಗಿಸುವಲ್ಲಿ" ಸಮರ್ಥವಾಗಿದೆ.

ಕರ್ನಾಟಕದಲ್ಲಿ ಜನಿಸಿದ ಶಿವಭಕ್ತೆ ಮಹಾದೇವಿಯವರು ತಮಗೆ ದೊರೆತ ಭವಜೀವನವನ್ನು ತೊರೆದು ಶಿವನನ್ನೇ ತನ್ನ ಪತಿಯೆಂದು ಸ್ವೀಕರಿಸಿದರು. ಭಕ್ತಿಹಾದಿಯಲ್ಲಿ ಪಯಣಿಸಿ ಅಂತರಂಗದ ಶಿವನನ್ನು ಅರಿತು ಅವನಲ್ಲಿ ತನ್ನನ್ನು ಐಕ್ಯ ಮಾಡಿಕೊಂಡವರು. ಇವರು ಹಾಡಿದ ವಚನಗಳು ಭಕ್ತಿದಾರಿ ತೋರುವ ಶ್ರೇಷ್ಠ ವಚನಗಳಾಗಿವೆ.

ಈ ಕೃತಿಯ ತಮಿಳು ಅನುವಾದವೂ ಶ್ರೀಮತಿ ಲಕ್ಷ್ಮಿರವರ ಲೇಖನಿಯಿಂದಲೇ ಮೂಡಿಬಂದಿರುವುದು ಒಂದು ವಿಶೇಷ. ಈ ಎರಡೂ ಕೃತಿಗಳು ಸರಳವಾಗಿ ಮತ್ತು ಅರ್ಥಪೂರ್ಣವಾಗಿ ಅಕ್ಕನ ವಚನಗಳಲ್ಲಿ ಶ್ರೇಷ್ಠತೆಯನ್ನು ಬಿಂಬಿಸುವ ಅಪೂರ್ವ ಕೃತಿಗಳಾಗಿ ಹೊರಹೊಮ್ಮಿದೆ ಎಂದು ಹೇಳಬಹುದು.

❑

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

**ಗುರು ಜಗತ್ತಿಗೆ ಜ್ಞಾನಮಾರ್ಗ ತೋರಿಸಿಕೊಟ್ಟ ಚೈತನ್ಯಶಕ್ತಿ**

ಗುರು ಜಗತ್ತಿಗೆ ಜ್ಞಾನಮಾರ್ಗವನ್ನು ತೋರಿಸಿಕೊಟ್ಟ ಮಹಾನ್ ಚೈತನ್ಯಶಕ್ತಿ ಎಂದು ವಿಜಯವಾಣಿ ದಿನಪತ್ರಿಕೆ ಮೈಸೂರು ಆವೃತ್ತಿ ಉಪಸಂಪಾದಕರಾದ ಶ್ರೀ ಎ.ಆರ್. ರಘುರಾಮ್‌ರವರು ಜುಲೈ 21ರಂದು ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಗುರುಪೂರ್ಣಿಮಾ ಹಾಗೂ 269ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡುತ್ತಾ ತಿಳಿಸಿದರು.

ಗುರುಪೂರ್ಣಿಮೆ ಎಂದರೆ ಗುರುಗಳನ್ನು ಸ್ಮರಿಸುವ ದಿನ. ಇದನ್ನು ವ್ಯಾಸಪೂರ್ಣಿಮೆ ಎಂದೂ ಕರೆಯುತ್ತಾರೆ. ಎಲ್ಲ ಧರ್ಮಗಳಲ್ಲೂ ಗುರುವಿನ ಸ್ಥಾನ ಅತ್ಯಂತ ಉನ್ನತವಾದುದು. ಗುರು ಎಂದರೆ ಅಂಧಕಾರವನ್ನು ನಿವಾರಿಸುವವನು. ಗುರುವಾದವನು ಸೂಚಕನಾಗಿ, ವಾಚಕನಾಗಿ, ದರ್ಶಕನಾಗಿ, ಶಿಕ್ಷಕನಾಗಿ, ಬೋಧಕನಾಗಿ ನಮ್ಮನ್ನು ಜ್ಞಾನಮಾರ್ಗದಲ್ಲಿ ಕರೆದೊಯ್ಯುತ್ತಾನೆ. 'ವರ್ಣಮಾತ್ರಂ ಕಲಿಸಿದಾತಂ ಗುರು' ಎಂಬ ಮಾತಿನಂತೆ ಸಹಸ್ರಾರು ಜನ ಗುರುಗಳು ನಮ್ಮೆಲ್ಲರ ಜೀವನಕ್ಕೆ ದಾರಿದೀಪವಾಗಿದ್ದಾರೆ. ಇಂಥ ಜ್ಞಾನಮಾರ್ಗವನ್ನು ಜಗತ್ತಿಗೆ ತೋರಿಸಿಕೊಟ್ಟಿದ್ದು ಭಾರತೀಯ ಭವ್ಯ ಪರಂಪರೆ. ಮೌಲ್ಯಗಳನ್ನರಿತು ಯುವಜನರು ಜಾಗೃತರಾಗಬೇಕು. ನಡೆನುಡಿಗಳಲ್ಲಿ, ಆಚಾರ ವಿಚಾರಗಳಲ್ಲಿ, ಮಾತುಕತೆಯಲ್ಲಿ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಗುರುಹಿರಿಯರಿಗೆ ಪ್ರೀತಿಗೌರವ ನೀಡುವುದು ದಿನಚರಿಯ ಭಾಗವಾಗಬೇಕು ಎಂದು ಹೇಳಿದರು.

ವಿದುಷಿ ಹರಿಣಿ ರಮೇಶ್ ಗಾಯನ ಪ್ರಸ್ತುತಿ ಪಡಿಸಿದರು. ವಿದ್ವಾನ್ ಕೇಶವ ಮೋಹನ್‌ಕುಮಾರ್, ವಿದ್ವಾನ್ ಎ. ರಾಧೇಶ್ ಮತ್ತು ವಿದ್ವಾನ್ ಎಸ್. ಮಂಜುನಾಥ್‌ರವರು ಪಕ್ಕವಾದ್ಯ ಸಹಕಾರ ನೀಡಿದರು. ಕಾರ್ಯಕ್ರಮದಲ್ಲಿ ಆಧ್ಯಾತ್ಮಿಕ ಜಿಜ್ಞಾಸುಗಳು, ಸಾರ್ವಜನಿಕರು, ಶ್ರೀಮಠದ ಗುರುಕುಲದ ಸಾಧಕರು ಹಾಗೂ ಸಿಬ್ಬಂದಿವರ್ಗದವರು ಪಾಲ್ಗೊಂಡಿದ್ದರು.

❑



**ಮಹಾಶಿವಯೋಗಿ ಶ್ರೀ ಉದ್ದಾನ ಯತೀಶ್ವರರು**
ಶ್ರೀ ಎಂ. ಬಾಲಚಂದ್ರ
ಪ್ರ: ಪವಾಡಶ್ರೀ ಪ್ರಕಾಶನ
ಪವಾಡ ಶ್ರೀ ಬಸವಣ್ಣದೇವರ ಮಠ
ನೆಲಮಂಗಲ ತಾ., ಬೆಂಗಳೂರು
ಪು: 456, ಬೆಲೆ: 400/–

**ಶ್ರೀ ಶಿವಸಹಸ್ರನಾಮ ಸ್ತೋತ್ರ**
ಶ್ರೀ ಎಂ. ಬಾಲಚಂದ್ರ
ಪ್ರ: ಪವಾಡಶ್ರೀ ಪ್ರಕಾಶನ
ಪವಾಡ ಶ್ರೀ ಬಸವಣ್ಣದೇವರ ಮಠ
ನೆಲಮಂಗಲ ತಾ., ಬೆಂಗಳೂರು
ಪು: 248, ಬೆಲೆ: 200/–

**ಶಿವಮಹಿಮೋಜ್ವಲ ಶ್ರೀ ಉದ್ದಾನೇಶ**
ಶ್ರೀ ದೊ.ಬ. ಮೃತ್ಯುಂಜಯಪ್ಪ (ಜಂಯಣ್ಣ)
ಪ್ರ: ಪ್ರಭು ಪ್ರಕಾಶನ
ಬಸವಕುಟೀರ, ದೊಡ್ಡಸಾರಂಗಿ
ತುಮಕೂರು
ಪು: 120, ಬೆಲೆ: 150/–

**ಮುಪ್ಪಿಗೆ ನೆನಪೇ ಸಂಜೀವಿನಿ**
ಶ್ರೀ ಎಸ್. ರಾಮಪ್ರಸಾದ್
ಪ್ರ: ಸಂವಹನ ಪ್ರಕಾಶನ
ಶಿವರಾಂಪೇಟೆ, ಮೈಸೂರು
ಪು: 236, ಬೆಲೆ: 240/–

**ಲಿಂಗಾಯತ ಧರ್ಮ**
ಡಾ. ಬಸವರಾಜ ಸಬರದ
ಪ್ರ: ಪಲ್ಲವಿ ಪ್ರಕಾಶನ, ಕಲಬುರಗಿ
ಪು: 338, ಬೆಲೆ: 150/–

**ರಾಮಪ್ರಭೆ (ಎಂಬತ್ತರ ಅಕ್ಷರಾಭಿನಂದನ)**
ಶ್ರೀ ರಂಗನಾಥ್ ಮೈಸೂರು
ಪ್ರ: ಸುಶ್ಮಿತಾ ಪ್ರಕಾಶನ
ಜೆ.ಪಿ.ನಗರ, ಮೈಸೂರು
ಪು: 284, ಬೆಲೆ: 350/–

**ಸಾವಯವ ಸಂಗಾತ**
ಡಾ. ಸಿದ್ಧಗಂಗಯ್ಯ ಹೊಲತಾಳು
ಪ್ರ: ಅಕ್ಷಯಕಲ್ಪ ಆರ್ಗ್ಯಾನಿಕ್
ಶಾರದಾನಗರ, ತಿಪಟೂರು
ಪು: 560, ಬೆಲೆ: 500/–

**ಸಾಹಿತ್ಯ ಸಾನ್ನಿಹಿತ್ಯ**
**(ಗ್ರಂಥಸಮೀಕ್ಷಾ ಪ್ರಬಂಧಗಳು)**
ಶ್ರೀ ಎಸ್.ಆರ್. ರಾಮಸ್ವಾಮಿ
ಪ್ರ: ರಾಷ್ಟ್ರೋತ್ಥಾನ ಸಾಹಿತ್ಯ
ಕೆಂಪೇಗೌಡನಗರ, ಬೆಂಗಳೂರು
ಪು: 182, ಬೆಲೆ: 200/–

**ಜ್ಞಾನಯೋಗಿ**
**(ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿ ಕಾವ್ಯಾಮೃತ)**
ಡಾ. ಪ್ರದೀಪಕುಮಾರ ಹೆಬ್ರಿ
ಪ್ರ: ತಾರಾ ಪುಸ್ತಕ
ಪೋರ್ಟ್ ಮೊಹಲ್ಲಾ, ಮೈಸೂರು
ಪು: 548, ಬೆಲೆ: 650/–

**ಪಾಂಚಾಲಿಯ ಭಾವಾಗ್ನಿ (ಮಹಾಕಾವ್ಯ)**
ಭಾಗ್ಯ ಕೃಷ್ಣಮೂರ್ತಿ
ಪ್ರ: ಸಪ್ನಬುಕ್‌ಹೌಸ್
ಗಾಂಧಿನಗರ, ಬೆಂಗಳೂರು
ಪು: 151, ಬೆಲೆ: 150/–

**ಲೋಕ ಜಂಗಮ (ಜಗದ್ಗುರು ಡಾ. ತೋಂಟದ ಸಿದ್ಧಲಿಂಗ ಸ್ವಾಮಿಗಳ ಸ್ಮರಣೆ)**
ಶ್ರೀ ಪ್ರಕಾಶ್ ಗಿರಿಮಲ್ಲನವರ
ಪ್ರ: ಪೂಜ್ಯ ಡಾ. ತೋಂಟದ
ಸಿದ್ಧಲಿಂಗ ಸ್ವಾಮೀಜಿ ಶಿಷ್ಯ ಬಳಗ
ಡಂಬಳ–ಗದಗ–ಚಿಕ್ಕಪಡಸಲಗಿ
ಪು: 136, ಬೆಲೆ: 150/–

# ಲೇಖಕರ ವಿಳಾಸ

**ಡಾ. ಎಂ.ಎಸ್. ನಂದೀಶ್ ಹಂಚೆ**
# 217, 6ನೇ ಕ್ರಾಸ್
ಲಲಿತಮಹಲ್ ನಗರ
ಮೈಸೂರು 570028
ಮೊ: 9008815888

**ಡಾ. ಬಿ. ನಂಜುಂಡಸ್ವಾಮಿ**
ಪಂಡಿತ ತಾರಾನಾಥ ಆಯುರ್ವೇದ
ಚಿಕಿತ್ಸಾಲಯ, ಬಿ.ಹೆಚ್. ರಸ್ತೆ
ತುಮಕೂರು 572 102
ಮೊ: 9880996196

**ಡಾ. ಎಸ್.ಎಂ. ಗಿರಿಜಾಪತಿ**
#1249, ಭೈರವೇಶ್ವರ ನಿಲಯ
ಮೊದಲ ಮಹಡಿ
1ನೇ ಮುಖ್ಯ ರಸ್ತೆ
ವಿನಾಯಕ ನರ್ಸಿಂಗ್ ಹೋಂ ಹತ್ತಿರ
ಕೃಷ್ಣಮೂರ್ತಿಪುರಂ
ಮೈಸೂರು 570 004
ಮೊ.: 9844582238

**ಶ್ರೀ ನಗರ್ಲೆ ಶಿವಕುಮಾರ**
ನಗರ್ಲೆ ಗ್ರಾಮ ಮತ್ತು ಅಂಚೆ
ನಂಜನಗೂಡು ತಾ.
ಮೈಸೂರು ಜಿಲ್ಲೆ
ಮೊ: 9845609652

**ಡಾ. ವಿ.ಎಚ್. ಮೂಲಿಮನಿ**
ನಿವೃತ್ತ ಪ್ರಾಧ್ಯಾಪಕರು
ಪ್ಲಾಟ್ ನಂ.2, 'ಸಮೃದ್ಧ ನಿಲಯ'
ಸಾಯಿನಗರ
(ಸಾಯಿನಗರ ದೇವಸ್ಥಾನದ ಹತ್ತಿರ)
ಮುಧೋಳ 587313
ಬಾಗಲಕೋಟೆ ಜಿಲ್ಲೆ
ಮೊ: 9986383472

**ಡಾ. ಎಸ್.ಜಿ. ರಾಮದಾಸ ರೆಡ್ಡಿ**
ಇತಿಹಾಸ ಪ್ರಾಧ್ಯಾಪಕರು
ಎಚ್.ಐ.ಜಿ. 32, ಗ್ರೂಪ್–1
ಕೆ.ಎಚ್.ಬಿ. ಕಾಲೋನಿ
ಹೂಟಗಳ್ಳಿ
ಮೈಸೂರು 570018
ಮೊ: 9845309081

**ಶ್ರೀ ಎಚ್.ಎಸ್. ಸಿದ್ಧಗಂಗಪ್ಪ**
ನಂ. 1617, 'ಮಾತೃಶ್ರೀ'
ಸರ್ ಎಂ. ವಿಶ್ವೇಶ್ವರಯ್ಯ
ಮುಂದುವರೆದ ಬಡಾವಣೆ
8ನೇ ಬ್ಲಾಕ್, ಸ್ಫೂರ್ತಿಧಾಮದ ಎದುರು
ಮುದ್ದಿನಪಾಳ್ಯ ಮುಖ್ಯ ರಸ್ತೆ
ಬೆಂಗಳೂರು 560091
ಮೊ: 9845565871

**ಹಿಂಬದಿ ಪುಟದ ಚಿತ್ರ**

ಬೆಂಗಳೂರು ಶ್ರೀ ಅಲ್ಲಮ ಆತ್ಮಜ್ಞಾನ ಮಂಟಪದಲ್ಲಿ ಕರ್ನಾಟಕ ಶರಣ ವಕೀಲರ ವೇದಿಕೆಯಿಂದ ಆಯೋಜಿಸಿದ್ದ ವಾರ್ಷಿಕೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಗೌ.ನ್ಯಾ. ಶ್ರೀ ಅಶೋಕ್ ನಿಜಗಣ್ಣನವರ್, ಗೌ.ನ್ಯಾ. ಶ್ರೀ ಎಸ್.ಆರ್. ಬನ್ನೂರಮಠ್, ಗೌ.ನ್ಯಾ. ಶ್ರೀ ಸುಭಾಷ್ ಬಿ. ಅಡಿ, ಶ್ರೀ ಹೆಚ್.ಎಸ್. ಚಂದ್ರಮೌಳಿ, ಶ್ರೀ ಶಿವಶಂಕರಪ್ಪ ಸಾಹುಕಾರ್ ಮತ್ತು ಶ್ರೀ ಚಂದ್ರಶೇಖರ್ ಸಿ. ಚಿನಾಸೂರ್ ಮೊದಲಾದರವರುಗಳಿದ್ದಾರೆ (28 ಜುಲೈ 2024)




ಮೈಸೂರು ಶ್ರೀ ಸುತ್ತೂರು ಮಠದಲ್ಲಿ ನಡೆದ ಗುರುಪೂರ್ಣಿಮಾ ಹಾಗೂ 269ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ಮೈಸೂರು ಆವೃತ್ತಿ ವಿಜಯವಾಣಿ ದಿನಪತ್ರಿಕೆ ಉಪಸಂಪಾದಕರಾದ ಶ್ರೀ ಎ.ಆರ್. ರಘುರಾಮ್‌ರವರು ಉಪನ್ಯಾಸ ನೀಡಿದರು. ವಿದುಷಿ ಹರಿಣಿ ರಮೇಶ್‌ರವರು ಗಾಯನ ಪ್ರಸ್ತುತಿಪಡಿಸಿದರು. ಪಕ್ಕವಾದ್ಯದಲ್ಲಿ ವಿದ್ವಾನ್ ಎ. ರಾಧೇಶ್, ವಿದ್ವಾನ್ ಎಸ್. ಮಂಜುನಾಥ್ ಮತ್ತು ವಿದ್ವಾನ್ ಕೇಶವ ಮೋಹನ್‌ಕುಮಾರ್‌ರವರುಗಳಿದ್ದಾರೆ. (21 ಜುಲೈ 2024)

Registered with the Registrar of Newspapers in India Under No. 50622 / 1986
'Prasada' Monthly, Vol. 39 Issue No. 7, July 2024



ISSN 2583-7648

ಬಿಡಿ ಪ್ರತಿ : ರೂ.10/-

e-mail: prasada@jssonline.org • www.jssonline.org